ಸಂಪುಟ 24 ಸಂಚಿಕೆ 34-35
ಸೆಪ್ಟೆಂಬರ್ 1, 2002 ಬೆಲೆ ರೂ. 3.00


ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ


http:// www.geocities.com/aikyaranga




ಶಿಕ್ಷಣದ ಅವ್ಯವಸ್ಥೆ ಮತ್ತು ಟ್ಯೂಷನ್ ಪಿಡುಗು




ಸೈಕಿಕ್ ಸರ್ಜರಿ ಎಂಬ ವಂಚನೆ




ಗಂಗಾವತಿ : ದೇವದಾಸಿಯರ ಭೂಮಿ ನುಂಗುವ ಭೂಮಾಲೀಕರು





ಇರಾಕ್ ಮೇಲೆ ಅಮೆರಿಕಾ ಆಕ್ರಮಣ ನಿಲ್ಲಲಿ



ಏನು ಜಾದೂ ಮಾಡಿದ್ದೀರಯ್ಯಾ ನೀವು ಕಮ್ಯುನಿಸ್ಟರು

ಸಿ.ಎನ್.ಕಮ್ಯುನಿಸ್ಟನಾದದ್ದು - 7

1990 ರ ಐಕ್ಯರಂಗದಲ್ಲಿ ಪ್ರಕಟವಾದ ಲೇಖನವನ್ನು ಮತ್ತೆ ಪ್ರಕಟಿಸಲಾಗಿದೆ

ಪ್ರೌಢಶಾಲೆಯಿಂದ ಹಿಡಿದು, ಕಾಲೇಜು ಮತ್ತು ಹಾಸ್ಟೇಲುಗಳಲ್ಲಿ ವಾರ್ಷಿಕೋತ್ಸವ ಗಳ ಸಂದರ್ಭಗಳಲ್ಲಿ ನಾನು ನಾಟಕಗಳಲ್ಲಿ ಪಾತ್ರ ವಹಿಸುತ್ತಿದ್ದೆ. ನನಗೆ ಒಬ್ಬ ಸಾಮಾನ್ಯ ಮನುಷ್ಯನಿಗೆ ಬರುವುದಕ್ಕಿಂತಲೂ ಹೆಚ್ಚು ಬೆವರು ಬರುತ್ತಿದ್ದರಿಂದ 'ಮೇಕಪ್' ನಿಲ್ಲುತ್ತಿರಲಿಲ್ಲ. ಈ ಕಾರಣದಿಂದಾಗಿ ರಂಗಭೂಮಿಯ ವಿಚಾರವನ್ನು ನಾನು ಕೈ ಬಿಡಬೇಕಾಯಿತು.

ಇನ್ನು ಉಳಿದಿದ್ದುದು ಶಿಕ್ಷಣರಂಗ ಮತ್ತು ಪ್ರಸಾರ ಮಾಧ್ಯಮ. ಆದರೆ ದೂರಸಂಪರ್ಕ ಸೇವೆಯಲ್ಲಿ ಕಾರ್ಮಿಕ ಸಂಘಟನೆಗೆ ಕೈ ಹಾಕಿದ ನಂತರ ಅದು ನನನ್ನು ಎಳೆದುಕೊಂಡು ಹೋಗುತ್ತಿರುವಂತೆ ನನಗೆ ಅನ್ನಿಸಲಾರಂಭಿಸಿತು. ನಾನು ಶಾಖೆ, ವಿಭಾಗ, ವಲಯಮಟ್ಟಗಳಲ್ಲಿ ಯಾವುದೇ ಹುದ್ದೆಯನ್ನು ವಹಿಸಿಕೊಳ್ಳಲು ಒಪ್ಪದಿದ್ದರೂ ಸಂಘಟನೆಯ ಕೆಲಸದ ದೊಡ್ಡ ಭಾರ ನನ್ನ ಮೇಲೆ ಬಿದ್ದಿತು.

1963ರ ಆಗಸ್ಟ್‌ನಲ್ಲಿ ಸಿಪಿಐ ಜನತೆಯ ಬೇಡಿಕೆಗಳಿಗಾಗಿ ಸಂಸತ್ತಿಗೆ 'ಗ್ರೇಟ್ ಮಾರ್ಚ್' ನಡೆಸಿತು. ಅಲ್ಲಿ ಡಾಂಗೆ, ಎ.ಕೆ. ಗೋಪಾಲನ್ ರವರಿಗೆ ಭಾಷಣ ಮಾಡಲು ಬಿಡದಿದ್ದುದು ತಿಳಿದು ಬಂದಿತು.

ಅದೇ ತಿಂಗಳಲ್ಲಿ ದೂರಸಂಪರ್ಕ ನೌಕರರ ಸಂಘದ ವಲಯ ಸಮ್ಮೇಳನ ದಾವಣಗೆರೆಯಲ್ಲಿ ನಡೆಯಿತು. ಅಲ್ಲಿ ನನಗೆ ಈ ಸಂಘಟನೆಯ ಮಂಗಳೂರು ವಿಭಾಗದ ಮುಖಂಡರ ಪರಿಚಯವಾಯಿತು. ರಾಜ್ಯದ ಇತರ ವಿಭಾಗಗಳ ಮುಖಂಡರ ಪರಿಚಯ ಆ ಮೊದಲೇ ಆಗಿದ್ದಿತು. ಈ ಸಮ್ಮೇಳನದಲ್ಲಿ ವಲಯ ಕಾರ್ಯದರ್ಶಿ ಬದಲಾದರು. ಮುಂದಿನ ವರ್ಷ ವಲಯ ಸಮ್ಮೇಳನವನ್ನು ಹುಬ್ಬಳ್ಳಿಯಲ್ಲಿ ನಡೆಸುವುದು ಎಂದಾಯಿತು.

ಸಿಪಿಎಸ್‌ಯು ಕೇಂದ್ರ ಸಮಿತಿಯು ಚೀನದ ಕಮ್ಯುನಿಸ್ಟ್ ಪಕ್ಷಕ್ಕೆ, ಚೀನದ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಸಿಪಿಎಸ್‌ಯುಗೆ ಬರೆದ ಪತ್ರಗಳು ಪ್ರಕಟವಾದವು. ಬೇರೆ ಬೇರೆ ದೇಶಗಳ ಕಮ್ಯುನಿಸ್ಟ್ ಪಕ್ಷಗಳ ಹೇಳಿಕೆಗಳನ್ನು 'ದ ಗ್ರೇಟ್ ಡಿಬೇಟ್' ಮಾಲಿಕೆಯ ಸರಣಿಯಲ್ಲಿ ಎರಡು ಕಿರುಹೊತ್ತಿಗೆಗಳನ್ನಾಗಿ ಪ್ರಕಟಿಸಿತು. ಇವುಗಳ ಪೈಕಿ 'ಎ ಮಿರರ್ ಫಾರ್ ರಿವಿಜನಿಸ್ಟ್' (ಪರಿಷ್ಕರಣ ವಾದಿಗಳಿಗೊಂದು ಕನ್ನಡಿ) ಎಂಬ ಚೀನದ 'ಪೀಪಲ್ಸ್ ಡೇಲಿ'ಯ ಲೇಖನದಲ್ಲಿ ಎಸ್.ಎ. ಡಾಂಗೆ ಮತ್ತು ಸಂಗಡಿಗರ ಪರಿಷ್ಕರಣವಾದಿ ನೀತಿಯ ಕಟು ಟೀಕೆ ಇದ್ದಿತು. ಇವುಗಳನ್ನೆಲ್ಲಾ ಓದಿ ನನಗೆ ವಿಪರೀತ ಚಿಂತೆಯಾಯಿತು. ನಿದ್ದೆ ಬರುವುದು ಕಡಿಮೆಯಾಯಿತು.

ಸೋವಿಯತ್ ಒಕ್ಕೂಟ ಮತ್ತು ಚೀನಾ ಸೇರಿದಂತೆ ಎಲ್ಲಾ ಸಮಾಜವಾದಿ ದೇಶಗಳು ಸಾಮ್ರಾಜ್ಯಶಾಹಿಗಳ ವಿರುದ್ಧ ಒಂದಾಗಿ ಹೋರಾಡಬೇಕು. ಸೋವಿಯತ್ ಒಕ್ಕೂಟ ಚೀನಾ ಮತ್ತು ಭಾರತದ ಜನತೆ ಒಂದಾಗಿ ವಿರೋಧಿಸ ಬೇಕು. ಆದರೆ ಸಿಪಿಎಸ್‌ಯು ಸಿಪಿಸಿಗಳ ನಡುವೆ ಅಭಿಪ್ರಾಯ ಬೇದ, ಭಾರತ ಚೀನಾಗಳ ನಡುವೆ ಗಡಿವಿವಾದ, ಸಿಪಿಐ ನಾಯಕತ್ವ ಕಾಂಗ್ರೆಸ್‌ಪರ. ಹೀಗಿರುವಾಗ ನನ್ನ ಗುರಿಸಾಧನೆಯಲ್ಲಿ ಪ್ರಗತಿಯು ಹೇಗೆ? ಆಗ ನನಗೆ 23-24 ವರ್ಷ ವಯಸ್ಸು. ಆಗ ಇವುಗಳ ಚಿಂತೆಯಿಂದಾಗಿ ಅನೇಕ ದಿವಸಗಳು ನಿದ್ರೆ ಬರಲಿಲ್ಲ. ಮಾತ್ರವಲ್ಲ ರಾತ್ರಿ ಈ ಪರಿಸ್ಥಿತಿ ಯಲ್ಲಿ ನಾನು ಪರಿಣಾಮಕಾರಿಯಾಗಿ ಏನನ್ನೂ ಮಾಡುವ ಸ್ಥಿತಿಯಲ್ಲಿ ಇಲ್ಲವಲ್ಲಾ ಎಂಬ ಅಸಹಾಯಕತೆಯ ಭಾವನೆ ಬರುತ್ತಿತ್ತು. ಒಮ್ಮೊಮ್ಮೆ ಅಳು ಸಹ ಬರುತ್ತಿತ್ತು.

1963ರಲ್ಲಿ ನಾನು ಎಂ.ಕಾಂ. ಪರೀಕ್ಷೆಗೆ ಕುಳಿತುಕೊಳ್ಳಲು ಆಗಲಿಲ್ಲ.

1964ರಲ್ಲಿ ಬಹಳ ಮುಖ್ಯ ಘಟನೆಗಳು ಸಂಭವಿಸಿದವು. ವರ್ಷದ ಪ್ರಾರಂಭದಿಂದಲೇ ಹುಬ್ಬಳ್ಳಿಯಲ್ಲಿ ನಡೆಯಬೇಕಿದ್ದ ಸಮ್ಮೇಳನದ ಸ್ವಾಗತ ಸಮಿತಿಯು ಕೆಲಸ ಸ್ಮರಣ ಸಂಚಿಕೆಯನ್ನು ಮುದ್ರಿಸುವ ಕೆಲಸಗಳನ್ನು ಮಾಡಬೇಕಾಯಿತು. ಇತರರೂ ತಮ್ಮ ಕೆಲಸಗಳನ್ನು ಮಾಡುವಂತೆ ನೋಡಿಕೊಳ್ಳಬೇಕಾಯಿತು. ಸಮ್ಮೇಳನವು ಯಶಸ್ವಿಯೂ ಆಯಿತು. ನನ್ನ ಸಂಪರ್ಕವೂ ವ್ಯಾಪಕವಾಗಿ ಬೆಳೆಯಿತು. ಈ ವೇಳೆಗೆ ನನ್ನ ಸಹೋದ್ಯೋಗಿಗಳಲ್ಲಿ ಇಬ್ಬರು ನನ್ನಂತೆ ನಮ್ಮ ಕಣ್ಣೋಟದಿಂದ ಕೆಲಸ ಮಾಡಲು ಬೆಳೆದು ಬಂದರು. ಇದು ನನ್ನ ಎರಡೂವರೆ ವರ್ಷಗಳ ದುಡಿಮೆಯ ಫಲ.

ಸಂಘದ ಕೇಂದ್ರದ ಕರೆಯ ಮೇರೆಗೆ ನನ್ನ ಸಹೋದ್ಯೋಗಿಗಳನ್ನು ಬೀದಿಗಿಳಿಸಲು ಸಾಧ್ಯ ವಾಯಿತು. 30,40ರ ಸಂಖ್ಯೆಯಲ್ಲಿ ಪ್ರಾರಂಭವಾದ ಮೆರವಣಿಗೆಗಳು ಕಾಲಕಳೆದಂತೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕ ನೌಕರರು ಪಾಲ್ಗೊಳ್ಳುವ ರೀತಿಯಲ್ಲಿ ಬೆಳೆದವು. ಮುಂದೆ 1966ರಿಂದ 1968 ರವರೆಗೆ ಹುಬ್ಬಳ್ಳಿಯಲ್ಲಿರುವ ರೈಲ್ವೆ ವರ್ಕ್‌ಶಾಪಿನ ಸಹಸ್ರಾರು ಕಾರ್ಮಿಕರೂ ಸೇರಿದಂತಹ ಕೇಂದ್ರ ಸರ್ಕಾರದ ಸಹಸ್ರಾರು ಕಾರ್ಮಿಕ ನೌಕರರು ನಡೆಸಿದ ಬೃಹತ್ ಮೆರವಣಿಗೆಗಳು ಪ್ರದರ್ಶನಗಳು, ಬಹಿರಂಗ ಸಭೆಗಳು 1964ರಲ್ಲಿ ಪ್ರಾರಂಭವಾದ ಕಾಮರ್ಸ್ ಕಾಲೇಜು ಸಮೀಪದಿಂದ ರೈಲು ನಿಲ್ದಾಣದವರೆಗೆ, ದುರ್ಗದ ಬಯಲಿನವರೆಗೆ ನಡೆಯುತ್ತಿದ್ದ ಚಿಕ್ಕ ಮೆರವಣಿಗೆಗಳು ನಾಂದಿ ಯಾದವು. ಅಂಚೆ ಮತ್ತು ಆರ್.ಎಸ್.ಎಸ್‌ನಲ್ಲಿದ್ದ ನೌಕರರ ಸಂಘಗಳೂ 1964ರ ವೇಳೆಗೆ ಕ್ರಿಯಾಶೀಲವಾಗಿದ್ದುವು.

1964ರ ಮೇ ಯಲ್ಲಿ ಭಾರತದ ಪ್ರಧಾನಿ, ಕಾಂಗ್ರೆಸ್ ಮುಂದಾಳು ಜವಹರಲಾಲ್ ನೆಹರು ಸತ್ತರು.

1964ರ ಏಪ್ರಿಲ್‌ನಲ್ಲಿ ಹಿಂದೆ ಭಾರತದಲ್ಲಿ ಬ್ರಿಟೀಷ್ ಆಡಳಿತ ಇದ್ದಾಗ ಎಸ್.ಎ.ಡಾಂಗೆ ಬ್ರಿಟೀಷ್ ಸರ್ಕಾರದ ಸೇವೆಯನ್ನು ಮಾಡುವುದಾಗಿ ಬರೆದ ಪತ್ರಗಳು ಬಹಿರಂಗವಾದುವು. ಡಾಂಗೆ ಈಗ ಕಮ್ಯುನಿಸ್ಟ್ ಆಗಿ ಉಳಿದಿಲ್ಲ. (Dange has ceased tobe Communist) ಎಂದು ಪಿ.ಸುಂದರಯ್ಯನವರು ಕೊಟ್ಟ ಹೇಳಿಕೆ ಪತ್ರಿಕೆಗಳಲ್ಲಿ ಬಂದಿತು. ಏಪ್ರಿಲ್‌ನಲ್ಲಿ ಸಿಪಿಐ ರಾಷ್ಟ್ರೀಯ ಮಂಡಳಿಯ ಸಭೆಯಲ್ಲಿ ಡಾಂಗೆ ಪತ್ರಗಳು ಚರ್ಚೆಗೆ ಬಂದು 32 ಸದಸ್ಯರು ಸಭಾತ್ಯಾಗ ಮಾಡಿದುದು, ಸಭಾತ್ಯಾಗದ ನಂತರ ಇ.ಎಂ.ಎಸ್, ಜ್ಯೋತಿ ಬಸು, ಭೂಪೇಶ್ ಗುಪ್ತ ಹೊಂದಾಣಿಕೆಗೆ ಪ್ರಯತ್ನ ಮಾಡಿದುದು, ಅನಂತರ ಸಭಾತ್ಯಾಗ ಮಾಡಿದ ಸದಸ್ಯರು ಸಿಪಿಐಯ ಏಳನೇ ಅಧಿವೇಶವನ್ನು ಕರೆಯುವುದಕ್ಕೆ ಸಿದ್ಧತೆಗಳನ್ನು ಮಾಡಲು ಜೂನ್ ತಿಂಗಳಲ್ಲಿ ತೆನಾಲಿಯಲ್ಲಿ ಒಂದು ಸಮಾವೇಶ ಕರೆಯುವ ತೀರ್ಮಾನ ಪ್ರಕಟಿಸಿದ ಸುದ್ದಿಗಳನ್ನು ಓದಿ ನನಗೆ ಹೊಸ ಜೀವ ಬಂದಾಂತಾಯಿತು. ಕುತೂಹಲದಿಂದ ತೆನಾಲಿ ಸಮಾವೇಶದ ಫಲಿತಾಂಶವನ್ನು ಕಾದೆ.

ಏಪ್ರಿಲ್‌ನಲ್ಲಿ ಧಾರವಾಡದಲ್ಲಿ ಗಂಗಣ್ಣನವರನ್ನು ಭೇಟಿಯಾದಾಗ ಅವರು ಇನ್ನೇನು ಸಿಪಿಐ ಒಡೆಯಿತು. ಮುಂದೆ ಸಿಪಿಐ ಸಮಾಧಿಯಾಗುತ್ತೆ ಎಂದರು. ನಾನು ಅವರ ಅಭಿಪ್ರಾಯವನ್ನು ಒಪ್ಪಲಿಲ್ಲ. ವರ್ಗ ಸಹಕಾರದ, ಪರಿಷ್ಕರಣವಾದದ ದಾರಿ ಹಿಡಿದಿರುವ ಮುಖಂಡತ್ವದ ವಿರುದ್ಧ ಹೋರಾಡಲು ಪಕ್ಷ ತಯಾರಾಗದಿದ್ದರೆ ಪಕ್ಷಕ್ಕೆ ಗೆದ್ದಲು ಹಿಡಿದು ಹೋಗುತ್ತೆ ಎಂದು ನಾನು ಹೇಳಿದೆ. ನೀವೇನು ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದೀರಾ? ಎಂದು ಅವರು ಕೇಳಿದರು. ಈವರೆಗೆ ಸದಸ್ಯನಾಗಿರಲಿಲ್ಲ. ಆದರೆ ಮುಂದೆ ಸದಸ್ಯನಾಗಬೇಕೇ, ಹೇಗೆ ಎನ್ನುವುದನ್ನು ಇನ್ನು ಒಂದು ವರ್ಷದಲ್ಲಿ ನಿರ್ಧರಿಸುತ್ತೇನೆ' ಎಂದೆ.

ನೆಹರು ಸತ್ತನಂತರ ಕೆಲವು ದಿವಸ ಗುಲ್ಜಾರಿಲಾಲ್ ನಂದಾ ಉಸ್ತುವಾರಿ ಪ್ರಧಾನಿ ಯಾಗಿ, ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಪ್ರಧಾನಿಯಾದರು.

ಈ ವರ್ಷ ನಾನು ಪರೀಕ್ಷೆಗೆ ಕೂತು ತೇರ್ಗಡೆ ಹೊಂದಿದೆ. ಕಲ್ಕತ್ತದಲ್ಲಿ ನಡೆದ ಏಳನೆಯ ಅಧಿವೇಶನ ಸುದ್ದಿಯನ್ನು ಓದಿದೆ. ಆದರೆ ಅದರ ದಸ್ತಾವೇಜುಗಳು ನನಗೆ ಸಿಕ್ಕಿದ್ದು 1965ರಲ್ಲಿ.

1964ರ ಏಪ್ರಿಲಿನ ನಂತರ ಡಾಂಗೆ ಮತ್ತು ಸಂಗಡಿಗರು ತೆನಾಲಿ ಸಮಾವೇಶವನ್ನು ನಡೆಸಲು ತೀರ್ಮಾನಿಸಿದ ಮುಖಂಡರನ್ನು ರಾಷ್ಟ್ರದ್ರೋಹಿಗಳೆಂದೂ, ಚೀನದ ಏಜೆಂಟರೆಂದೂ ದಿನನಿತ್ಯ ಬಯ್ಯಲಾರಂಭಿಸಿದರು. ಚೀನದ ಕಮ್ಯುನಿಸ್ಟ್ ಪಕ್ಷದ ಆದೇಶದ ಮೇರೆಗೆ ಸಿ.ಪಿ.ಐ.ಯನ್ನು ಒಡೆದಿದ್ದಾರೆಂದೂ ಅಪಪ್ರಚಾರ ಮಾಡಿದರು.

(ಮುಂದುವರಿಯುವುದು)

ಹುತಾತ್ಮ ಶ್ರೀನಿವಾಸ ಬಜಾಲ್ ನಿಧಿ



ಕಳೆದ ವಾರದ ಸಂಗ್ರಹ	ರೂ. 22,440-75
ಈ ವಾರದ ಸಂಗ್ರಹ	
1. ಡಾ. ಎಚ್.ಚಟರ್ಜಿ ವಿಜ್ಞಾನಿ, ಬೆಂಗಳೂರು	500.00
2. ವಿಮಾನೌಕರರ ಸಂಘ(ಎಐಐಇಎ) ವಿಭಾಗೀಯ ಸಮಿತಿ, ಧಾರವಾಡ	1,000.00
3. ವಿಮಾ ನೌಕರರ ಸಂಘ(ಲ್ಲ್ಯೂಇಎ) ಬೆಂಗಳೂರು ವಿಭಾಗ-1	1,000-00
ಡಿವೈಎಫ್ಐ ಕುಂದಾಪುರದ ತಾಲೂಕು ಸಮಿತಿ ಮೂಲಕ ಸಂಗ್ರಹವಾದ ವಿವರ	
4. ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘ	2,000-00
5. ಸಿಪಿಐ(ಎಂ) ತಾಲೂಕು ಸಮಿತಿ ಕುಂದಾಪುರ	500-00
6. DYFI ವಡೇರ ಹೋಬಳಿ ಘಟಕ	2,637-00
7. ಚರ್ಚ್ ರೋಡ್ ಘಟಕ	2ಸ178-00
8. ಪಡುಕೋಣೆ ಘಟಕ	1,734-00
9. ಮಾವಿನ ಕಟ್ಟೆ ಘಟಕ	685-00
10. ಬೆಟ್ಟಗಾರ ಘಟಕ	650-00
11. ಅನಗಳ್ಳಿ ಘಟಕ	306-00
12. ಬಳ್ಕೂರು ಘಟಕ	200-00
13. ಸಾಲಿಗ್ರಾಮ ಘಟಕ	145-00
14. ಡಿವೈಎಫ್ಐ ತಾಲೂಕು ಕೇಂದ್ರ	135-00
ಇದುವರೆಗಿನ ಒಟ್ಟು ಸಂಗ್ರಹ	36,110-75

ಕಾಮ್ರೇಡ್ ಸೂರಿಯವರ ವಿಶೇಷ ಸಂಚಿಕೆಗೆ ಫೋಟೋಗಳು, ಲೇಖನಗಳು ಹಾಗೂ ಜಾಹೀರಾತುಗಳನ್ನು ಕೂಡಲೇ ಕಳುಹಿಸಿಕೊಡಿ.

- ಸಂ.

ಸೆಪ್ಟೆಂಬರ್ 2 ರೈತರ ಬೇಡಿಕೆ ದಿನ ರೈತರ ಬೃಹತ್‌ರ್‍ಯಾಲಿ

ವಿಶ್ವ ವ್ಯಾಪಾರ ಸಂಘಟನೆ (WTO)ಯ ವಿನಾಶಕಾರಿ ನೀತಿಗಳನ್ನು ಹಿಮ್ಮೆಟ್ಟಿಸಿ, ಕೃಷಿಯನ್ನು ರಕ್ಷಿಸಿ - ರೈತರನ್ನು ಉಳಿಸಿ" ಎಂಬ ಘೋಷಣೆ ಯೊಂದಿಗೆ ರಾಜ್ಯದ ಮೂಲೆಮೂಲೆಗಳಿಂದ ಬೆಂಗಳೂರಿಗೆ ಬರಲಿರುವ ರೈತರು ಸೆಪ್ಟೆಂಬರ್ 2ರಂದು ಬೃಹತ್ ರ್‍ಯಾಲಿ ನಡೆಸಲಿದ್ದಾರೆ.

WTO ನಿರ್ದೇಶಿತ ನೀತಿಗಳಿಂದ ರೈತರ ತೀರಾ ಸಂಕಷ್ಟಕ್ಕೆ ಒಳಗಾಗಿದ್ದಾರೆ. ತಾವು ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆ ಸಿಗದೆ ತತ್ತರಿಸುತ್ತಿದ್ದಾರೆ ಇತ್ತೀಚಿನ ದಿನಗಳಲ್ಲಿ ರೇಷ್ಮೆ ಹಾಲಿನ ಬೆಲೆ ತೀರಾ ಕುಸಿದಿದೆ. ಆದರೆ ರೈತರು ಕೊಂಡುಕೊಳ್ಳುವ ವಸ್ತುಗಳ ಬೆಲೆ ಕಡಿಮೆಯಾಗಿಲ್ಲ.

ಜತೆಯಲ್ಲಿ ವಿಶ್ವಬ್ಯಾಂಕ್ ಆದೇಶದಂತೆ ರೈತರ ಪಂಪ್‌ಸೆಟ್ ವಿದ್ಯುತ್ ದರವನ್ನು ತೀವ್ರ ಹೆಚ್ಚಿಸಿರುವ ಸರಕಾರ ಮೀಟರ್‌ಗಳನ್ನು ಅಳವಡಿ ಸಲು ಪ್ರಯತ್ನ ನಡೆಸುತ್ತಿದ್ದಾರೆ. ದರ ಏರಿಕೆ, ಮೀಟರೀಕರಣದ ನಂತರ ಸರಕಾರಿ ವಲಯದ ಸಂಸ್ಥೆಯನ್ನು ಖಾಸಗೀಯವರಿಗೆ ಮಾರಾಟ ಮಾಡುವ ಹುನ್ನಾರ ನಡೆಯುತ್ತಿದೆ.

ರಾಜ್ಯದ 175 ತಾಲ್ಲೂಕುಗಳ ಪೈಕಿ 150ಕ್ಕೂ ಹೆಚ್ಚು ತಾಲ್ಲೂಕುಗಳು ಬರವನ್ನು ಎದುರಿಸುತ್ತಿದೆಯೆಂದು ರಾಜ್ಯ ಸರಕಾರವೇ ಘೋಷಿಸಿದೆ. ಆದರೆ ಪರಿಹಾರ ಕಾರ್ಯಗಳು ಸುಸೂತ್ರವಾಗಿ ನಡೆಯುತ್ತಿಲ್ಲ. ಅಲ್ಪಸ್ವಲ್ಪ ಕಾಮಗಾರಿಗಳು ನಡೆದರೂ ಜನ ಸಾಮಾನ್ಯರಿಗೆ ತಲುಪುತ್ತಿಲ್ಲ. ಇಂತಹ ಸನ್ನಿವೇಶದಲ್ಲಿ ರೈತರನ್ನು ಅಣಿನೆರೆಸಿ ರಾಜ್ಯ ಮತ್ತು ಕೇಂದ್ರ ಸರಕಾರಗಳ ವಿರುದ್ಧ ಸಮರಶೀಲ ಹೋರಾಟ ನಡೆಸುವುದು ಅತೀ ಅಗತ್ಯ. ಆದ್ದರಿಂದಲೇ ಕರ್ನಾಟಕ ಪ್ರಾಂತ ರೈತ ಸಂಘ (KPRS) ನೀರಾವರಿ ಪಂಪ್‌ಸೆಟ್ ಬಳಕೆದಾರರ ಹೋರಾಟ ಸಮಿತಿ ಗಳು, ಹಾಲು ಉತ್ಪಾದಕರು, ಹಾಲು ಉತ್ಪಾದಕರ ಸಹಕಾರಿ ಸಂಘಗಳ ನೌಕರರ ಹೋರಾಟಸಮಿತಿ, ರೇಷ್ಮೆ ಬೆಳೆಗಾರರ ಹೋರಾಟ ಸಮಿತಿಗಳು ಜಂಟಿ ಯಾಗಿ ರ್‍ಯಾಲಿ ನಡೆಸುತ್ತಿದ್ದು ಸೆಪ್ಟೆಂಬರ್ 2 ರಂದು ರೈತರ ದಿನವೆಂದು ಘೋಷಿಸಿದ್ದು ಅಂದು ಬೆಳಿಗ್ಗೆ 11 ಗಂಟೆಗೆ ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆ ಹೊರಡಲಿದೆ.

ರಾಜ್ಯಮಟ್ಟದ ಈ ಹೋರಾಟದಲ್ಲಿ ಸಂಕಷ್ಟಕ್ಕೀಡಾದ ರೈತ ಸಮುದಾಯ ಬೃಹತ್ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮೇಲಿನ ಸಮಿತಿಗಳು ಕರೆ ನೀಡಿವೆ.

ಬರ : ಕೇಂದ್ರದ ವಂಚನೆ

ಬರದ ಬರುವಿಗಾಗಿ ಮುಹೂರ್ತ ಇಟ್ಟುಕೊಂಡು ಸರ್ಕಾರಗಳು ಕಾಯುತ್ತಿವೆ. ಆಗಸ್ಟ್ 16 ರ ನಂತರ ಮಳೆ ಬಾರದಿದ್ದರೇ... ಎಂದು ಒಂದು ಮಾತಿನ ರೇಖೆ ಎಳೆದಿದೆ. ಇಂತಹವು ಅನೇಕ. ಕಳೆದ ವರುಷದ ಬರಕ್ಕಿಂತಲೂ ಈ ಬಾರಿಯದು ಭೀಕರ ವಾಗಲಿದೆಯೆಂದು ಮುಖ್ಯಮಂತ್ರಿ ಕೃಷ್ಣರವರು ಸ್ವಾತಂತ್ರ್ಯೋತ್ಸವದ ಸಮಾರಂಭದಲ್ಲಿ ಮಾತ ನಾಡುತ್ತಾರೆ. ಕಳೆದ ಬಾರಿ 142 ತಾಲೂಕುಗಳು ಬರದ ಬಾಯಿಗೆ ತುತ್ತಾಗಿದ್ದರೆ, ಈ ವರುಷದ್ದು 156 ತಾಲೂಕುಗಳು. ಆದ್ದರಿಂದ ಪರಿಹಾರ ಕಾರ್ಯದ ಮೊದಲ ಹಂತವಾಗಿ 555 ಕೋಟಿ ರೂಪಾಯಿಗಳು ಮತ್ತು 8 ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯ ಒದಗಿಸುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಮನವಿ ಪತ್ರ ಸಲ್ಲಿಸಿದೆ.

ಈ ರಾಜ್ಯ ಸರ್ಕಾರದ ಈ ಅತೀ ಮಹತ್ವದ ತೋರಿಕೆಗೆ ಕೇಂದ್ರ ಸರ್ಕಾರದ ಪ್ರತಿಕ್ರಿಯೆ ಮಾತ್ರ ಆತಂಕಕಾರಿ. ಜನರ ಬದುಕಿನ ಜೊತೆ ಚೆಲ್ಲಾಟ ವಾಡುವ ಕುಹಕದ ನಡೆ. ಕೇಂದ್ರ ಸರ್ಕಾರದ ವತಿಯಿಂದ ಬರದ ಬವಣೆ ಎದುರಿಸಲು ಕ್ಷಿಪ್ರಗತಿಯಲ್ಲಿ ಕಾರ್ಯವೆಸಗಲಾಗು ತ್ತಿದೆ ಎಂದು ವ್ಯಾಪಾಕವಾಗಿ ಪ್ರಚಾರಿಸಲಾಗುತ್ತಿದೆ. ಸ್ವತಃ ಪ್ರಧಾನಿಗಳು ಕೆಂಪುಕೋಟೆಯ ಮೇಲೆ ಧ್ವಜಾರೋಹಣ ಮಾಡಿ ಹಲವಾರು ಯೋಜನೆ ಗಳನ್ನು ಪ್ರವಾಹೋಪಾದಿಯಲ್ಲಿ ಹರಿಸಿದರು! ಆದ್ದರೆ ಕೇಂದ್ರ ಇದುವರೆಗೂ ರಾಜ್ಯಕ್ಕೆ ನೀಡಿರುವುದು ಕೇವಲ 36 ಕೋಟಿ ರೂಪಾಯಿಗಳು. ಆಹಾರ ಧಾನ್ಯದ ಬೇಡಿಕೆ ಮಂಡಿಸಿದ್ದರೂ ಒಂದು ಕಾಳೂ ಸಿಕ್ಕಿಲ್ಲ. ನೀಡಿರುವ 36 ಕೋಟಿ ರೂ ಹಣ ಈ ವಿಕೋಪ ಎದುರಿಸಲು ನೀಡಿದ ಸಹಾಯ ಧನವಲ್ಲ. ಬದಲಾಗಿ ಈ ವರುಷ ರಾಜ್ಯಕ್ಕೆ ನೀಡಬೇಕಾದ ಪಾಲಿನ ಮುಂಗಡವಂತೆ. ಆದರೂ ಬರದ ವಿಚಾರದಲ್ಲಿ ತಾವು ರಾಜಕೀಯ ಮಾಡು ತ್ತಿಲ್ಲವೆಂದು ಪ್ರಧಾನಿ ಯಾದಿಯಾಗಿ, ಮಂತ್ರಿಗಳು, ಬಿಜೆಪಿ ನಾಯಕರು ನಿತ್ಯ ಗಂಟಲು ಹರಿದು ಕೊಳ್ಳುತ್ತಿರುವುದು ಹಾಸ್ಯಾಸ್ಪದವಾಗಿದೆ. ಆದರೆ ತಮಗೆ ಬೇಕಾದ ರಾಜ್ಯಗಳಿಗೆ ಕುರ್ಚಿ ಕಾಯ್ದು ಕೊಳ್ಳಲು ತಾರತಮ್ಯದ ನೀತಿಯನ್ನು 'ಮುತ್ಸದ್ದಿ' ಪ್ರಧಾನಿಯು ತೋರುತ್ತಲೇ ಬಂದಿದ್ದಾರೆ. ಕೊಡುವ ಸಹಾಯವೂ ಅರ್ಧಭಾಗ ಧಾನ್ಯ, ಉಳಿದದ್ದು ಹಣವೆಂಬ ಮಾನದಂಡವೂ ಇದೆ. ಆದರೆ ಆಂಧ್ರದ ನಾಯ್ಡುಗೆ ಇದು ಅನ್ವಯಿಸುತ್ತಿಲ್ಲ. ಪೂರ್ತಿ ಹಣವನ್ನೇ ನೀಡಲಾಗಿದೆ ಎಂದು ವರದಿಯಿದೆ.

ಇತ್ತ ಕೃಷ್ಣ ಸರ್ಕಾರ ಕೈಗೊಳ್ಳಬಹುದಾದ ಕನಿಷ್ಠ


ಈ ವಾರ ಕರ್ನಾಟಕ ಒಂದು ನೋಟ

ಕ್ರಮಗಳೂ ಕೈಗೊಂಡಿಲ್ಲ. ಕುಡಿವ ನೀರಿಗಾಗಿ ಹಣ ಬಿಡುಗಡೆ ಮಾಡಲಾಗಿದೆಯೆಂದರೂ ಎಲ್ಲಿಯೂ ಅದರ ಸುದ್ದಿಯಿಲ್ಲ. ಬದಲಾಗಿ ಹಳೇ ಯೋಜನೆಯಂತೆ ಅಲ್ಲಲ್ಲಿ ಬೋರ್‌ವೆಲ್ ಕೊರೆಯ ಲಾಗುತ್ತಿದೆ. ಹಣವಾಗಲೀ, ಉದ್ಯೋಗ ಸೃಷ್ಟಿಯ ಕ್ರಮಗಳ ವಿವರಗಳುಳ್ಳ ಆದೇಶವಾದರೂ ತಮಗೆ ತಲುಪದೇ ಕಾರ್ಯ ನಿರ್ವಹಿಸುವು ದಾದರೂ ಹೇಗೆ ಎಂದೇ ಹಲವಾರು ಜಿಲ್ಲಾಧಿಕಾರಿ ಗಳು ಕೇಳುತ್ತಾರೆ. ಒಂದು ಸುತ್ತೋಲೆ ಕಳುಹಿಸುವಷ್ಟು ಪುರಸೊತ್ತು ಇಲ್ಲವೇ ಕಂಪ್ಯೂಟರಿನ ಈ-ಮೇಲ್ ತಂತ್ರಜ್ಞಾನದ ಸರ್ಕಾರಕ್ಕೆ?

ಈ ಎರಡೂ ಸರ್ಕಾರಗಳು ನಿಲುವು-ಕ್ರಮಗಳು ಅತ್ಯಂತ ಜನವಿರೋಧಿ ಸ್ವರೂಪದವು. ಜನ ಇನ್ನು ದಿವಾಳಿಯಾಗುತ್ತಾ, ಇದ್ದಬದ್ದದ್ದು ಕಳೆದುಕೊಂಡು, ಬದುಕಿನ ನೆಲೆ ಅರಸುತ್ತಾ ಸಾವು-ಸಂಕಟಗಳ ಗೂಡಾಗುತ್ತಾ ಸಾಗಿದಂತೆ ಜಮೀನ್ದಾರರ, ಹಣವುಳ್ಳವರ ಬಗಲಿಗೆ ತಾನಾಗಿ ಆಸ್ತಿಗಳು ಉದುರಲು, ಇದ್ದಬದ್ದದ್ದನ್ನು ನುಂಗಲು ಅವಕಾಶ ಸೃಷ್ಟಿಸಲು ಇಬ್ಬರಲ್ಲೂ ಸ್ಪರ್ಧೆಯೇ. ಈಗಾಗಲೇ ಇಂತಹ ಸ್ಥಿತಿಯೆದುರು ಪರಿಹಾರ ಕಾಮಗಾರಿ, ಉದ್ಯೋಗಸೃಷ್ಟಿಗೆ ಆಗ್ರಹಿಸಿ ಜನರ ಹೋರಾಟಗಳು ಆರಂಭಗೊಂಡಿವೆ. ಇದು ಇನ್ನು ತೀವ್ರಗೊಳ್ಳಬೇಕಿದೆ.

ಮೌಢ್ಯ ಬಳಸಿದ ವಂಚಕ ಅಲೆಕ್ಸ್ : ತಲೆದೂಗಿದ ಸರ್ಕಾರ

ಬೆಂಗಳೂರಿನ ತುಂಬಾ ಅದೇ ಸುದ್ದಿ. ಪತ್ರಿಕೆ, ಟಿ.ವಿ.ಗಳಲ್ಲಿ ರಂಗುರಂಗಿನ ಪ್ರಚಾರ. ಫಿಲಿಫೈನ್ಸ್‌ನಿಂದ ಬಂದಿರುವ 'ದೈವಿಸಂಭೂತ' ವೈದ್ಯ ಬರಿಗೈಯಲ್ಲೇ ಶಸ್ತ್ರಚಿಕಿತ್ಸೆ ಮಾಡಿ,




ಅನಸ್ತೇಷಿಯಾ(ಪ್ರಜ್ಞೆ ತಪ್ಪಿಸದೇ) ಬಳಸದೇ ಎಷ್ಟೂ ನೋವಿಲ್ಲದೇ ಮಾಡಿದ ಶಸ್ತ್ರಚಿಕಿತ್ಸೆಯಿಂದ ಗಾಯದ ಕುರುಹೂ ಉಳಿಯದೇ ರೋಗ ವಾಸಿ ಮಾಡುತ್ತಾನೆಂದರೆ ಸಾಮಾನ್ಯವೇ? ಇಂತಹವನತ್ತ ಜನರೂ ಮುಗಿಬಿದ್ದರು, ಮಂತ್ರಿ ಮಹೋದಯರೂ, ಮಾಜಿ, ಪ್ರತಿಷ್ಠರು ಅವನ ಮುಂದೆ ಮಲಗಿದರು. ಎದ್ದು ಕೊಂಡಾಡಿದರು. ಇಂತಹ ಚಿಕಿತ್ಸೆಗಳು ಹಲವಾರು ಪಂಚತಾರಾ ಹೋಟೆಲುಗಳಲ್ಲಿ ನಡೆದವು. ಎಲ್ಲಕ್ಕೂ ಮೇಲಾಗಿ ಕರ್ನಾಟಕ ಸರ್ಕಾರದ ಜನತಾಪ್ರತಿನಿಧಿ ಸಭೆ, ಆಡಳಿದ ಹೃದಯ ಕೇಂದ್ರವಾದ ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿಯೇ ಅವಕಾಶ ಕಲ್ಪಿಸಲಾಯಿತು. ವೈಜ್ಞಾನಿಕ ದೃಷ್ಟಿಕೋನ ಸದಾ ಕಾಯುವ ಸಂವಿಧಾನಿಕ ಪ್ರತಿಜ್ಞೆ ಸ್ವೀಕರಿಸಿದ ಸಚಿವರು, ವಿರೋಧ ಪಕ್ಷಗಳ ನಾಯಕರು ಹಾಡಿ ಹೊಗಳುತ್ತಾರೆಂದರೆ ಇದು ಬೌದ್ಧಿಕ ದಿವಾಳಿತನದ ಪರಮಾವಧಿಯೆಂದು ಪ್ರದರ್ಶನವಾಯಿತು.

ಅಂತಹ 'ಸೈಕೊ ಸರ್ಜರಿ' ಎಂದೇ ಕುಖ್ಯಾತಗೊಂಡ ಚಿಕಿತ್ಸೆಯನ್ನು ಮಾಡಿದಾತ ಫಿಲಿಫೈನ್ಸ್ ದೇಶದ ರೆವರೆಂಡ್ ಅಲೆಕ್ಸ್ ಅರ್ಬಿಟೋ.. ಆತನ ದೇಶದಲ್ಲೇ ಇಂತಹ 'ಮಾಂತ್ರಿಕರು' 400 ಕ್ಕೂ ಹೆಚ್ಚು ಜನರಿದ್ದಾರಂತೆ. ಇವರದ್ದು ವಂಚನೆಯ ಕೃತ್ಯವೆಂದು ಅನೇಕರು ಜೈಲು ಕಂಬಿ ಎಣಿಸಿದ್ದಾರೆ. ಗಡಿಪಾರಾಗಿದ್ದಾರೆ. ನ್ಯಾಯಾಲಯದಿಂದ ಛೀಮಾರಿ ಹಾಕಿಸಿಕೊಂಡಿದ್ದಾರೆ. ವಿಚಾರವಾದಿಗಳ ಸವಾಲುಗಳನ್ನು ಎದುರಿಸದೇ ಬೆನ್ನು ತೋರಿಸಿ, ಅಂತಹವರು 'ನಾಸ್ತಿಕ'ರೆಂದು ಜರಿದು ಓಡಿ ಹೋಗಿದ್ದಾರೆ. ಇಂತಹ ಪೂರ್ವಾಪರ ಮಾಹಿತಿ ಸಂಗ್ರಹಿಸದೇ, ಕಿಂಚಿತ್ತೂ ಪ್ರಶ್ನಿಸದೇ ಮೌಢ್ಯತನದ ಆಟಾಟೋಪಕ್ಕೆ ಮಣೆ ಹಾಕಿದ ಸರ್ಕಾರದ ಕ್ರಮ ಅತ್ಯಂತ ಖಂಡನೀಯ. ಅವಕಾಶ ಕಲ್ಪಿಸಿದವರ ತನಿಖೆಯಾಗಿ ಶಿಕ್ಷೆಯನ್ನು ವಿಧಿಸಬೇಕು. ಭಾಗಿಯಾದ ಸಚಿವರನ್ನು ಒಳ್ಳಗೊಳ್ಳಬೇಕು.

ಈ ಸೈಕೊ ಸರ್ಜರಿ ಯ ಹೂರಣವನ್ನು ಖ್ಯಾತ ವಿಚಾರವಾದಿ ಪ್ರೊ.ನರೇಂದ್ರನಾಯಕ್ ಮಂಗಳೂರಿನಲ್ಲಿ ಎಲ್ಲರೆದುರೇ ಬಯಲಿಗೆಳೆದಿದ್ದಾರೆ. ಹಿಪ್ನಾಟಿಸಂ ಮತ್ತು ಕೋಳಿಯ ಜಠರ, ಪ್ರಾಣಿಗಳ ರಕ್ತವನ್ನು ಕೈಚಳಕದಿಂದ ಬಳಸಿ ವಂಚನೆ ಏನೆಂದು ಬಯಲುಗೊಳಿಸಿದ್ದಾರೆ. ದೈವಿಶಕ್ತಿಯನ್ನು ಸಾಬೀತು ಮಾಡಿದರೆ ಅವರ ಆಸ್ತಿ ಪೂರ್ತಿ ನೀಡುವುದಾಗಿ ಹೇಳಿದ್ದಾರೆ. ಅವರು ಅಭಿನಂದನಾರ್ಹರು.

ಅಲೆಕ್ಸ್‌ನ ವಂಚನೆ ವಿರುದ್ಧ ಬೆಂಗಳೂರಿನ ಸಾರ್ವಜನಿಕರೊಬ್ಬರು ನ್ಯಾಯಾಲಯದ ಕಟ್ಟೆ ಹತ್ತಿದ್ದಾರೆ. ಕೋರ್ಟಿಗೆ ಹಾಜರುಪಡಿಸುವ ವಾರೆಂಟ್ ಇದ್ದರೂ ಅಧಿಕಾರಿಗಳು, ಪೋಲೀಸರು ಅವರನ್ನು ಇನ್ನೂ ಬಂಧಿಸಿಲ್ಲ. ಆತ ದೇಶ ಬಿಡಲು ಅವಕಾಶ ಕಲ್ಪಿಸಲಾಗುತ್ತಿದೆ ಎಂಬ ಆರೋಪವಿದೆ. ಇಷ್ಟು ಬಯಲಾದ ಮೇಲಾದರೂ ಕ್ಷಿಪ್ರ ಕ್ರಮ ವಹಿಸಬಾರದೇಕೆ? ○



ವಂಚನೆ ಬಯಲುಗೊಳಿಸುತ್ತಿರುವ ಪ್ರೊ. ನರೇಂದ್ರ ನಾಯಕರು

ದಾಸರಹಳ್ಳಿ-ಯಶವಂತಪುರ ಪ್ರದೇಶದ ಸಿ.ಪಿ.ಐ(ಎಂ) ಪ್ರಥಮ ಸಮ್ಮೇಳನ

ಬೆಂಗಳೂರಿನ ಪೀಣ್ಯದಾಸರಹಳ್ಳಿ-ಯಶವಂತಪುರ ಕೈಗಾರಿಕಾ ಪ್ರದೇಶ. ಅದರಲ್ಲು ಪೀಣ್ಯ ಕೈಗಾರಿಕಾ ಪ್ರದೇಶ ಇಡೀ ಏಶ್ಯಾಖಂಡದಲ್ಲೇ ಅತಿದೊಡ್ಡದಾದ ಕೈಗಾರಿಕಾ ಪ್ರದೇಶವೆಂದು ಹೆಸರುಗಳಿಸಿದೆ. ಈ ಪ್ರದೇಶದಲ್ಲಿ ಸಾವಿರಾರು ಕಾರ್ಖಾನೆಗಳಿದ್ದು ಲಕ್ಷಾಂತರ ಕಾರ್ಮಿಕರು ಕೆಲಸ ಮಾಡುತ್ತಾರೆ. ಇವರಲ್ಲಿ ಬಹುತೇಕ ಕಾರ್ಮಿಕರು ದಾಸರಹಳ್ಳಿ ಯಶವಂತಪುರಗಳಲ್ಲೂ ವಾಸಿಸುತ್ತಾರೆ. ಈ ಪ್ರದೇಶದಲ್ಲಿವಾಸಿಸುವ ಜನರಿಗೆ ಯಾವುದೇ ಮೂಲಭೂತ ಸೌಕರ್ಯಗಳು ಇಲ್ಲ. ದಾಸರಹಳ್ಳಿ ನಗರ ಸಭಾವ್ಯಾಪ್ತಿಗೆ 35 ವಾರ್ಡುಗಳು ಬರುತ್ತದೆ. ಈ ವಾರ್ಡುಗಳಿಂದ ಗೆದ್ದ ನಗರಸಭಾ ಸದಸ್ಯರುಗಳು ಪ್ರದೇಶದ ಹೋರಾಡುವುದು. ಈ ಪ್ರದೇಶದಲ್ಲಿ ಹಲವಾರು ಹೋರಾಟಗಳು ನಡೆದಿವೆ. ಬಾಟಾ ಕಾರ್ಮಿಕರ, ಪೋರೆಸ್ ಕಾರ್ಮಿಕರ ಹೋರಾಟ. ಹೀಗೆ ಈ ಹೋರಾಟಗಳಲ್ಲಿ ಮುಖಂಡರುಗಳು ಜೈಲುವಾಸವನ್ನು ಅನುಭವಿಸಿದ್ದಾರೆ. ಪೋಲೀಸು ಕೇಸ್‌ಗಳು ಲಾಠಿ ಚಾರ್ಜ್‌ಗಳು ನಡೆದಿವೆ.

ಜುಲೈ 21 ರಂದು ಯಶವಂತಪುರ ಕಛೇರಿಯ ಪಕ್ಕದಲ್ಲೇ ಸಮ್ಮೇಳನವನ್ನು ನಡೆಸಲಾಯಿತು.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಡಾ। ಪ್ರಕಾಶ್ ಸಿ.ರಾವ್‌ರವರು ಧ್ವಜಾರೋಹಣವನ್ನು ನೆರವೇರಿಸಿದರು. ಉದ್ಘಾಟನಾ ಭಾಷಣವನ್ನು



ಬಹಿರಂಗ ಸಭೆ

ಅಭಿವೃದ್ಧಿಗೆ ಗಮನಕೊಟ್ಟಿದ್ದೇ ಇಲ್ಲ ಆ ಗುಂಡಿಬಿದ್ದ ರಸ್ತೆಗಳು, ನೀರಿನ ಅಭಾವ ಕೊಳೆತುನಾರುವ ಕಸಕಡ್ಡಿ ಹೀಗೆ ಇತ್ತೀಚೆಗೆ ಲೋಕಾಯುಕ್ತರು ದಾಸರಹಳ್ಳಿ ನಗರ ಸಭೆಗೆ ದಾಳಿಮಾಡಿ ಸುಮಾರು 45 ಕೋಟಿ ರೂಗಳ ಅವ್ಯವಹಾರವನ್ನು ಬಯಲಿಗೆಳೆದಿದ್ದಾರೆ. ನಗರ ಸಭಾ ಅಧಿಕಾರಿಗಳು, ಸದಸ್ಯರು ಇವರುಗಳು ಜನರ ಹಾಗೂ ಇಲಾಖೆಯ ಹಣವನ್ನು ತಮ್ಮ ಜೇಬಿಗೆ ಇಳಿಸಿ ಸ್ವಾಹ ಮಾಡಿರುವುದು ಇಂತಹ ಪರಿಸ್ಥಿತಿಯಲ್ಲಿ ದಾಸರಹಳ್ಳಿ ಯಶವಂತಪುರ ಪ್ರದೇಶದ ಸಿಪಿಐ(ಎಂ)ನ ಪ್ರಥಮ ಸಮ್ಮೇಳನ ಜರುಗಿತು. ಈ ಸಮ್ಮೇಳನದ ಉದ್ದೇಶ ಅತಿ ವಿಸ್ತಾರವಾದ ಈ ಪ್ರದೇಶದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ಬೆಳೆಸಿ ಅಲ್ಲಿನ ಅಭಿವೃದ್ಧಿ ಮಾಡಿದ ಸಿ.ಪಿ.ಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ವಿಜೆಕೆ ನಾಯರ್‌ರವರು 20 ವರ್ಷಗಳಿಂದಲೂ ಇಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿರುವ ಪಕ್ಷದ ಸದಸ್ಯರು ಇದ್ದೀರಿ ಹಲವಾರು ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಬಂದಿದ್ದೀರಾ ಮುಂದೆ ಇನ್ನೂ ಹೆಚ್ಚಿನ ರೀತಿಯಲ್ಲೂ ಪಕ್ಷವನ್ನು ಬೆಳೆಸಬೇಕೆಂದು ಕರೆ ನೀಡಿದರು. ಇದಕ್ಕೂ ಮೊದಲು ಕಾಂ। ಎಸ್. ಸೂರ್ಯನಾರಾಯಣರಾವ್‌ಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ಪ್ರದೇಶದಲ್ಲಿ ಬಹಳ ವರ್ಷಗಳಿಂದಲೂ ಪಕ್ಷದ ಸದಸ್ಯರಾಗಿ

ಪುಟ 7 ಕ್ಕೆ

ದೇವದಾಸಿಯರ ಕಲ್ಯಾಣಕ್ಕೆಂದು ಸರ್ಕಾರ ನೀಡಿದ ಭೂಮಿಯ ಬಹುಪಾಲನ್ನು ಆಕ್ರಮಿಸಿಕೊಂಡ ಭೂಮಾಲೀಕರು, ಉಳಿದ ಮೂರುಗುಂಟೆಯನ್ನೂ ಉಳುಮೆ ಮಾಡಲು ಬಿಡುತ್ತಿಲ್ಲ. ನ್ಯಾಯ ಕೇಳಿದರೆ ತೀವ್ರವಾದ ದಬ್ಬಾಳಿಕೆ, ಕೊಲೆ ಸಂಚು ನಡೆಸುತ್ತಿದ್ದಾರೆ. ಇದಕ್ಕೆಲ್ಲಾ ಅಧಿಕಾರಿಗಳು ಸೊಪ್ಪು ಹಾಕುತ್ತಿದ್ದರೆ, ಸ್ವತಃ ಜನಪ್ರತಿನಿಧಿಯಾದ ಶಾಸಕ ಶ್ರೀರಂಗದೇವರಾಯಲು ದುರ್ಬಲರ ಪರವಾಗಿ ನಿಲ್ಲದೇ ದುಷ್ಟ ಭೂಮಾಲೀಕರಿಗೆ ಸಂಪೂರ್ಣ ರಕ್ಷಣೆ ನೀಡುತ್ತಿದ್ದಾರೆ. ಇದನ್ನೆಲ್ಲಾ ಎದುರಿಸಿ ನಡೆದಿರುವ ವರ್ಗ ಸಂಘರ್ಷದ ವರದಿಯಿದು. ಆರ್ಥಿಕ ಬೇಡಿಕೆಗಾಗಿ ಆರಂಭಗೊಂಡಿರುವ ಹೋರಾಟ ರಾಜಕೀಯ ಸ್ವರೂಪ ಪಡೆದಿರುವ ಒಂದು ಉದಾಹರಣೆ ಇಲ್ಲಿದೆ.

ಗಂಗಾವತಿ :

ದೇವದಾಸಿಯರ ಭೂಮಿ ನುಂಗುವ ಭೂಮಾಲೀಕರು

ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕು ಎಂದಾಕ್ಷಣ ನೆನಪಿಗೆ ಬರುವುದು ಅಲ್ಲಿ ಬೆಳೆಯುವ ಭತ್ತದ ರಾಶಿ, ಅತೀ ಕಡಿಮೆ ಕೂಲಿಗೆ ಕೆಲಸ ಮಾಡುವ ಕೂಲಿ ಕಾರ್ಮಿಕರು ಹಾಗೂ ಭೂಮಾಲಿಕರುಗಳ ಅಟ್ಟಹಾಸ, ದರ್ಪ.

ಈ ಪ್ರದೇಶದಲ್ಲಿ ಭೂಮಾಲಿಕರುಗಳದೇ ಧರ್ಬಾರು. ಅಲ್ಲಿಯ ರಾಜಕೀಯ ಸ್ಥಿತಿ-ಗತಿಗಳ ನಿರೂಪಕರು ಅವರೇ ಆಗಿರುತ್ತಾರೆ. ಇಲ್ಲಿ ದುಡಿಯುವ ಕೃಷಿ ಕಾರ್ಮಿಕರಿಗೇ ಕಡಿಮೆ ಕೂಲಿ ನೀಡಿ ಅವರ ಬರ್ಭರ ಬದುಕಿನ ಪಿತಾಮಹರು ಈ ಭೂಮಾಲಿಕರು.


ಈ ತಾಲ್ಲೂಕಿನ ಮತ್ತೊಂದು ಸಾಮಾಜಿಕ ಪಿಡುಗೆಂದರೆ, ದೇವದಾಸಿ ಪದ್ದತಿ. ಅನಾದಿ ಕಾಲದಿಂದಲೂ ಬೆಳೆದು ಬಂದಿರುವ ಈ ದೇವದಾಸಿ ಪದ್ಧತಿ ಸಾಮಾಜಿಕ ಪಿಡುಗಾಗಿಯೇ ಉಳಿದಿದೆ. ಈ ದೇವದಾಸಿ ಪದ್ಧತಿ ಬೆಳೆದುಬರಲು ಕಿತ್ತುತಿನ್ನುವ ಬಡತನ, ಅನಕ್ಷರತೆ ಕಾರಣವಾಗಿದೆ. ಈ ಪದ್ಧತಿ ಬೆಳೆಯಲು ಪ್ರೋತ್ಸಾಹ ನೀಡುತ್ತಿರುವ ಭೂಮಾಲಿಕರುಗಳ ಪಾತ್ರ ಅತೀ ಮಹತ್ವದ್ದಾಗಿದೆ. ಅದನ್ನು ತಡೆಗಟ್ಟಲು ಇಂದಿಗೂ ಸರ್ಕಾರದ ಕಾನೂನುಗಳು ಸಫಲವಾಗಿಲ್ಲ.

ಸುಧಾರಣೆಯತ್ತ ದೇವದಾಸಿಯರು

ಭೂಮಾಲಿಕರ ಹಿಡಿತದಲ್ಲಿ ನಲಗುತ್ತಿರುವ ದೇವದಾಸಿ ಪದ್ದತಿ ವಿರುದ್ದ ಪಜ್ಞಾವಂತರು ಕೂಗೆತ್ತಿದ್ದಾಗ, ಇಡೀ ದೇಶದ ಜನತೆ ನಿಬ್ಬೆರಗಾಗಿ ನಿಂತು ನೋಡಿತ್ತು. ಹಲವೆಡೆ ಇಂಥದ್ದೊಂದು ಅನಿಷ್ಟ ಪದ್ಧತಿ ಇರುವುದೇ ನಿಜವೇ ಎಂದು ಬೆರಗುಗೊಂಡಿತು. ಇಂತಹ ಅಮಾನವೀಯ ಪದ್ಧತಿ ಎಂದೇ ಪ್ರತಿಭಟನೆಗಳು ಮೂಡಿಬಂದ ನಂತರ ಎಚ್ಚೆತ್ತ ಸರ್ಕಾರಗಳು ಈ ದೇವದಾಸಿ ಪದ್ದತಿಯನ್ನು ಹೋಗಲಾಡಿಸಲೆಂದು ಹಲವಾರು ಕಾನೂನುಗಳನ್ನು ತಂದಿತ್ತು. ದೇವದಾಸಿ ಪದ್ದತಿಯಿಂದ ಆಚೆ ಬರುವ ಈ ಹೆಂಗಸರಿಗೆ ಬದುಕಿನ ಆಸರೆಯಾಗಿ ಒಂದಿಷ್ಟು ಭೂಮಿ ನೀಡಿಕೆ ಒಳಗೊಂಡು ಹಲವಾರು ಯೋಜನೆಗಳನ್ನು ಸರ್ಕಾರ ಪ್ರಕಟಿಸಿತ್ತು. ಇದು ಸ್ವಾಗತಾರ್ಹವಾದದ್ದು


ಚಿ.ಕೃ.ಮಹೇಂದ್ರ ನಂದನವನ
ಚಂದ್ರಪ್ಪ ಹೊಸ್ಕೇರಾ

ಹೌದು. ಇಂಥದೊಂದು ಕ್ರಮ ಜರುಗಿದ್ದೇ ತಡ ಇಲ್ಲಿಯ ಭೂಮಾಲಿಕರು ಎಚ್ಚರವಾಗತೊಡಗಿದರು. ತಮ್ಮ ಅನಧಿಕೃತ ರಾಜಪ್ರಭುತ್ವ ಕೊನೆಗೊಳ್ಳುವುದನ್ನು ಸಹಿಸಿಕೊಳ್ಳದ ಈ ಭೂಮಾಲಿಕರು, ಸ್ಥಾಪಿತ ಹಿತಾಸಕ್ತಿಗಳು ಅವು ಜಾರಿಗೊಳ್ಳದಂತೆ ತಡೆಯುವ ಯತ್ನ ಮಾಡುತ್ತಿದ್ದಾಗ ಬಡವರ - ಧೀನ ದಲಿತರ ಸೇವೆ ಮಾಡುತ್ತೇನೆಂದು ಗೆದ್ದು ಬರುವ ಶಾಸಕರು ಕೂಡಾ ಭೂ ಒಡೆಯರ ಪರ ವಕಾಲತ್ತು ವಹಿಸಲು ನಿಂತರೇ? ಪೋಲಿಸ್ ನಾಗರೀಕರ ಕೂಟದ ಅಧಿಕಾರಿಗಳು ಒಳಗೊಂಡು ಸರ್ಕಾರದ ಯಂತ್ರ ಅವರಿಗೇ ಬೆಂಬಲಿಸಿದರೆ? ಅಂಥದೊಂದು ಘಟನೆ ಗಂಗಾವತಿ ತಾಲ್ಲೂಕಿನ ಭಟ್ರ ಹಂಚಿನ ಗ್ರಾಮದಲ್ಲಿ ನಡೆದಿದೆ.



ಮರಿಯಮ್ಮ

ಭೂವಂಚಿತಗೊಂಡ ದೇವದಾಸಿಯರು

ಗಂಗಾವತಿ ತಾಲ್ಲೂಕಿನ ಭಟ್ರ ಹಂಚಿನ ಗ್ರಾಮದ ಸರ್ವೆ ನಂಬರು 7/1 ಮತ್ತು 7/2 ರ ಸರ್ಕಾರಿ ಜಮೀನಿನಲ್ಲಿ ದೇವದಾಸಿಯರಾದ ಮರಿಯಮ್ಮ ಮತ್ತು ಲಿಂಗಮ್ಮ ಎಂಬುವರಿಗೆ ಸರ್ಕಾರ ಕ್ರಮವಾಗಿ 20 ಗುಂಟೆ ಜಮೀನನ್ನು ಮಂಜೂರು ಮಾಡಿತ್ತು. ಈ ಇಬ್ಬರು ಹೆಂಗಸರ ಹೆಸರಿನಲ್ಲಿ ಪಟ್ಟಾ ಮತ್ತು ಇತರೆ ಭೂ ಮಂಜೂರು ಮಾಡಿತ್ತು. ಕೂಡಲೇ ಜಾಗೃತರಾದವರು ಇಲ್ಲಿಯ ಭೂಮಾಲಿಕ ನಾರಾಯಣಪ್ಪ.


ಲಿಂಗಮ್ಮ

ಭೂಮಿಯೆಲ್ಲಾ ತಮ್ಮದೇ ಸ್ವತ್ತಾಗಿ ಉಳಿಯಬೇಕೆಂದು ಬಯಸುವ ಈ ಭೂಮಾಲಿಕರು, ದೇವದಾಸಿಯರು ಭೂಮಿ ಹೊಂದುವುದನ್ನು ಕನಸಿನಲ್ಲಿಯೂ ನೆನಪಿಸಿಕೊಳ್ಳಲಾರರು!. ಈ ದೇವದಾಸಿಯರಿಗೆ ಕೊಟ್ಟ ಭೂಮಿಯ ಪಕ್ಕದಲ್ಲಿ ನಾರಾಯಣಪ್ಪನ ಭೂಮಿ ಇದೆ. ಇಂದು 20 ಗುಂಟೆಯಲ್ಲಿ 12 ಗುಂಟೆಯಷ್ಟು ಈತ ಒತ್ತುವರಿ ಮಾಡಿಕೊಂಡಿದ್ದು ಅಲ್ಲದೇ, ಮಿಕ್ಕ 3 ಗುಂಟೆಯಷ್ಟೂ ಭೂಮಿಯನ್ನು ಈ ದೇವದಾಸಿಯರು ಉಳುಮೆ ಮಾಡಲು ಬಿಟ್ಟಿಲ್ಲ. ಪಾಪ! ಈ ಅಸಹಾಯಕ ದೇವದಾಸಿಯರು ಸರ್ಕಾರಿ ಮಂಜೂರು ಮಾಡಿದ ಈ ಜಮೀನನ್ನು ತಮ್ಮ ಸ್ವಾದೀನದಲ್ಲಿ ವಶಪಡಿಸಿಕೊಡಿಸಬೇಕೆಂದು ಪೋಲೀಸ್ ಇಲಾಖೆ, ಕಂದಾಯ ಇಲಾಖೆ, ತಹಶೀಲ್ದಾರ್, ಅಸಿಸ್ಟೆಂಟ್ ಕಮಿಷನರ್, ಜಿಲ್ಲಾಧಿಕಾರಿ ಕಛೇರಿಗೆ ಅಲೆದಿದ್ದೇ ಬಂತು ಭಾಗ್ಯ. ಈ ದಲಿತ ಅನಕ್ಷರಸ್ಥ ದೇವದಾಸಿಯರಿಗೆ ಗೊತ್ತಾದದ್ದೆಂದರೆ, ಕಾನೂನುಗಳಿರುವುದು ನಮ್ಮಂತವರಿಗಲ್ಲ. ಶ್ರೀಮಂತರಿಗಷ್ಟೆ ಎಂದು. ಭೂಮಾಲಿಕರ ಎಂಜಲು ಕಾಸು ಮೆದ್ದ ಈ ಅಧಿಕಾರಿಗಳು ಈ ದೇವದಾಸಿಯರಿಗೆ ಯಾವ ಸಹಾಯವನ್ನು ಮಾಡಲಿಲ್ಲ! ಸಿಕ್ಕ ಭೂಮಿಯಿಂದ ತಮಗೆ ಆಶ್ರಯ ಸಿಕ್ಕಿತಲ್ಲಾ, ತಾವು ಮನುಷ್ಯರಾದೆವು, ಮಕ್ಕಳು ಓದಿಯಾರು ಎಂದೆಲ್ಲಾ ಕನಸು ಕಂಡಿದ್ದ ಅವರು ನೊಂದು ನೆಲಕ್ಕೆ ಒರಗಿದರು.


ಶಾಸಕ ಶ್ರೀರಂಗದೇವರಾಜಲು

ನೆರವಿಗೆ ಬಂದ ಕೂಲಿ ಕಾರ್ಮಿಕರ ಸಂಘ:

ಮೂಲತಃ ಕೃಷಿ ಕೂಲಿ ಕಾರ್ಮಿಕರಾಗಿದ್ದ ಈ ದೇವದಾಸಿಯರು ಗಂಗಾವತಿಯ ಕೃಷಿ ಕೂಲಿಕಾರ ಸಂಘದ ಸದಸ್ಯರಾದರು. ಆಗ ದೇವದಾಸಿಯರ ನೆರವಿಗೆ ಬಂದದ್ದು, ಕೃಷಿಕೂಲಿಕಾರ್ಮಿಕರ ಸಂಘ. ತಮ್ಮ ಅಹವಾಲನ್ನು ಕೃಷಿ ಕೂಲಿಕಾರರಿಗೆ ಸಲ್ಲಿಸಿದ ದೇವದಾಸಿಯರು ತಮಗೆ ನ್ಯಾಯ ದೊರಕಿಸಿಕೊಡಬೇಕೆಂದು ಬಯಸಿದರು.

ಈ ಅಸಹಾಯಕ ಹೆಣ್ಣು ಮಕ್ಕಳ ಶೋಷಣೆಯನ್ನು ತಪ್ಪಿಸಲು ಅಲ್ಲಿನ ತಹಶೀಲ್ದಾರ್ ವಿರುದ್ಧ ಹಾಗೂ ಈ ದೇವದಾಸಿಯರಿಗೆ ಭೂ ಸ್ವಾಧೀನವನ್ನು ನೀಡಬೇಕೆಂದು ಒತ್ತಾಯಿಸಿ ದಿನಾಂಕ 13.3.2002ರಂದು ಕೃಷಿಕೂಲಿ ಕಾರ್ಮಿಕರ ಸಂಘ ಧರಣಿ ಹಮ್ಮಿಕೊಂಡಾಗ ಮನವಿ ಸ್ವೀಕರಿಸಿದ್ದ ಜಿಲ್ಲಾಧಿಕಾರಿ ದೇವದಾಸಿಯರಿಗೆ ಭೂಮಿ ಸ್ವಾದೀನಪಡಿಸಿಕೊಡುತ್ತೇವೆಂದು ಭರವಸೆ ನೀಡಿದರು.

ಜಾರಿಯಾಗದ ಜಿಲ್ಲಾಧಿಕಾರಿಗಳ ಆದೇಶ

ಏಪ್ರಿಲ್ 4ರಂದು ಕೃಷಿಕೂಲಿಕಾರ ಸಂಘದ ಮುಖಂಡರನ್ನು ಕರೆಸಿಕೊಂಡ ಜಿಲ್ಲಾಧಿಕಾರಿಗಳು - ದೇವದಾಸಿಯರಿಗೆ ಸರ್ಕಾರ ಭೂಮಿ ಮಂಜೂರು ಮಾಡಿದ್ದು, ಅದನ್ನು ಕೂಡಲೇ ಸ್ವಾಧೀನಪಡಿಸಿಕೊಡುವಂತೆ ಹಾಗೂ ಆ ಇಬ್ಬರು ದೇವದಾಸಿಯರಿಗೆ ಪೋಲೀಸ್ ರಕ್ಷಣೆ ನೀಡುವಂತೆ ಆದೇಶಿಸಿರುವುದಾಗಿ ತಿಳಿಸಿದರು. ಆದರೆ ಭೂಮಾಲಿಕರುಗಳೊಂದಿಗೆ ಶಾಮೀಲಾದ ತಹಶೀಲ್ದಾರ್ ಮತ್ತು ಪೋಲಿಸ್ ಇಲಾಖಾಧಿಕಾರಿಗಳು ಜಿಲ್ಲಾಧಿಕಾರಿಗಳ ಈ ಆದೇಶವನ್ನು ಪ್ರಜ್ಞಾಪೂರ್ವಕ ವಾಗಿಯೇ ಜಾರಿಗೊಳಿಸಲಿಲ್ಲ.

ಜಿಲ್ಲಾಧಿಕಾರಿಗಳ ಆದೇಶ ಜಾರಿಗೆ ಒತ್ತಾಯಿಸಿ ಪ್ರತಿಭಟನೆ

ದಿನಾಂಕ 19.6.2002 ರಂದು ತಹಶೀಲ್ದಾರ್ ಕಾರ್ಯಾಲಯದ ಮುಂದೆ ನೂರಾರು ಕೃಷಿಕೂಲಿಕಾರ್ಮಿಕರು ದೇವದಾಸಿ ಮಹಿಳೆಯರಿಗೆ ಪೋಲಿಸ್ ರಕ್ಷಣೆ ಕೊಡಲು ಜಿಲ್ಲಾಧಿಕಾರಿಗಳು ಆದೇಶಿಸಿದ್ದನ್ನು ಜಾರಿಗೆ ತರಲು ವಿಫಲರಾದ ತಹಶೀಲ್ದಾರ್ ವಿರುದ್ಧ ಧರಣಿ ಸತ್ಯಾಗ್ರಹ ನಡೆಸಿದರು. ಪ್ರತಿಭಟನೆಯ ಸಂದರ್ಭದಲ್ಲಿ ಗಂಗಾವತಿಗೆ ಭೇಟಿ ನೀಡಿದ ಅಸಿಸ್ಟೆಂಟ್ ಕಮಿಷನರ್ ಸಹ ಮನವಿಯನ್ನು ಪರಿಶೀಲಿಸಿ ತಹಶೀಲ್ದಾರ್‌ರವರಿಗೆ ಛೀಮಾರಿ ಹಾಕಿ ದೇವದಾಸಿಯರಿಗೆ ಪೋಲೀಸ್ ರಕ್ಷಣೆ ನೀಡುವಂತೆ ಆದೇಶಿಸಿದರು.

ಹೊಸ ಕಥೆ ಕಟ್ಟುತ್ತಿರುವ ಭೂಮಾಲಿಕರು

ಗಂಗಾವತಿ ಕೃಷಿಕೂಲಿಕಾರರ ಸಂಘ ದೇವದಾಸಿಯರ ಪರವಾಗಿ ಯಾವಾಗ ನಿಂತಿತೋ... ಕೃಷಿಕೂಲಿಕಾರ ಸಂಘದ ನಿಲುವಿಗೆ ಹೆದರಿದ ಈ ಭೂಮಾಲಿಕರು ಈ ಭೂಮಿ ತಮ

ಕೆ. ಬಾಳಪ್ಪನಿಗೆ ಪ್ರಾಣ ಬೆದರಿಕೆ

ಈ ಭೂ ಆಕ್ರಮಣ ತೆರವು ಮಾಡಬೇಕೆಂದು ಮತ್ತು ದಲಿತ ಮಹಿಳೆಯರಿಗೆ ಭೂಮಿ ಸಾಗುವಳಿ ಮಾಡಲು ಪೋಲೀಸ್ ರಕ್ಷಣೆ ನೀಡಬೇಕೆಂದು ಹೋರಾಡುತ್ತಿರುವ ಕೃಷಿ ಕೂಲಿಕಾರ ಸಂಘದ ಮುಖಂಡರನ್ನು ಮುಗಿಸಲು ಬೆದರಿಕೆ ಹಾಕಲಾಗುತ್ತಿದೆ. ಸಂಘದ ರಾಜ್ಯ ಉಪಾಧ್ಯಕ್ಷ ಕೆ.ಬಾಳಪ್ಪ ಅವರನ್ನು, ಭೂ ಮಂಜೂರಾತಿ ಸಮಿತಿ ಸದಸ್ಯ ಹಾಗೂ ಭೂಮಾಲಿಕ ಸತ್ಯನಾರಾಣ ಬಾಪಿರೆಡ್ಡಿ ಕ್ಯಾಂಪಿನವರು ಕೊಲೆ ಮಾಡುವ ಬೆದರಿಕೆ ಒಡ್ಡಿದ್ದಾರೆ.




ಇದ್ಯಾವುದಕ್ಕೂ ಜಗ್ಗದೇ, ಸರ್ಕಾರಿ ಜಮೀನನ್ನು ದೇವದಾಸಿಯರಿಗೆ ನೀಡಬೇಕೆಂದು ಪ್ರತಿಭಟನೆ ನಡೆಸುತ್ತಿದ್ದ ಕೆ. ಬಾಲಪ್ಪ ಮತ್ತು ಸಂಗಡಿಗರ ಮೇಲೆ ಹಿಂದೊಮ್ಮೆ ಭೂಮಾಲಿಕ ಗೂಂಡಾ ಸತ್ಯನಾರಾಯಣ ಆಂದ್ರಪ್ರದೇಶದಿಂದ ರೌಡಿಗಳನ್ನು ಕರೆಸಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದಾಗ 16 ಜನ ಪ್ರತಿಭಟನೆ ನಿರತ ಕೃಷಿ ಕೂಲಿ ಕಾರ್ಮಿಕರು ಗಾಯಗೊಂಡರು. ಪ್ರಜ್ಞೆ ತಪ್ಪಿದ ಬಾಳಪ್ಪನವರು ಮರಣ ಹೊಂದಿದ್ದಾರೆ ಎಂದು ಗೂಂಡಾಪಡೆ ವಾಪಸ್ಸಾಯಿತು. ಅಕಸ್ಮಾತ್ ಬಾಳಪ್ಪ ಬದುಕುಳಿದರು.ಈ ಎಲ್ಲಾ ಹಿನ್ನೆಲೆಯಲ್ಲಿ ಈ ಕೂಡಲೇ ಬಾಳಪ್ಪನವರಿಗೆ ಸೂಕ್ತ ರಕ್ಷಣೆ ನೀಡಬೇಕೆಂದು, ದೇವದಾಸಿ ಮಹಿಳೆಯರಿಗೆ ಸಾಗುವಳಿ ಮಾಡಲು ಅನುಕೂಲ ಕಲ್ಪಿಸಬೇಕೆಂದು ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರದಲ್ಲಿ ಕೃಷಿಕೂಲಿಕಾರರ ಸಂಘದ ರಾಜ್ಯ ಸಮಿತಿ ಆಗ್ರಹಿಸಿದೆ. ಖಾಕಿವಾಲಗಳು ಹಣದ ಆಮಿಷಕ್ಕೆ ಕೈಯೊಡ್ಡಿ ಸುಮ್ಮನಿರುವುದನ್ನು ಖಂಡಿಸಿ, ಈ ಕೂಡಲೇ ಬ್ಯಾಪಿರೆಡ್ಡಿ ಕ್ಯಾಂಪ್‌ನ ಸತ್ಯನಾರಾಯಣನ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸಂಘ ಆಗ್ರಹಿಸಿದೆ.

ಮಾತೆತ್ತಿದರೆ ಐ.ಟಿ ಯುಗದ ಕನಸು ಬಿತ್ತರಿಸುವ ಮುಖ್ಯಮಂತ್ರಿ ಕೃಷ್ಣರಿಗೆ, ದಲಿತ ಗೃಹಸಚಿವ ಖರ್ಗೆಯವರಿಗೆ ತನ್ನದೇ ನಾಡಿನಲ್ಲಿ ದಲಿತ ಮಹಿಳೆಯರ ಮೇಲೆ ಆಗುತ್ತಿರುವ ಅನ್ಯಾಯ ಗಮನಕ್ಕೆ ಬಂದಿಲ್ಲವೆ? ಸ್ವತಂತ್ರ ಗಳಿಸಿದ 55 ವರ್ಷದ ನಂತರವೂ ಭೂಮಾಲಿಕರುಗಳು ಅಟ್ಟಹಾಸಪಡುತ್ತಿರುವುದು, ಕರ್ನಾಟಕದಲ್ಲಿ ಭೂಮಾಲಿಕ ವರ್ಗ ಇನ್ನೂ ಇಷ್ಟು ಗಟ್ಟಿಯಾಗಿ ನೆಲೆಯೂರಿ ನಿಂತಿದೆ ಎಂಬುದಕ್ಕೆ ಈ ಘಟನೆ ಹಸಿ ಸಾಕ್ಷಿಯಾಗಿದೆ. ಈಗಲಾದರೂ ಸರ್ಕಾರ ಎಚ್ಚೆತ್ತುಕೊಂಡು ದೇವದಾಸಿಯರಿಗೆ ಭೂಮಿ ದಕ್ಕುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ, ಗಂಗಾವತಿಯ ದೇವದಾಸಿಯರಿಗೆ ಆಗುತ್ತಿರುವಂತ ಅನ್ಯಾಯ ಈ ನಾಡಿನಾದ್ಯಂತ ಇನ್ನೆಷ್ಟು ಬಡ ಮಹಿಳೆಯರಿಗೆ ಆಗುತ್ತದೆ. ಇಂತಹ ಸ್ಥಿತಿ ಎದುರಲ್ಲಿ ಹೋರಾಡುವ ಛಲವನ್ನು ಕೂಲಿಕಾರರು ಬಿಟ್ಟಿಲ್ಲ.

ಸ್ವಾತಂತ್ರ್ಯ ದಿನಾಚರಣೆ : ದೇಶ ಎದುರಿಸುತ್ತಿರುವ ಸವಾಲುಗಳು

ಆಗಸ್ಟ್ 15 ರಂದು ದೇಶ 55ನೇ ಸ್ವಾತಂತ್ರ್ಯ ದಿನವನ್ನು ಆಚರಿಸುತ್ತಿದೆ. ಇಂತಹ ಸಂದರ್ಭದಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಮ್ಮ ಹಿರಿಯ ತಲೆಮಾರಿನ ಜನರ ಮಹಾತ್ಯಾಗ ಬಲಿದಾನಗಳನ್ನು ನೆನಪಿಸಿಕೊಳ್ಳುತ್ತಲೆ, ದೇಶದ ಗಂಭೀರ ಸನ್ನಿವೇಶದ ಬಗೆಗೆ ಸಹ ಚಿಂತಿಸಬೇಕಿದೆ.



ಗುಜರಾತ್ ನರಮೇಧದ ಕರಿನೆರಳು ಸ್ವಾತಂತ್ರ್ಯ ದಿನಾಚರಣೆಯ ಮೇಲೆ ಬಿದ್ದಿದೆ. ಫೆಬ್ರವರಿ ಕೊನೆಯ ವಾರದಿಂದ ಗುಜರಾತ್ ಕಂಡ ಭೀಕರ ಹಿಂಸಾಚಾರಗಳು ಸುದೀರ್ಘ ಸ್ವಾತಂತ್ರ್ಯ ಚಳುವಳಿಯಲ್ಲಿ ರೂಪುಗೊಂಡ ಉನ್ನತ ಮೌಲ್ಯಗಳ ಮೇಲೆ ನಡೆದ ದಾಳಿಯಾಗಿದೆ. ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ವಿಭಾಗ ಗುಜರಾತ್‌ನಲ್ಲಿಂದು ಅಕ್ಷರಶಃ ಬೀದಿ ಪಾಲಾಗಿದ್ದಾರೆ. ಅವರ ಪ್ರೀತಿಪಾತ್ರ ಬಂಧುಗಳನ್ನು ಕ್ರೂರವಾಗಿ ಹತ್ಯೆಗೈಯಲಾಗಿದೆ. ಮಹಿಳೆಯ ಅತ್ಯಾಚಾರವೆಸಗ ಲಾಗಿದೆ. ಮಕ್ಕಳು ಅನಾಥವಾಗಿವೆ. ಇನ್ನೂ ಕೆಟ್ಟ ಸ್ಥಿತಿಯೆಂದರೆ ಈ ಜನ ಮತ್ತೆ ಶಾಂತಿಯಿಂದ ನಿರಾತಂಕವಾಗಿ ರಾಜ್ಯದಲ್ಲಿ ಜೀವನ ನಡೆಸಬಹುದೆಂಬ ಯಾವುದೇ ಖಾತ್ರಿ ಇಲ್ಲ ಎನ್ನುವುದು ಮತ್ತು ಗುಜರಾತ್ ಸರ್ಕಾರ ಅಲ್ಪಸಂಖ್ಯಾತ ಸಮುದಾಯ ಸೇರಿದವರನ್ನು ಸಮಾನ ಹಕ್ಕು ಹಾಗೂ ಗೌರವವುಳ್ಳ ನಾಗರೀಕರೆಂದು ಪರಿಗಣಿಸಲು ಸಿದ್ದವಿಲ್ಲದಿರುವುದು.

ಇದು ಭಾರತದ ಸ್ವಾತಂತ್ರ್ಯ ಯುಗದ ಕಪ್ಪು ಚುಕ್ಕೆಯಾಗಿದೆ. ಇಂತಹ ಬರ್ಬರ-ಘೋರ ಅಪರಾಧವೆಸಗಿದವರನ್ನು ಅಧಿಕಾರದಿಂದ ಕಿತ್ತೆಸೆಯುವುದು ದುಷ್ಕರ್ಮಿಗಳನ್ನು ಸಾಧ್ಯವಾದಷ್ಟು ಬೇಗ ಶಿಕ್ಷಿಸುವುದರಿಂದ ಮಾತ್ರವೇ ಭಾರತದ ಜನ ಜೀವನದ ಅಸ್ತಿಬಾರವಾದ ಜಾತ್ಯಾತೀತ-ಪ್ರಜಾಪ್ರಭುತ್ವ-ಗಣತಂತ್ರದ ಮೌಲ್ಯಗಳನ್ನು ಪುನರ್ ಸ್ಥಾಪಿಸಿದಂತಾಗುತ್ತದೆ.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕೇಸರಿ ಬಾವುಟ ಹಿಡಿದ ಜನ ಇಂದು ದೇಶವನ್ನಾಳುತ್ತಿದ್ದಾರೆ. ಸ್ವಯಂ ಸೇವಕರಾದ ಅಟಲ ಬಿಹಾರಿ ವಾಜಪೇಯಿಯವರು ಕೆಂಪು ಕೋಟೆಯಿಂದ ತಮ್ಮ 5ನೇ ಸ್ವಾತಂತ್ರ್ಯ ದಿನದ ಭಾಷಣ ಮಾಡಿದ ಪರಿಸ್ಥಿತಿ ಇತಿಹಾಸದ ವ್ಯಂಗ್ಯಗಳಲ್ಲೊಂದಾಗಿದೆ. ಯಾವ ಜನರು ಸ್ವಾತಂತ್ರ್ಯ ಚಳುವಳಿಯ ಗಾವುದ ದೂರ ನಿಂತಿದ್ದರೋ, ಅವರು ಇಂದು ಕೆಂಪು ಕೋಟೆ ಮೇಲಿಂದ ಉಪದೇಶ ನೀಡುತ್ತಿದ್ದಾರೆ. ಸ್ವಾತಂತ್ರ್ಯ ಚಳುವಳಿಯ ಅಂತರ್ಗತ ಮೌಲ್ಯಗಳಿಗೂ, ಪರಂಪರೆಗೂ, ಈ ಜನರು ಪ್ರತಿಪಾದಿಸುವ ರಾಜಕೀಯ, ಸೈದ್ಧಾಂತಿಕ ವಿಚಾರಧಾರೆಗೂ ಯಾವುದೇ ತಾಳ ಮೇಳ ಇಲ್ಲ ಎಂಬುದು ಸ್ಪಷ್ಟ. ಈ ಜನರ ಗೋಸುಂಬೆತನ ಮಾತ್ರವೇ ಈ ಸತ್ಯವನ್ನು ಒಂದಷ್ಟು ಮಸುಕಾಗಿಸಬಹುದು.

> ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕೇಸರಿ ಬಾವುಟ ಹಿಡಿದ ಜನ ಇಂದು ದೇಶವನ್ನಾಳುತ್ತಿದ್ದಾರೆ. ಸ್ವಯಂ ಸೇವಕರಾದ ಅಟಲ ಬಿಹಾರಿ ವಾಜಪೇಯಿಯವರು ಕೆಂಪು ಕೋಟೆಯಿಂದ ತಮ್ಮ 5ನೇ ಸ್ವಾತಂತ್ರ್ಯ ದಿನದ ಭಾಷಣ ಮಾಡಿದ ಪರಿಸ್ಥಿತಿ ಇತಿಹಾಸದ ವ್ಯಂಗ್ಯಗಳಲ್ಲೊಂದಾಗಿದೆ.


1987 ರಿಂದ ದೇಶದ ವಿವಿಧ ಭಾಗಗಳಲ್ಲಿ ಗ್ರಾಮಾಂತರ ಪ್ರದೇಶಗಳಷ್ಟು ಭೀಕರ ಬರ ಪರಿಸ್ಥಿತಿಯಿಂದ ಲಕ್ಷಾಂತರ ರೈತರು, ಕೂಲಿಕಾರ್ಮಿಕರು, ಕುಶಲ ಕರ್ಮಿಗಳ ಬದುಕು ನಲುಗುತ್ತಿದೆ. ಹಲವು ವರ್ಷಗಳ ಉತ್ತಮ ಮಾನ್‌ಸೂನ್‌ನ ನಂತರ ಬರುವ ಒಂದ ಬರಗಾಲವನ್ನು ಎದುರಿಸಲು ನಮ್ಮ ಸರ್ಕಾರ ಸಜ್ಜಾಗಿಲ್ಲ ಎಂಬುದು ಸಿದ್ಧವಾಗಿದೆ. ಕೆಲಸವಿಲ್ಲದೆ, ಕೂಲಿ ಇಲ್ಲದೆ, ಜನರ ಗ್ರಾಮಾಂತರ ಬಡತನದಲ್ಲಿ ಏರಿಕೆ ಕಂಡು ಬಂದಿದ್ದರೆ, ದೇಶದ ಗೋದಾಮುಗಳಲ್ಲಿ ಸಂಗ್ರಹಿಸಲಾಗಿರುವ 65 ಮಿಲಿಯನ್ ಟನ್ ಆಹಾರ ಧಾನ್ಯವು ಪ್ರತಿಯೊಬ್ಬ ಮನುಷ್ಯನ ಕಣ್ಣೀರನ್ನು ಒರೆಸುವ ಗಾಂಧೀಜಿಯವರ ಕನಸನ್ನು ಅಣಕಿಸುತ್ತಿವೆ.

ಜನಗಳ ಸಂಕಟಗಳ ಕಡೆಗೆ ಕಣ್ಣು ಮುಚ್ಚಿಕೊಂಡಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಭ್ರಷ್ಟಾಚಾರವನ್ನು ಸಂಸ್ಥೀಕರಣಗೊಳಿಸುವುದರಲ್ಲಿ, ಹಗರಣಗಳಲ್ಲಿ ಮುಳುಗಿದೆ. 'ತೆಹಲ್ಕಾ' ಹಗರಣದಂತೆ 'ಪೆಟ್ರೋಲ್ ಪಂಪ್ ಹಗರಣ' ದಲ್ಲಿ ಸಕಲ ಸಾಕ್ಷ್ಯಾಧಾರಗಳ ಸಹಿತ ಸಿಕ್ಕಿ ಬಿದ್ದಿದ್ದಾರೆ. ಆದರೆ ಅವರು ತಾನು ಹೊಣೆಗಾರಿಕೆಯಿಂದ ಜಾರಿಕೊಳ್ಳಲು ಮಾಧ್ಯಮದವರ ಮೇಲೆ ಹರಿಹಾಯುತ್ತಿದ್ದಾರೆ. ಮುಖ್ಯ ಚುನಾವಣಾ ಆಯುಕ್ತರು ತಮ್ಮ ಆಕಾಂಕ್ಷೆ ಬಯಕೆಗಳಿಗೆ ತಕ್ಕಂತೆ ನಡೆಯುತ್ತಿಲ್ಲವೆಂಬ ಕಾರಣಕ್ಕೆ ಅವರ ಮೇಲೂ ಬಹಿರಂಗವಾಗಿ ಹರಿಹಾಯಲಾಗುತ್ತಿದೆ. ಸರ್ಕಾರದ ಮೇಲೆ ಸರ್ವಾಧಿಕಾರಿ ಹಿಂದುತ್ವದ ಹಿಡಿತ ಬಹಿರಂಗಗೊಳ್ಳುತ್ತಿದೆ.

ಈ ನಕಲಿ ರಾಷ್ಟ್ರೀಯವಾದಿಗಳು ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ ಸ್ವಾತಂತ್ರ್ಯ ಸಂಗ್ರಾಮದ ಸ್ಫೂರ್ತಿಯನ್ನು ಹಾಳುಗೆಡವಿದ್ದಾರೆ. ಸ್ವಾತಂತ್ರ್ಯ ಚಳುವಳಿಗೆ ಜನರನ್ನು ಸೆಳೆಯುವಲ್ಲಿ ಅತ್ಯಂತ ಮಹತ್ವ ಪಾತ್ರ ವಹಿಸಿದ ಪತ್ರಿಕಾ ರಂಗವನ್ನು ವಿದೇಶಿ ಬಂಡವಾಳದಾರರಿಗೆ ತೆರೆಯಲಾಗಿದೆ. ಈ ಬಿಜೆಪಿ-ಆಡಳಿತಕ್ಕೆ ದೇಶದ ಸಾರ್ವಭೌಮತೆ ಹಾಗೂ ಸ್ವಾತಂತ್ರ್ಯಕ್ಕೆ ದ್ರೋಹ ಬಗೆಯಲು ಮಿತಿಯೇ ಇಲ್ಲ ಎಂದು ತೋರುತ್ತಿದೆ.

ಮುಂದೆ ಆಗಸ್ಟ್ 15 ರ ದಿನ ಆಚರಣೆ ಅರ್ಥಪೂರ್ಣವಾಗಬೇಕಾದಲ್ಲಿ ಈ ವಿದ್ರೋಹಿ ಕೂಟವನ್ನು ಜನ ದೂರ ತಳ್ಳಬೇಕಾಗಿದೆ. ○

ಸಂವಿಧಾನ ಸತ್ತಿಲ್ಲ - ಕೋಮುವಾದಿಗಳಿಗೆ ಚುನಾವಣಾ ಆಯೋಗದ ದಿಟ್ಟ ಉತ್ತರ



ಕೋಮು ಆಧಾರದಲ್ಲಿ ವಿಭಜನೆ ಗೊಂಡಿರುವ ಗುಜರಾತಿನಲ್ಲಿ ಚುನಾವಣೆ ನಡೆಸಲು ಸಮಯ ತಕ್ಕುದಲ್ಲ ಎಂದು ಹೇಳಿರುವ ಚುನಾವಣಾ ಆಯೋಗ ನವೆಂಬರ್-ಡಿಸೆಂಬರ್ ನಂತರವೇ ಪರಿಸ್ಥಿತಿ ಯನ್ನು ಅರಿತು ಚುನಾವಣೆ ನಡೆಸುವುದಾಗಿ ಅಧಿಕಾರರೂಢ ಬಿಜೆಪಿಗೆ ದಿಟ್ಟ ಉತ್ತರ ನೀಡಿದೆ.

ಕೋಮುದಳ್ಳುರಿಯ ಬೇಗೆಯಲ್ಲಿ ಬೆಂದ ಜನ ಇನ್ನೂ ಸರಿಯಾದ ಆಶ್ರಯ ಪಡೆದಿಲ್ಲ. ಮನೆ ಕಳಕೊಂಡ ಜನ, ಊರಿಗೆ ಹಿಂದಿರುಗ ಲಾಗದವರು, ಮತದಾರ ಪಟ್ಟಿಯಲ್ಲಿ ತಮ್ಮ ಹೆಸರು ನೊಂದಾಯಿಸಿ ಕೊಳ್ಳಲು ಸಾಧ್ಯವಾಗಿಲ್ಲ. ಆದರೂ ಪರಿಸ್ಥಿತಿಯ ಲಾಭ ಪಡೆದು ಅಧಿಕಾರಕ್ಕೆ ಬರುವ ದುರಾಸೆಯಿಂದ ಹೇಳದೆ ಕೇಳದೆ ಅವಧಿಗೆ ಮೊದಲೇ ಅಸೆಂಬ್ಲಿಯನ್ನು ವಿಸರ್ಜಿಸಿತ್ತು - ನರಹಂತಕ ನರೇಂದ್ರ ಮೋದಿ ಸರಕಾರ. ಅದಕ್ಕೆ ಮೊದಲೂ ಪ್ರತಿಪಕ್ಷಗಳ ಟೀಕೆಗೆ ಹೆದರಿ ವಿಧಾನಸಭೆಯನ್ನೇ ಕರೆದಿರಲಿಲ್ಲ. ಮಾತ್ರವಲ್ಲ ವಾಸ್ತವ ಪರಿಸ್ಥಿತಿಯನ್ನು ಅಭ್ಯಸಿಸಲು ತೆರಳಿದ ಚುನಾವಣಾ ಆಯೋಗದ ಮೇಲೆಯೇ ಕಿಡಿಕಾರಿತ್ತು. ಆದರೂ ಕೂಲಂಕುಷವಾಗಿ ಪರಿಸ್ಥಿತಿಯನ್ನು ಅಭ್ಯಾಸ ಮಾಡಿದ ಆಯೋಗ, ಮೊದಲು 9 ಸದಸ್ಯರ ಸಮಿತಿಯನ್ನು ಕಳಿಸಿದ್ದು ನಂತರ ಆಯೋಗವೇ ಸ್ವತಃ ತೆರಳಿ ಪರಿಸ್ಥಿತಿಯನ್ನು ಪರಿಶೀಲಿಸಿತ್ತು.


'ಪರಿಸ್ಥಿತಿ ಇನ್ನೂ ತಿಳಿಯಾಗಿಲ್ಲ' ಎಂದು ಹೇಳಿರುವ ಚುನಾವಣಾ ಆಯೋಗ ಮತದಾರರ ಪಟ್ಟಿಯನ್ನು ಪರಿಷ್ಕರಿಸಿ, ಸೂಕ್ತ ವಾತಾವರಣದ ನಿರ್ಮಾಣದ ನಂತರವೇ ಚುನಾವಣೆ ನಡೆಸಲಾಗುವುದು ಎಂದು ಹೇಳಿದೆ.

ಆಯೋಗದ ನಿರ್ಧಾರ ಅತ್ಯಂತ ಸ್ವಾಗತಾರ್ಹವಾದುದು.

ಸ್ವಾತಂತ್ರ್ಯ ಸಂಸ್ಥೆಯಾದ ಚುನಾವಣಾ ಆಯೋಗದ ನಿರ್ಧಾರವನ್ನು ಒಪ್ಪಿಕೊಳ್ಳುವಾದಿಗ ಉಪಪ್ರಧಾನಿ ಎಲ್.ಕೆ.ಅಡ್ವಾಣಿ ಲೋಕಸಭೆ ಯಲ್ಲಿ ಹೇಳಿಕೆ ನೀಡಿದ್ದರೂ, ಇದೀಗ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಲು ಕೇಂದ್ರ ಸಂಪುಟ ಸಭೆ ನಿರ್ಧರಿಸಿದ್ದು ರಾಷ್ಟ್ರಪತಿಯ ಅಭಿಪ್ರಾಯವನ್ನು ಕೋರಿದೆ. ಆ ಮೂಲಕ ತನ್ನ ಪಕ್ಷಪಾತದ ನಿರ್ಧಾರವನ್ನು ಹೇರಲು ರಾಷ್ಟ್ರಪತಿಯವರ ಹೆಸರನ್ನು ಬಳಸಿದೆ. ಪ್ರಜ್ಞಾವಂತ ನಾಗರಿಕರು ಇದನ್ನು ವಿರೋಧಿಸಲೇಬೇಕು. ○

ಕಸುವು ಮಾಗದ ಕ್ಯಾಸ್ಟ್ರೋ -76

ಹವಾನಾ : ಅಮೆರಿಕದ ಮಗ್ಗಲ ಮುಳ್ಳಾಗಿರುವ ಕಮ್ಯುನಿಸ್ಟ್ ರಾಷ್ಟ್ರ ಕ್ಯೂಬಾದ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೊ ಅವರಿಗೆ ಮಂಗಳವಾರ 76 ವರ್ಷ ತುಂಬಿತು. ಈ ಸಂದರ್ಭದಲ್ಲೂ ಅವರು ಜೀವನ ಪರ್ಯಂತ ಬೆಳೆಸಿಕೊಂಡು ಬಂದಿರುವ ಸಾಮ್ರಾಜ್ಯಶಾಹಿ ಅಮೆರಿಕ ವಿರೋಧಿ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು.



1926 ಆಗಸ್ಟ್ 13 ರಂದು ದೇಶದ ಪೂರ್ವಭಾಗದ ಬಿರಾನ್‌ನಲ್ಲಿ ಜನಿಸಿದ ಕ್ಯಾಸ್ಟ್ರೋ ಇದುವರೆಗೆ ತಮ್ಮ ಜೀವನದ ಅರ್ಧಕ್ಕೂ ಹೆಚ್ಚಿನ ಭಾಗವನ್ನು ಅಧಿಕಾರದಲ್ಲಿ ಕಳೆದಿದ್ದು ದೈತ್ಯ ಅಮೆರಿಕದ ವಿರುದ್ಧ ಪುಟ್ಟ ರಾಷ್ಟ್ರ ಕ್ಯೂಬಾವನ್ನು ಎಲ್ಲಾ ಅಡ್ಡಿ ಆತಂಕಗಳ ನಡುವೆ ಮುನ್ನಡೆಸುತ್ತಿದ್ದಾರೆ. ಜನ್ಮದಿನದಂದು ಅವರು ಶಾಲೆಗಳ ನವೀಕರಣ ಕಾರ್ಯ ಹಾಗೂ ವೈದ್ಯರ ಪದವಿ ಪ್ರದಾನ ಸಮಾರಂಭಗಳಲ್ಲಿ ಭಾಗವಹಿಸಿದರು. "ನಮ್ಮ ಕನಸುಗಳನ್ನು ನಾಶಮಾಡಲು ಜಗತ್ತಿನ ಯಾವ ಶಕ್ತಿಗೂ ಸಾಧ್ಯವಿಲ್ಲ" ಎಂದು ಕ್ಯಾಸ್ಟ್ರೋ ಒಂದು ಸಮಾರಂಭದಲ್ಲಿ ಘೋಷಿಸಿದರು. ಅಮೆರಿಕ ಖಂಡಗಳಲ್ಲಿ ಕಮ್ಯುನಿಸ್ಟ್ ಆಡಳಿತ ದೇಶ ಕ್ಯೂಬಾ ಒಂದೇ ಎಂಬ ಮಹತ್ವದ ಅಂಶವನ್ನು ಈ ಮೂಲಕ ಅವರು ದೃಢಪಡಿಸಿದರು. ಬೇಸ್ ಬಾಲ್ ಪ್ರೇಮಿ ವಕೀಲ ಕ್ಯಾಸ್ಟ್ರೋ 1956ರಲ್ಲಿ 32ನೇ ವಯಸ್ಸಿನಲ್ಲಿ ಕ್ರಾಂತಿ ಮೂಲಕ ದ್ವೀಪ ರಾಷ್ಟ್ರದ ಚುಕ್ಕಾಣಿ ಹಿಡಿದರು. ಅಮೇರಿಕದ ಆಗ್ನೇಯ ತೀರದಿಂದ ಕೇವಲ 144 ಕಿಮೀ ದೂರವಿರುವ ಕಮ್ಯುನಿಸ್ಟ್ ಕ್ಯೂಬಾವನ್ನು ಮುಗಿಸಲು ಹಾಗೂ ಕ್ಯಾಸ್ಟ್ರೋರನ್ನು ಹತ್ಯೆಗೈಯಲು ಅಮೇರಿಕ ನಡೆಸದ ಸಂಚೇ ಇಲ್ಲ.

ಕೃಪೆ: ಕನ್ನಡ ಪ್ರಭ



ಶಿಕ್ಷಣದ ಅವ್ಯವಸ್
ಟ್ಯೂಷನ್ ಪಿ

ಖಾಸಗಿ ಟ್ಯೂಷನ್ ಕುರಿತು ರಾಜ್ಯಾದ್ಯಂತ ವ್ಯಾಪಕವಾದ ಚರ್ಚೆ ನಡೆಯುತ್ತಿದೆ. ಟ್ಯೂ ಟ್ಯೂಷನ್ ಮಾಡುವ ಶಿಕ್ಷಕರಿಗೆ ನೋಟಿಸು, ಟ್ಯೂಷನ್ ನಿಲ್ಲಿಸುವ ಬಗ್ಗೆ ಸರ್ಕಾರ ಮೆಚ್ಚಬಹುದಾದಂತಹ ಕ್ರಮಗಳು. ಟ್ಯೂಷನ್ ಬೇಕೆಂದು ಒಂದು ವಿಭಾಗದ ಪೋಷ ಬೇಡವೆಂದು, ನಿಷೇಧಿಸಬೇಕೆಂದು ಪ್ರಗತಿಪರ ಸಂಘಟನೆಗಳ ಒತ್ತಾಯ ಹೀಗೆ.... ಹೋಗಿದೆ ಎಂದು ಭಾವಿಸಬೇಕಾದ ಸಂದರ್ಭಗಳೂ ಇಲ್ಲ. ಈ ಅನಾರೋಗ್ಯಕಾರಿ ವಿವರಿಸಿದ್ದಾರೆ.

ಟಿ.ಎಲ್.ಕೃಷ್ಣೇಗ

ಟ್ಯೂಷನ್ ಅಥವಾ ಮನೆ ಪಾಠವೆಂಬುದು ಈಗೊಂದು ಸಾಮಾಜಿಕ, ಶೈಕ್ಷಣಿಕ ಪಿಡುಗಾಗಿದೆ. ಇದು ಕೇವಲ ಎಸ್‌ಎಸ್‌ಎಲ್‌ಸಿ ಅಥವಾ ದ್ವಿತೀಯ ಪಿಯುಸಿಗೆ ಮಾತ್ರ ಸೀಮಿತಗೊಂಡಿಲ್ಲ, ಶೈಕ್ಷಣಿಕ ಜೀವನದ ಪ್ರತಿಯೊಂದು ಪ್ರಮುಖ ಘಟ್ಟವನ್ನು ದಾಟುವ ಹೊಸ್ತಿನಲ್ಲಿರುವ ಎಲ್ಲರೂ 'ಟ್ಯೂಷನ್' ನ ಮೊರೆ ಹೋಗಿ ತಮ್ಮನ್ನು 'ಸ್ಪರ್ಧೆ'ಗೆ ಸಜ್ಜುಗೊಳಿಸಿಕೊಳ್ಳುವ ಯತ್ನವನ್ನು ಕಾಣಬಹುದು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಗೆ ಟ್ಯೂಷನ್ ಕೇಂದ್ರಗಳಿರುವಂತೆಯೇ ಕೆಎಎಸ್, ಐಎಎಸ್ ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕೂರುವವರು ಕೂಡ ವಿಶೇಷ ತರಬೇತಿಯ ಹೆಸರಿನಲ್ಲಿ 'ಟ್ಯೂಷನ್ ಮಾದರಿಯಲ್ಲೇ ತರಬೇತುಗೊಳ್ಳುತ್ತಾರೆ.

ಆಧುನಿಕ ಗುರುಕುಲಗಳು

ಒಟ್ಟಾರೆ ಈ ಎಲ್ಲಾ ಹಂತಗಳಲ್ಲೂ ಟ್ಯೂಷನ್ ಮಾಡುವವರು ಅಥವಾ ತರಬೇತಿ ಕೇಂದ್ರಗಳು ಸ್ವಯಂ ನಿಗದಿಗೊಳಿಸಿಗೊಳ್ಳುವಷ್ಟು ಹಣವನ್ನು ನೀಡಲು ಶಕ್ತರಾಗಿರುತ್ತಾರೊ ಅಂತಹವರು ಇದರ ಪ್ರಯೋಜನ ಪಡೆದುಕೊಳ್ಳುತ್ತಾರೆ. ಅಂದರೆ ಶಿಕ್ಷಣ ಅಥವಾ ಕುಶಲತೆಯನ್ನು ನಿಗದಿಗೊಳಿಸಿದ ಹಣಕ್ಕೆ ಕೊಂಡುಕೊಳ್ಳುತ್ತಾರೆ. ಆದ್ದರಿಂದ ಈಗಾಗಲೇ ಸಾಮಾಜಿಕ ಶ್ರೇಣಿಕರಣದ ಜೊತೆಗೆ ಆರ್ಥಿಕ ಶ್ರೇಣೀಕರಣವೊಂದು ಉಂಟಾಗುತ್ತಿದ್ದು, ಆರ್ಥಿಕವಾಗಿ ದುರ್ಬಲರಾದವರು ಇಂತಹ ಅವಕಾಶಗಳಿಂದಲೇ ವಂಚಿತರಾಗುತ್ತಾರೆ. ಎರಡು ದಶಕಗಳ ಹಿಂದೆ ಟ್ಯೂಷನ್ ಎಂಬುದು ದುರ್ಬಲರಾದ ವಿದ್ಯಾರ್ಥಿಗಳನ್ನು ಸಬಲರಾಗಿಸುವ ಒಂದು ಕ್ರಮವಾಗಿತ್ತು. ಹಾಗಾಗಿ ಮನೆ ಪಾಠಕ್ಕೆ ಹೋಗುವವರನ್ನು ದುರ್ಬಲರೆಂದು ಭಾವಿಸುತ್ತಿದ್ದರು. ಮನೆ ಪಾಠವೆಂದರೆ ನಾಚಿಕೆ ಮತ್ತು ಸಂಕೋಚದ ವಿಷಯವಾಗಿತ್ತು. ಆದರೆ ಈಗ ಮನೆಪಾಠವೆಂಬುದು ಒಂದು 'ಮಾಫಿಯಾ' ವಾಗಿಬಿಟ್ಟಿದೆ. ಕೆಲವರಿಗೆ ಮನೆ ಪಾಠಕ್ಕೆ ಹೋಗುವುದೆಂದರೆ ಒಂದು ರೀತಿಯ ಫ್ಯಾಷನ್. ದುರ್ಬಲರು ಶೈಕ್ಷಣಿಕವಾಗಿ ತಮ್ಮನ್ನು ಉತ್ತಮಪಡಿಸಿಕೊಳ್ಳುವ ಒಂದು ವಿಧಾನವಾಗಿದ್ದ ಟ್ಯೂಷನ್ ಕಳೆದ ಎರಡು ದಶಕಗಳಲ್ಲಿ ಒಂದು ಪಿಡುಗಾಗಿ ಬೆಳೆದು ಈಗ ಕೇವಲ ಹಣವುಳ್ಳವರು, ಈಗಾಗಲೇ ಬುದ್ಧಿವಂತರಾಗಿರುವವರು ತಮ್ಮನ್ನು ಮತ್ತಷ್ಟು ಸಬಲರನ್ನಾಗಿಸಿಕೊಳ್ಳುವ ಒಂದು ಮಾರ್ಗವಾಗಿದೆ. ಮನೆಪಾಠ ಹೇಳುವ ಶಿಕ್ಷಕರು ಹಣ ಸಂಪಾದನೆಗೆ ಇದನ್ನೊಂದು ಆಯುಧವನ್ನಾಗಿಸಿಕೊಂಡಿದ್ದಾರೆ. ಈಗ ಇದೊಂದು ಪರ್ಯಾಯ ಶಿಕ್ಷಣ ವ್ಯವಸ್ಥೆಯೆಂಬಂತೆ ಕಾರ್ಯ ನಿರ್ವಹಿಸುತ್ತಿದ್ದು, ಆಧುನಿಕ ಗುರುಕುಲ ಪದ್ಧತಿಯಾಗಿದೆ. ಪ್ರಾಚೀನ ಗುರುಕುಲದಲ್ಲಿ ಸಾಮಾಜಿಕ ಶ್ರೇಣೀಕರಣ ಕೆಲವರನ್ನು ಶಿಕ್ಷಣದಿಂದ ವಂಚಿಸಿದಂತೆ ಈ ಆಧುನಿಕ ಗುರುಕುಲವು ಆರ್ಥಿಕ ಶ್ರೇಣೀಕರಣದಲ್ಲಿ ಕೆಳಗಿರುವವರನ್ನು ಶಿಕ್ಷಣದಿಂದ ವಂಚಿಸುತ್ತಿದೆ.

ಪ್ರಾಚೀನ ಗುರುಕುಲದಲ್ಲಿ ಸಾಮಾಜಿಕ ಶ್ರೇಣೀಕರಣ ಕೆಲವರನ್ನು ಶಿಕ್ಷಣದಿಂದ ವಂಚಿಸಿದಂತೆ ಈ ಆಧುನಿಕ ಗುರುಕುಲವು ಆರ್ಥಿಕ ಶ್ರೇಣೀಕರಣದಲ್ಲಿ ಕೆಳಗಿರುವವರನ್ನು ಶಿಕ್ಷಣದಿಂದ ವಂಚಿಸುತ್ತಿದೆ.

ಈ ಟ್ಯೂಷನ್ ವ್ಯವಸ್ಥೆಯು ಇಷ್ಟೊಂದು ಗಂಭೀರ ಸಮಸ್ಯೆಯಾಗಿ ಬೆಳೆಯಲು ನಮ್ಮ ಆರ್ಥಿಕ-ಶೈಕ್ಷಣಿಕ ರಂಗದಲ್ಲಿ ಕಳೆದ ಎರಡು ದಶಕಗಳಲ್ಲಿ ಆದಂತಹ ಆತಂಕಕಾರಿ ಬದಲಾವಣೆಗಳೇ ಕಾರಣವಾಗಿವೆ. ಕಳೆದ ಎರಡು ದಶಕಗಳಲ್ಲಿ ಭಾರತದ ಆಳುವವರ್ಗ ಅನುಸರಿಸಿ ಕೊಂಡು ಬಂದ ಬಂಡವಾಳಶಾಹಿ- ಸಾಮ್ರಾಜ್ಯ ಶಾಹಿ ಪರ ಆರ್ಥಿಕ ನೀತಿಗಳ ಫಲವಾಗಿ ಶಿಕ್ಷಣರಂಗ ಗಂಭೀರ ಬಿಕ್ಕಟ್ಟಿಗೆ ಸಿಲುಕಿದೆ. ಈ ಬಿಕ್ಕಟ್ಟಿನ ಒಂದು ಭಾಗವಾಗಿ ಈ ಟ್ಯೂಷನ್ ಸಮಸ್ಯೆಯನ್ನು ನೋಡಬೇಕಾಗಿದೆ.

ಸ್ವಾತಂತ್ರ್ಯಾನಂತರದಲ್ಲಿ ಭಾರತದ ಆಳುವವರ್ಗ ಅನುಸರಿಸಿದ ಬಂಡವಾಳಶಾಹಿ ಭೂಮಾಲಿಕಪರ ಆರ್ಥಿಕ ನೀತಿಯಿಂದಾಗಿ ಇಡೀ ಆರ್ಥಿಕ ವ್ಯವಸ್ಥೆ 80 ರ ದಶಕದ ಹೊತ್ತಿಗೆ ಒಂದು ಗಂಭೀರ ಬಿಕ್ಕಟ್ಟಿನ ಹಂತ ತಲುಪಿತು. ಇದರಿಂದ ಹೊರಬರಲು ಐಎಂಎಫ್-ವಿಶ್ವಬ್ಯಾಂಕ್ ನಿರ್ದೇಶಿತ ನೂತನ ಆರ್ಥಿಕ ನೀತಿಗಳು ಆರಂಭವಾಗಿ, ಪಿ.ವಿ.ನರಸಿಂಹರಾವ್, ಮನಮೋಹನ್ ಸಿಂಗ್ ಜೋಡಿ 1991 ರಲ್ಲಿ ಇದಕ್ಕೊಂದು ಸ್ಪಷ್ಟ ದಿಕ್ಕು ತೋರಿಸಿದರು. ಈ ನೂತನ ಆರ್ಥಿಕ ನೀತಿಗಳು ಸಮಸ್ಯೆಗಳನ್ನು ಪರಿಹರಿಸುವುದರ ಬದಲು ಮತ್ತಷ್ಟು ಹೊಸ ಸಮಸ್ಯೆಗಳಿಗೆ ದಾರಿ ಮಾಡಿಕೊಟ್ಟವು. ನಿರುದ್ಯೋಗದ ಹೆಚ್ಚಳ, ಹೊಸ ಉದ್ಯೋಗವಕಾಶಗಳು ಸೃಷ್ಟಿಯಾಗದಿರುವುದು, ಕೈಗಾರಿಕೆಗಳು ಮುಚ್ಚಿ, ಅತಿಯಾದ ತಂತ್ರಜ್ಞಾನದ ಅಳವಡಿಕೆಯಿಂದ ಇರುವ ಉದ್ಯೋಗಗಳೂ ತೀವ್ರ ಪ್ರಮಾಣದಲ್ಲಿ ಕಡಿತಕ್ಕೊಳಗಾದವು. ಅಂದರೆ ಶಿಕ್ಷಣ ಮುಗಿಸಿ ಹೊರಬರುವ ಯುವ ಜನತೆಗೆ ಉದ್ಯೋಗ ಮಾಡಿ ಬದುಕುವ ಅವಕಾಶಗಳು ಅತಿಯಾಗಿ ಸೀಮಿತಗೊಂಡು ಬದುಕುವ ಅವಕಾಶಕ್ಕಾಗಿ ತೀವ್ರವಾಗಿ ಸ್ಪರ್ಧಿಸಬೇಕೆನ್ನುವ ಅನಿವಾರ್ಯ ಸೃಷ್ಟಿಯಾಯಿತು.

ಯಾವಾಗಲೂ ಆಳುವ ವರ್ಗದ ನೀತಿಗಳ ಜೊತೆ ತಳುಕುಹಾಕಿ ಕೊಂಡಿರುವ ಶಿಕ್ಷಣರಂಗವೂ ಬಿಕ್ಕಟ್ಟಿನಿಂದ ಹೊರತಾಗಿರಲು ಸಾಧ್ಯವಿರಲಿಲ್ಲ. ಆಳುವವರ್ಗ ಯಾವಾಗಲೂ ಶಿಕ್ಷಣ ರಂಗವನ್ನು ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಮರ್ಥವಾಗಿ ಬಳಸಿಕೊಳ್ಳುತ್ತದೆ. ಅಂದರೆ ತನ್ನ ಉತ್ಪಾದನಾ ವಲಯಗಳಲ್ಲಿ ದುಡಿಯಲು ಬೇಕಾದ ಸಮರ್ಥರನ್ನು ತಯಾರು ಮಾಡುತ್ತದೆ ಎಂಬುದು ಸ್ವಾತಂತ್ರ್ಯಾನಂತರದ ಶಿಕ್ಷಣ ನೀತಿಗಳನ್ನು ನೋಡಿದರೆ ಮನದಟ್ಟಾಗುತ್ತದೆ. 80 ರ ದಶಕದ ವರೆಗೂ ಅಗತ್ಯವಿದ್ದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆ, ತಾಂತ್ರಿಕ-ಉನ್ನತ ಶಿಕ್ಷಣ ವಲಯ, ಅದರಿಂದ ಹೊರಬರುವ ಶಿಕ್ಷಿತ ಜನರು ಆಳುವ ವರ್ಗದ ಅಗತ್ಯಗಳಿಗೆ ಸಾಕಾಗುತ್ತಿದ್ದರು. ಮತ್ತು ಹೀಗೆ ಸಾರ್ವಜನಿಕ ವಲಯದಲ್ಲಿ ಶಿಕ್ಷಣ ನೀಡಿ ತಂತ್ರಜ್ಞರು, ಕುಶಲ ದುಡಿಯುವಜನರನ್ನು ತಯಾರು ಮಾಡಬೇಕಾದ ಅನಿವಾರ್ಯತೆ ಆಳುವ ಜನರಿಗಿತ್ತು. ಆದರೆ 80 ರ ದಶಕದಲ್ಲಿ ಬದಲಾದ ಆದ್ಯತೆಗಳಿಂದ ಸಾರ್ವಜನಿಕ ಶಿಕ್ಷಣ ರಂಗವನ್ನು ಸಂಪೂರ್ಣ ನಿರ್ಲಕ್ಷಿಸಿ, ಖಾಸಗೀ ವಲಯವನ್ನು ವ್ಯಾಪಕವಾಗಿ ಪ್ರೋತ್ಸಾಹಿಸಲಾಯಿತು. ಕೇವಲ ತನ್ನ ಲಾಭವನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಸಮಗ್ರ ಅಭಿವೃದ್ಧಿಯನ್ನು ಕಡೆಗಣಿಸಿದ ಬಂಡವಾಳಶಾಹಿ ಪ್ರಭುಗಳು ಕೇವಲ ತಾಂತ್ರಿಕ ಶಿಕ್ಷಣಕ್ಕೆ, ವೈದ್ಯಕೀಯ ಶಿಕ್ಷಣ್ಕಕೆ ಮಹತ್ವ ನೀಡಿ ಅತಿಯಾಗಿ ಪ್ರಚಾರ ನಡೆಸಿದರು. ಸಹಜವಾಗಿ ಇದರ ಜೊತೆಯಲ್ಲೇ ಬಂಡವಾಳಶಾಹಿ ಗ್ರಾಹಕ ಸಂಸ್ಕೃತಿಯ ಆಸೆಬುರುಕ ಸಾಂಸ್ಕೃತಿಕ ಮೌಲ್ಯಗಳನ್ನು ವ್ಯಾಪಕವಾಗಿ ಬಿತ್ತಲಾಯಿತು. ತಾಂತ್ರಿಕ ಶಿಕ್ಷಣ ಪಡೆದ ಕೆಲವೇ ಜನರಿಗೆ ವಿಪರೀತ ಸೌಲಭ್ಯಗಳನ್ನು ನೀಡಿ ವೈಭವೀಕರಿಸಿ, ತಾಂತ್ರಿಕ ಮಾಹಿತಿ ತಂತ್ರಜ್ಞಾನದ ಶಿಕ್ಷಣವನ್ನು ಪಡೆದರೆ ಸುಖೀ ಜೀವನ ನಡೆಸಬಹುದೆಂಬ ಅಮಲು ಹತ್ತಿಸಲಾಯಿತು. ಈ ಶಿಕ್ಷಣವನ್ನು ಪೂರೈಸಲು ಖಾಸಗಿ ವಲಯಕ್ಕೆ ಅವಕಾಶ ನೀಡಿ, ಲಕ್ಷಾಂತರ ರೂ.ಗಳ ಕ್ಯಾಪಿಟೇಷನ್ ಶುಲ್ಕ, ಡೊನೇಷನ್ ವಸೂಲಿ ಮಾಡಲು ಅಪ್ಪಣೆ ನೀಡಿ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಿಂದಲೇ ಪೂರೈಸಬಹುದಾಗಿದ್ದ ಈ ಅಗತ್ಯವನ್ನು ಕಡೆಗಣಿಸಿದರು.

ಬದುಕುವ ಬವಣೆ

ಒಂದು ಕಡೆ ಉದ್ಯೋಗಗಳ ಕಡಿತ, ಕಾರ್ಖಾನೆಗಳ ಮುಚ್ಚುವಿಕೆಯಿಂದ ನಿರುದ್ಯೋಗಿಗಳ ಪಡೆ ವ್ಯಾಪಕವಾಗಿ ಬೆಳೆದು ಬದುಕುವ ಅವಕಾಶದಿಂದಲೇ ವಂಚಿತರಾಗುತ್ತಿದ್ದ ಯುವ ಸಮುದಾಯ, ಮತ್ತೊಂದೆಡೆ, ತಾಂತ್ರಿಕ ವೈದ್ಯಕೀಯ ಕ್ಷೇತ್ರದಲ್ಲಿ ಶಿಕ್ಷಣ ಪಡೆದವರು ಉದ್ಯೋಗ ಪಡೆದು ಉತ್ತಮವಾಗಿ ಬದುಕಬಹುದೆಂಬ ವಾತಾವರಣ ವಿದ್ಯಾರ್ಥಿ-ಪೋಷಕ ಸಮುದಾಯವನ್ನು ತಾಂತ್ರಿಕ-ವೈದ್ಯಕೀಯ ಶಿಕ್ಷಣದ ಕಡೆ ಆಸೆಗಣ್ಣುಗಳಿಂದ ನೋಡುವಂತೆ ಮಾಡಿತು. ವೃತ್ತಿ ಶಿಕ್ಷಣ ಪಡೆಯದವರಿಗೆ ಭವಿಷ್ಯವೇ ಇಲ್ಲ ಎನ್ನುವ ಹುಸಿ ಕಲ್ಪನೆ, ಅದಕ್ಕೆ ತಕ್ಕಹಾಗೆ ಸಾಮಾನ್ಯ ಶಿಕ್ಷಣ ಪಡೆದವರಿಗೆ ಉದ್ಯೋಗ ಅವಕಾಶಗಳ ನಿರಾಕರಣೆಯನ್ನು ಮಾಡುತ್ತಿರುವ ಸರ್ಕಾರ, ಅಲ್ಪಸ್ವಲ್ಪ ಸಾಮಾನ್ಯ ಶಿಕ್ಷಣ ಪಡೆದವರಿಗೆ ಲಭ್ಯವಿದ್ದ ಉದ್ಯೋಗವಕಾಶಗಳನ್ನು ಖಾಸಗಿಕರಣದ ಹುಚ್ಚು ಹೊಳೆಯಲ್ಲಿ ಕೊಚ್ಚಿಕೊಂಡು ಹೋಗುವಂತೆ ಮಾಡಿರುವುದು ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸಿದೆ.

ತಾಂತ್ರಿಕ - ವೈದ್ಯಕೀಯ-ಉನ್ನತ ಶಿಕ್ಷಣ ಪಡೆಯಬೇಕೆಂದು ಬಯಸಿದವರಿಗೆ ಕಾಣಿಸಿದ್ದು ಲಕ್ಷಾಂತರ ಕೆಲವೊಮ್ಮೆ ಹತ್ತಾರು ಲಕ್ಷ ವಸೂಲಿ ಮಾಡಿ ಈ ಅಗತ್ಯ ಪೂರೈಸುತ್ತಿದ್ದ ಖಾಸಗಿ ಶಿಕ್ಷಣ ಸಂಸ್ಥೆಗಳು. ಆದ್ದರಿಂದ ಇಲ್ಲಿ ಅವಕಾಶ ಪಡೆಯಬೇಕೆಂದರೆ ಒಂದೊ ಲಕ್ಷಾಂತರ ರೂ. ಹಣ ರೂಡಿಸಿಕೊಳ್ಳಬೇಕು ಅಥವಾ ಇರುವ ಸೀಮಿತ ಅವಕಾಶದಲ್ಲೇ ಪ್ರಯತ್ನ ಪಟ್ಟು ಸೀಟು ಗಿಟ್ಟಿಸಿಕೊಳ್ಳುವುದು. ಈ ಪ್ರಯತ್ನದಲ್ಲಿ ಗೆಲ್ಲುವ ಕುದುರೆಗಳನ್ನು ತಯಾರು ಮಾಡಲು ನಿಧಾನವಾಗಿ ಆರಂಭವಾಗಿ ಇಂದು ಪೆಡಂಭೂತವಾಗಿ ಬೆಳೆದಿದೆ



ಕಾಲೇಜಿನಿಂದ ಹೊರಬರುತ್ತಿರುವುದಲ್ಲ, ಮನೆ ಪಾಠದಿಂದ!

ಈ ಟ್ಯೂಷನ್.

ಅನಾರೋಗ್ಯಕಾರಿ ಸ್ಪರ್ಧೆ

ಈ ಟ್ಯೂಷನ್ ವ್ಯವಸ್ಥೆ-ತರಬೇತಿಗೆ ಜನ ಮುಗಿಬೀಳುವುದು ಕೇವಲ ಪಿಯು-ಎಸ್‌ಎಸ್‌ಎಲ್‌ಸಿ ಮಟ್ಟಿಗೇ ಸೀಮಿತ ಗೊಂಡಿಲ್ಲ. ಪ್ರತಿಯೊಂದು ಸ್ಪರ್ಧಾಪರೀಕ್ಷೆಯ ಹಂತದಲ್ಲೂ ಈ ರೋಗವಿದೆ. ಇದು ಸಾಂಕ್ರಾಮಿಕವೂ ಆಗುತ್ತಿದೆ. ಇದಕ್ಕೆಲ್ಲ ಕಾರಣ ಬದುಕುವ ಅವಕಾಶಗಳನ್ನು ಸೀಮಿತಗೊಳಿಸಿ - ಸ್ಪರ್ಧೆಯಲ್ಲಿ ಗೆದ್ದವರಷ್ಟೇ ಬದುಕ ಬಹುದು, ಅವರು ಮಾತ್ರರೇ ಯೋಗ್ಯರು ಎಂದು ಬೊಬ್ಬೆಹೊಡೆದು ಅನಾರೋಗ್ಯಕಾರಿ, ಆತಂಕಕಾರಿ ಸ್ಪರ್ಧೆಗೆ ಅವಕಾಶ ಕಲ್ಪಿಸಿರುವ ಆಳುವ ವರ್ಗ, ಅದರ ಬಂಡವಾಳಶಾಹಿ ನೀತಿಗಳು.

ನಿರ್ಲಕ್ಷ್ಯದಿಂದ ಅಸಮರ್ಥಗೊಳ್ಳುತ್ತಿರುವ ಸಾರ್ವಜನಿಕ ಶಿಕ್ಷಣ ರಂಗ

ಸಾರ್ವಜನಿಕ ಶಿಕ್ಷಣ ರಂಗವನ್ನು ನಿರಂತರವಾಗಿ ನಿರ್ಲಕ್ಷಿಸಲಾಗುತ್ತಿದೆ. ಶಿಕ್ಷಣ ಸಂಸ್ಥೆಗಳಿಗೆ ನೀಡುತ್ತಿದ್ದ

...ಮುತ್ತು ...ಂಗು

...ಕೇಂದ್ರಗಳ ಮೇಲಿನ ದಾಳಿಗಳು,
...ಹೊಡೆಯುತ್ತಿದೆ ಎನಿಸಿದರೂ
...ದ್ಯಾರ್ಥಿಗಳ ಒತ್ತಾಯ, ಟ್ಯೂಷನ್
...ರಾಜ್ಯಾದ್ಯಂತ 'ಟ್ಯೂಷನ್' ನಿಂತು
...ಯ ವಿವಿಧ ಮಗ್ಗಲುಗಳನ್ನು ಇಲ್ಲಿ



...ಕ ನೆರವನ್ನು ಕಡಿತಗೊಳಿಸಲಾಗುತ್ತಿದೆ.
...ಲಿಯಿರುವ ಉಪನ್ಯಾಸಕರನ್ನು ಭರ್ತಿ ಮಾಡದೆ,
...ತ್ಯ ಸೌಲಭ್ಯ ಕಲ್ಪಿಸದೇ ಸರ್ಕಾರಿ ಸಂಸ್ಥೆಗಳು
...ಥವಾಗತ್ತಿವೆ. ಹಾಗೆಂದು ಖಾಸಗೀ ಸಂಸ್ಥೆಗಳು
...ರೀತಿಯಲ್ಲೂ ಸಮರ್ಥವಾಗಿವೆ ಎಂದೇನೂ
... ಹಲವಾರು ವರ್ಷಗಳಿಂದ ಅಗತ್ಯಕ್ಕನು
...ವಾಗಿ ಸೌಲಭ್ಯಗಳನ್ನು ವೃದ್ಧಿಪಡಿಸದಿರುವುದು,
...ದ್ಯಾರ್ಥಿಗಳ- ಶಿಕ್ಷಣಾರ್ಥಿಗಳ ಸಂಖ್ಯೆ
...ಚ್ಚಾಗುತ್ತಿದ್ದರೂ ಅದನ್ನು ಸಮರ್ಥವಾಗಿ
...ರಿಸಲು ಕ್ರಮ ಕೈಗೊಳ್ಳದಿರುವುದು ಸಮಸ್ಯೆ
...ಡಾಯಿಸಲು ಮತ್ತಷ್ಟು ಕಾರಣವಾಗಿದೆ.
...ರ್ವಜನಿಕ ಸಂಸ್ಥೆಗಳಲ್ಲಿ ಹೆಚ್ಚಾಗಿರುವ
...ದ್ಯಾರ್ಥಿಗಳ ಸಂಖ್ಯೆಯಿಂದಾಗಿ ಅಲ್ಲಿ
...ಯೊಬ್ಬರ ಬಗ್ಗೆಯೂ ಗಮನ ಹರಿಸುವುದು
...ರಿಗೂ ಸಾಧ್ಯವಾಗದ ಮಾತಾಗುತ್ತಿದೆ.
...ರಿಂದ ದೌರ್ಬಲ್ಯಗಳನ್ನು ಗುರುತಿಸಿ, ತಿದ್ದುವ



...ವಕಾಶಗಳೇ ಈ ಸಂಸ್ಥೆಗಳಲ್ಲಿ ಇಲ್ಲದಂತಾಗಿದೆ.
...ಮ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲೂ ಇರುವ
...ಸ್ತವವೇ ಆಗಿದೆ. ಆದ್ದರಿಂದ ಸ್ಪರ್ಧೆಗೆ
...ಚ್ಚಾಗಬೇಕಾದವರು, ವಿಶೇಷ ತರಬೇತಿಯ ಕಡೆ
...ಖ ಮಾಡುವ ಸನ್ನಿವೇಶವಿದೆ.

...ನೆ ಪಾಠದ ಪರಿಣಾಮಗಳು

ಈ ಮನೆಪಾಠದಲ್ಲಿ 'ಹಣ ಪಾವತಿಯೇ'
...ಖ್ಯವಾಗಿರುವುದರಿಂದ ಇದರ ಅವಕಾಶ
...ಲ್ಲರಿಗೂ ಸಿಗುವುದು ಮೇಲ್ನೋಟಕ್ಕೇ ಸಾಧ್ಯವಿಲ್ಲ.
...ವು ಕಡೆ ಒಂದು ವಿಷಯಕ್ಕೆ 4-5 ಸಾವಿರದವರೆಗೆ
...ಟ್ಯೂಷನ್ ಶುಲ್ಕ ವಸೂಲಿ-ಮಾಡಲಾಗುತ್ತಿದೆ.
...ದರೆ ನಮ್ಮ ವಿದ್ಯಾರ್ಥಿ ಸಮುದಾಯದ ದೊಡ್ಡ
...ಭಾಗಕ್ಕೆ ಈ ವ್ಯವಸ್ಥೆಯ ಲಾಭ ಪಡೆಯಲು
...ಧ್ಯವಿಲ್ಲ. ಅಂದರೆ ಇದರಿಂದ ಅವರು
...ಮದ್ದಲ್ಲದ ಕಾರಣಕ್ಕೆ ವಂಚಿತರಾಗಬೇಕಾಗುತ್ತದೆ.
...ರ್ಥಿಕವಾಗಿ ಹಿಂದುಳಿದವರು, ಬಡವರು
...ಟ್ಯೂಷನ್ ವ್ಯವಸ್ಥೆಯ ಲಾಭ ಪಡೆಯಲು ಸಾಧ್ಯವೇ

ಆಗುವುದಿಲ್ಲ. ಟ್ಯೂಷನ್ ಕೇಂದ್ರಗಳು ಸಾಮಾನ್ಯವಾಗಿ ನಗರಪ್ರದೇಶಗಳಲ್ಲಿ ಕೇಂದ್ರೀಕೃತವಾಗಿರುವುದರಿಂದ ಮತ್ತು ಮುಂಜಾನೆ ಅಥವಾ ಸಂಜೆ ಟ್ಯೂಷನ್ ನಡೆಯುವುದರಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳೂ ಬಹಳ ಮಂದಿ ಟ್ಯೂಷನ್ ಪಡೆಯಲು ಸಾಧ್ಯವಿಲ್ಲ. ಹಾಗೇನಾದರೂ ಟ್ಯೂಷನ್ ಬೇಕೆಂದರೆ ಅವರು ನಗರಗಳಲ್ಲೇ ವಾಸ್ತವ್ಯ ಹೂಡಬೇಕಾದ ಸ್ಥಿತಿಯಿದೆ. ಟ್ಯೂಷನ್‌ಗಳಲ್ಲಿ ಈಗಾಗಲೇ ಒಮ್ಮೆ ಪಾಠ ಕೇಳಿ, ಎರಡನೇ ಬಾರಿಗೆ ತರಗತಿಯಲ್ಲಿ ಪಾಠ ಕೇಳುವ ವಿದ್ಯಾರ್ಥಿಯ ಶ್ರದ್ಧೆಯೂ ಇತರೆ ವಿದ್ಯಾರ್ಥಿಗಳ ಕಲಿಕೆ ಮತ್ತು ಟ್ಯೂಷನ್ ಮಾಡದ ಉಪನ್ಯಾಸಕನ ಬೋಧನೆಯ ಮೇಲೆಯೂ ಗಂಭೀರ ಪರಿಣಾಮವನ್ನುಂಟು ಮಾಡುತ್ತದೆ. ಟ್ಯೂಷನ್ ಕೇಂದ್ರಗಳಲ್ಲಿ ಕೇವಲ 'ಥಿಯರಿ'ಯನ್ನು ಮಾತ್ರ ಬೋಧಿಸುವುದರಿಂದ ಉತ್ತಮ ತಾಂತ್ರಿಕ ವೈಜ್ಞಾನಿಕ ತಿಳುವಳಿಕೆಯೂ ಆ ವಿದ್ಯಾರ್ಥಿಗೆ ಲಭ್ಯವಾಗುವುದಿಲ್ಲ. ಜೊತೆಗೆ ಈ ಟ್ಯೂಷನ್ ಹೆಚ್ಚುವರಿ ಪಾಠಗಳು ಉಂಟುಮಾಡುವ ಮಾನಸಿಕ ಒತ್ತಡಗಳು, ಆಟ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಅವಕಾಶವೇ ಸಿಗದಿರುವುದು ಒಂದು ಅನಾರೋಗ್ಯಕಾರಿ ಬೆಳವಣಿಗೆಯಾಗಿದೆ.

ಒಟ್ಟಾರೆ ಟ್ಯೂಷನ್ ಎಂದರೆ ಕೇವಲ ಶ್ರೀಮಂತರ, ನಗರ ಪ್ರದೇಶಗಳ ಜನರ ವ್ಯವಸ್ಥೆ. ಈಗಾಗಲೇ ಆರ್ಥಿಕವಾಗಿ, ಶೈಕ್ಷಣಿಕವಾಗಿ ಮುಂದುವರೆದಿರುವವರು ಮತ್ತಷ್ಟು ಮುಂದೆ ಹೋಗಲು, ಬಡವರು ಗ್ರಾಮೀಣರನ್ನು ತುಳಿದು ಮುಂದೆ ಹೋಗುವುದಕ್ಕೆ ಒಂದು ಏಣಿಯಾಗುತ್ತಿದೆ.

ಲಾಭ ಪಡೆದವರು

ಒಟ್ಟಾರೆ ಪರಿಸ್ಥಿತಿಯನ್ನು ತಮ್ಮ ಲಾಭಕ್ಕೆ ಬಳಸಿಕೊಂಡವರು ಕೆಲವೇ ಜನ ಉಪನ್ಯಾಸಕರು. ಕಂಪ್ಯೂಟರ್, ವೈದ್ಯಕೀಯ ಶಿಕ್ಷಣ ಪಡೆದು 40-50 ಸಾವಿರದವರೆಗೆ ಸಂಬಳ ಪಡೆಯುತ್ತಿರುವ, ಗ್ರಾಹಕ ಸಂಸ್ಕೃತಿಯ ಸಾಮಾಜಿಕ ಸ್ಥಾನಮಾನಗಳಲ್ಲಿ ಮೇಲಕ್ಕೇರುತ್ತಿರುವ ತಮ್ಮ ಶಿಷ್ಯರೆದುರು, ಮತ್ತು ಆರ್ಥಿಕ ಭ್ರಷ್ಟಾಚಾರಕ್ಕೆ ಕಡಿಮೆ ಅವಕಾಶವಿರುವ ಉಪನ್ಯಾಸಕರು ತಮ್ಮೆದುರಿನ ಭ್ರಷ್ಟ ಮೌಲ್ಯಗಳ ಜೊತೆ ರಾಜಿಗಿಳಿದವರಂತೆ 'ಟ್ಯೂಷನ್' ವ್ಯವಸ್ಥೆಯನ್ನು ಒಂದು ಹಣ ಸಂಪಾದನೆಯ ದಂಧೆಯಾನ್ನಾಗಿಸಿಕೊಂಡಿದ್ದಾರೆ. 15-20 ಸಾವಿರ ಸಂಬಳ ಪಡೆಯುತ್ತಿದ್ದರೂ ಸರಿಯಾಗಿ ಕೆಲಸ ನಿರ್ವಹಿಸದಿರುವುದು, ಕಾಲೇಜಿನಲ್ಲಿ ಸರಿಯಾಗಿ ಪಾಠ ಮಾಡದೆ ಶ್ರಮವನ್ನೆಲ್ಲಾ ಟ್ಯೂಷನ್‌ಗಳಲ್ಲೇ ಹಾಕುವುದು, ಟ್ಯೂಷನ್‌ಗೆ ಬರದ ವಿದ್ಯಾರ್ಥಿಗಳನ್ನು ಓರೆಗಣ್ಣಿನಿಂದ ನೋಡುವುದು, ಬೆದರಿಸುವುದು ನಡೆದೇ ಇದೆ. ಇದು ಉಪನ್ಯಾಸಕ ವೃತ್ತಿಯ ಸಾಮಾಜಿಕ ಘನತೆಯನ್ನೇ ಮಣ್ಣು ಮಾಡುತ್ತಿದೆ. ಕಾಲೇಜಿಗೆ, ಶಾಲೆಗೆ ಬರುವ ಶೇ 80 ರಷ್ಟು ಬಡ ವಿದ್ಯಾರ್ಥಿಗಳಿಗೆ ಪಾಠ ಮಾಡುವ ನೈತಿಕ ಜವಾಬ್ದಾರಿ ಶಿಕ್ಷಕರಿಗಿದೆ. ಜೊತೆಗೆ ಟ್ಯೂಷನ್ ಮಾಡಲು ಎಲ್ಲಾ ವಿಷಯಗಳ ಉಪನ್ಯಾಸಕರಿಗೂ ಸಾಧ್ಯವಿಲ್ಲ. ಸಾಮಾಜಿಕ ವಿಷಯಗಳನ್ನು ಬೋಧಿಸುವ ಉಪನ್ಯಾಸಕರು , ಟ್ಯೂಷನ್ ಮಾಡದ ಉಪನ್ಯಾಸಕರನ್ನು ಅಣಕಮಾಡುವ ಅಪಾಯಕಾರಿ ಸ್ಥಿತಿ ಉಪನ್ಯಾಸಕರ ನಡುವೆಯೇ ಒಂದು ದೊಡ್ಡ ಸಮಸ್ಯೆಯಾಗುತ್ತಿದೆ. ಆದ್ದರಿಂದ ಉಪನ್ಯಾಸಕರ ಬಹುದೊಡ್ಡ ವಿಭಾಗ ಟ್ಯೂಷನ್ ವ್ಯವಸ್ಥೆಯ ವಿರುದ್ಧವಿದೆ.

ಪರಿಹಾರವೇನು?

ಈ ಟ್ಯೂಷನ್ ಸಮಸ್ಯೆಯ ಮೂಲ ಇಡೀ ಶಿಕ್ಷಣ ವ್ಯವಸ್ಥೆಯಲ್ಲೇ ಅಡಗಿರುವುದರಿಂದ ಅದರಲ್ಲೇ ಆಮೂಲಾಗ್ರ ಬದಲಾವಣೆ ತರಬೇಕಾಗಿದೆ. ಅಂದರೆ ಈಗ ಟ್ಯೂಷನ್ ವ್ಯವಸ್ಥೆಯ ವಿರುದ್ಧ ನಡೆಯುತ್ತಿರುವ ಹೋರಾಟವನ್ನು ಬಿಡಬೇಕು ಎಂದು ಅರ್ಥವಲ್ಲ. ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಬೇಕು, ಅಂದರೆ ಮುಖ್ಯವಾಗಿ ಮೂಲಸೌಲಭ್ಯಗಳು ಮತ್ತು ಉಪನ್ಯಾಸಕರ ಹೆಚ್ಚಳ ವಿದ್ಯಾರ್ಥಿ-ಉಪನ್ಯಾಸಕರ ಅನುಪಾತದಲ್ಲಿ ಕಡಿಮೆ ಮಾಡುವುದು ಮಾಡಬೇಕು, ವೃತ್ತಿಶಿಕ್ಷಣದ ಅವಕಾಶಗಳನ್ನು ಹೆಚ್ಚು ಮಾಡುವುದರ ಜೊತೆಗೆ ಕ್ಯಾಪಿಟೇಷನ್, ಡೊನೇಷನ್ ಪದ್ಧತಿಗೆ ಮಂಗಳ ಹಾಡಬೇಕು. ಶಿಕ್ಷಣ ರಂಗವನ್ನು ಕೇವಲ ಲಾಭದ ದೃಷ್ಟಿಯಿಂದ ನೋಡದೇ ಸಮಾಜದ ಸಮಗ್ರ ಅಗತ್ಯ, ಅಭಿವೃದ್ಧಿಯ ದೃಷ್ಟಿಯಿಂದ ನೋಡಬೇಕಾಗಿದೆ. ಶೈಕ್ಷಣಿಕವಾಗಿ ದುರ್ಬಲರಾದವರನ್ನು ಸಬಲಗೊಳಿಸಲು ಸರ್ಕಾರ ಅಥವಾ ಆಡಳಿತ ಮಂಡಳಿಗಳೇ ತಮ್ಮ ಸಂಸ್ಥೆಗಳಲ್ಲಿ ಹೆಚ್ಚುವರಿ ತರಬೇತಿಯ ಅವಕಾಶ ಕಲ್ಪಿಸಬೇಕಾಗಿದೆ.

ಕರ್ನಾಟಕ ಶಿಕ್ಷಣ ಮಸೂದೆ-1983 ಸೆಕ್ಷನ್ 4 ರಲ್ಲಿ ಸರ್ಕಾರದಿಂದ, ಇಲಾಖೆಯಿಂದ ಮಾನ್ಯತೆ ಪಡೆದ ಕಾಲೇಜುಗಳ ಬೋಧಕರು ಮನೆಪಾಠ ಮಾಡುವುದನ್ನು ನಿಷೇಧಿಸಲಾಗಿದೆ. ಇದನ್ನು ಸರ್ಕಾರ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕಾಗಿದೆ. ಖಾಸಗಿಯಾಗಿ ಪಾಠ ಮಾಡುವವರ ಮೇಲೆ ನಿರ್ದಾಕ್ಷಿಣ್ಯ ಕ್ರಮ ಕೈಗೊಂಡು, ಶಿಕ್ಷಿಸಬೇಕು. ಯಾರೂ ಕೂಡ ಅನಧಿಕೃತವಾಗಿ ಟ್ಯೂಷನ್ ನಡೆಸುವುದಕ್ಕೆ ಅವಕಾಶ ನೀಡಬಾರದು.

ಹೋರಾಟಗಳು

ಈ ಎಲ್ಲಾ ಅಂಶಗಳ ಬಗ್ಗೆ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಮೊದಲಿನಿಂದಲೂ ಚರ್ಚಿಸುತ್ತಾಬಂದಿದೆ. ಕಳೆದ ಶೈಕ್ಷಣಿಕ ವರ್ಷದ ಆರಂಭದಲ್ಲಿ ಈ ಟ್ಯೂಷನ್ ಪಿಡುಗಿನ ವಿರುದ್ಧ ಹೋರಾಟಕ್ಕೆ ಕರೆ ನೀಡಿತ್ತು. ಅದರಂತೆ, ಹಾಸನ ಜಿಲ್ಲೆಯಲ್ಲಿ ಇದರ ವಿರುದ್ಧ ಆರಂಭವಾದ ಹೋರಾಟ, ಈಗ ವ್ಯಾಪಕ ಚರ್ಚೆಯ ವಿಷಯವಾಗಿದೆ. ಈ ಹೋರಾಟಕ್ಕೆ ಒಂದು ಸ್ಪಷ್ಟ ದಿಕ್ಕುತೋರಿಸಲು ಆಗಸ್ಟ್ 24 ರಂದು ಹಾಸನದಲ್ಲಿ ರಾಜ್ಯಮಟ್ಟದ ವಿಚಾರಸಂಕಿರಣವೊಂದನ್ನು ಎಸ್‌ಎಫ್‌ಐ ಸಂಘಟಿಸುತ್ತಿದೆ.

ಯಶವಂತಪುರ - ಸಿ.ಪಿ.ಐ(ಎಂ) ಸಮ್ಮೇಳನ

ಪುಟ 3 ರಿಂದ

ಸಕ್ರಿಯವಾಗಿ ಕೆಲಸ ಮಾಡಿದಂತ ಅನೇಕ ಸಂಗಾತಿಗಳಿಗೆ ನೆನಪಿನ ಕಿರುಕಾಣಿಕೆಯನ್ನು ನೀಡಲಾಯಿತು. ಅವರುಗಳು ಯಾರೆಂದರೆ ಶಂಕರನಾರಾಯಣ, ಮಾರ್ತಾಂಡಪ್ಪ, ವಿ.ಎನ್.ಎಸ್.ರಾಜಮ್ಮ ನಾರಾಯಣಸ್ವಾಮಿ ಕೊನೆಯದಾಗಿ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಸಿ.ಪಿ.ಐ(ಎಂ)ನ ಜಿಲ್ಲಾ ಸಮಿತಿ ಸದಸ್ಯರು ಕಾರ್ಮಿಕ ಮುಖಂಡರೂ ಆದ ಕಾಂ। ಕೆ.ಎಸ್.ಸುಬ್ರಹ್ಮಣ್ಯರವರು ವಹಿಸಿದ್ದರು.

ಆರು ಶಾಖೆಗಳಿಂದ 25 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ। ಮೀನಾಕ್ಷಿ ಸುಂದರಂ ಕರಡು ವರದಿಯನ್ನು ಮಂಡಿಸಿದರು. 13 ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು. 15 ಜನರ ನೂತನ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯ ಕಾರ್ಯದರ್ಶಿಯಾಗಿ ಕಾಂ। ಮೀನಾಕ್ಷಿಸುಂದರಂ ಆಯ್ಕೆಯಾದರು.

ಸಮಾರೋಪ ಸಮಾರಂಭದಲ್ಲಿ ಜಿಲ್ಲಾ ಕಾರ್ಯದರ್ಶಿ ಕಾಂ। ಕೆ. ಪ್ರಕಾಶ್, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ। ಗೋಪಾಲಕೃಷ್ಣರವರು ಮಾತನಾಡಿದರು. ನಂತರ ಕಾಂ। ಲೀಲಾವತಿಯವರು ವಂದನಾರ್ಪಣೆ ಯೊಂದಿಗೆ ಸಮ್ಮೇಳನ ಮುಕ್ತಾಯವಾಯಿತು.

ಜುಲೈ 22 ರಂದು ಸಮ್ಮೇಳನದ ಅಂಗವಾಗಿ ಜಾಲಹಳ್ಳಿ ಕ್ರಾಸ್‌ನಿಂದ ಮೆರವಣಿಗೆ ಹೊರಟು ದಾರಿಯುದ್ದಕ್ಕೂ ಘೋಷಣೆಗಳನ್ನು ಕೂಗುತ್ತಾ ನೂರಾರು ಕಾರ್ಮಿಕರು ಮೆರವಣಿಗೆಯಲ್ಲಿ ಭಾಗವಹಿಸಿದರು. ಕೆಂಬಾವುಟ ಹಿಡಿದ ಸಂಗಾತಿಗಳ ಮೆರವಣಿಗೆ ಆಕರ್ಷಣೀಯವಾಗಿತ್ತು. ಈ ಮೆರವಣಿಗೆ ದಾಸರಹಳ್ಳಿಯ ಸಿಎಂಸಿ ಕಛೇರಿಯ ಮುಂದೆ ಅಂತ್ಯವಾಗಿ ಬಹಿರಂಗ ಸಭೆ ಪ್ರಾರಂಭವಾಯಿತು. ಸಭೆಯ ಅಧ್ಯಕ್ಷತೆಯನ್ನು ಡಾ। ಪ್ರಕಾಶ್ ಸಿ.ರಾವ್. ವಹಿಸಿದ್ದರು. ಕಾಂ। ಲೀಲಾವತಿಯವರು ಸ್ವಾಗತಮಾಡಿದ ನಂತರ ಪ್ರದೇಶ ಸಮಿತಿಯ ಕಾರ್ಯದರ್ಶಿಯಾದ ಕಾಂ। ಮೀನಾಕ್ಷಿಸುಂದರಂ, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ। ಗೋಪಾಲಕೃಷ್ಣ, ಜಿಲ್ಲಾ ಸಮಿತಿ ಸದಸ್ಯರಾದ ಕಾಂ। ಕೆ.ಎಸ್. ಸುಬ್ರಹ್ಮಣ್ಯ ಪ್ರದೇಶಸಮಿತಿಯ ಸದಸ್ಯರಾದ ಕಾಂ। ಗಂಗಣ್ಣ. ಸಿಐಟಿಯು ಪ್ರದೇಶಸಮಿತಿಯ ಅಧ್ಯಕ್ಷರಾದ ನಂಜರಾಜ್ ಇವರುಗಳು ಮಾತನಾಡಿದರು. ಕೊನೆಯದಾಗಿ ಕಾಂ। ಶಿವರುದ್ರಯ್ಯ ವಂದನಾರ್ಪಣೆ ಮಾಡಿದ ನಂತರ ಘೋಷಣೆಗಳೊಂದಿಗೆ ಬಹಿರಂಗ ಸಭೆ ಮುಕ್ತಾಯವಾಯಿತು.

ಸಮ್ಮೇಳನಅಂಗೀಕರಿಸಿ ಪ್ರಮುಖ ನಿರ್ಣಯಗಳು

ಸಾರ್ವಜನಿಕ ಆಸ್ಪತ್ರೆಗೆ ಒತ್ತಾಯಿಸಿ.

ಕುಡಿಯುವ ನೀರು

ನಗರ ಸಭೆಯಲ್ಲಿ ನಡೆದಿರುವ ಭ್ರಷ್ಟಾಚಾರವನ್ನು ಖಂಡಿಸಿ ಶುದ್ಧ ಆಡಳಿತಕ್ಕಾಗಿ ಒತ್ತಾಯಿಸಿ ಹಲವು ನಿರ್ಣಯಗಳು ಕೈಗೊಳ್ಳಲಾಯಿತು.

- ಲೀಲಾವತಿ

ಪ್ರಪಂಚದ ಬಹುತೇಕ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಆಳುವವರ್ಗದ ವಿರೋಧಿ ಮನೋಭಾವ ಪ್ರಬಲವಾಗಿ ಕಂಡುಬರುತ್ತಿದೆ. ಒಮ್ಮೆ ಆರಿಸಿದ ಸರ್ಕಾರವನ್ನು ಇನ್ನೊಮ್ಮೆ ನೋಡಲು ಜನ ಇಷ್ಟಪಡುತ್ತಿಲ್ಲ. ಈ ಪ್ರಕ್ರಿಯೆ ಭಾರತದಲ್ಲಿಯೂ ಕಾಣಬಹುದು. ಆದರೆ ಪ.ಬಂಗಾಳದಲ್ಲಿ ಜನತೆ ಸತತವಾಗಿ ಎಡರಂಗವನ್ನು ಅದೂ 213 ರಷ್ಟು ಬಹುಮತದಿಂದ ಅಧಿಕಾರಕ್ಕೆ ತರುತ್ತಿರುವುದರ ಗುಟ್ಟೇನು? ಇದು ಕೇವಲ ಸರ್ಕಾರವಲ್ಲ, ನಿರಂತರ ನಡೆವ ವರ್ಗ ಸಂಘರ್ಷದ ಫಲ ಎಂದು ವಿವರಿಸುತ್ತಾರೆ ಸಿಪಿಐ(ಎಂ)ನ ಪಿ.ಬಿ. ಸದಸ್ಯ ಪ.ಬಂಗಾಳದ ರಾಜ್ಯ ಕಾರ್ಯದರ್ಶಿ ಅನಿಲ್ ಬಿಸ್ವಾಸ್

ಪಶ್ಚಿಮ ಬಂಗಾಳದಲ್ಲಿ ಎಡರಂಗ

ವರ್ಗ ಬಲಾಬಲಗಳ ಬದಲಾವಣೆಗಾಗಿ ಸಂಘರ್ಷ

ಅನಿಲ್ ಬಿಸ್ವಾಸ್
ಕನ್ನಡಕ್ಕೆ : ನಿತ್ಯಾನಂದಸ್ವಾಮಿ

ಪಶ್ಚಿಮ ಬಂಗಾಳದಲ್ಲಿ ಕಳೆದ 25 ವರ್ಷಗಳಿಂದ ಎಡರಂಗ ಸರ್ಕಾರವು ಅಧಿಕಾರದಲ್ಲಿದೆ. ಹಲವರಿಗೆ ಇದೊಂದು ವಿಸ್ಮಯಕಾರಿ ಪವಾಡದಂತೆ ಕಾಣುತ್ತದೆ. ಬಂಡವಾಳಶಾಹಿ ವ್ಯವಸ್ಥೆಯ ಚೌಕಟ್ಟಿನೊಳಗೆ ಎಡ ಪಕ್ಷಗಳ ಇಂತಹ ಒಂದು ಸರ್ಕಾರ ಇಷ್ಟೊಂದು ದೀರ್ಘಕಾಲ ಅಸ್ತಿತ್ವದಲ್ಲಿರಲು ಹೇಗೆ ಸಾಧ್ಯ ಎಂಬುದೇ ಅವರ ಕುತೂಹಲಕಾರಿ ಪ್ರಶ್ನೆ. ಬಂಡವಾಳ ಶಾಹಿ ಪದ್ಧತಿಗೆ ಜನರ ಮೂಲಭೂತ ಸಮಸ್ಯೆಗಳನ್ನು ಇತ್ಯರ್ಥ ಪಡಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಇಂದು ಜಗತ್ತಿನ ಅನೇಕ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಆಳುವ ವರ್ಗ ವಿರೋಧಿ ಮನೋಭಾವ ಪ್ರಬಲವಾಗುತ್ತಿದೆ. ಸರಿಯೋ ತಪ್ಪೋ, ಜನ ಹಿಂದಿನ ಆಳ್ವಿಕೆಗಳನ್ನು ಪುನಃ ಕಾಣಲು ಬಯಸುವುದಿಲ್ಲ.

ಆದರೇ, ಪಶ್ಚಿಮ ಬಂಗಾಳದಲ್ಲಿ1977 ರಿಂದ ಪ್ರತಿಯೊಂದು ಚುನಾವಣೆಯಲ್ಲಿಯೂ ಎಡರಂಗವು ಮೂರರಲ್ಲಿ ಎರಡು ಭಾಗಗಳಿಗಿಂತಲೂ ಹೆಚ್ಚಿನ ಬಹುಮತವನ್ನು ಉಳಿಸಿಕೊಂಡು ಬಂದಿದೆ. ಭಾರತದ ಸಂವಿಧಾನದ ಚೌಕಟ್ಟಿನೊಳಗೆ ಎಡರಂಗ ಸರ್ಕಾರಕ್ಕೆ ಸಮಾಜವಾದಿ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುವುದಿಲ್ಲ. ಮಾತ್ರವಲ್ಲ, ಜನತಾಪ್ರಜಾಪ್ರಭುತ್ವ ಕಾರ್ಯಕ್ರಮವನ್ನು ಸಹ ಜಾರಿಗೆ ತರಲಾಗುವುದಿಲ್ಲ. ಭಾರತ ಸರ್ಕಾರದಿಂದ ಅಂಗೀಕರಿಸಲಾದ ನೀತಿ ನಿರೂಪಣೆಗಳನ್ನೇ ಜಾರಿಗೆ ತರಲು ಅದು ನಿರ್ಬಂಧಿತವಾಗಿದೆ.

ಪಶ್ಚಿಮ ಬಂಗಾಳಕ್ಕೆ ಪ್ರಜಾಸತ್ತಾತ್ಮಕ ಚಳುವಳಿಯ ಒಂದು ಸುದೀರ್ಘ ಪರಂಪರೆಯಿದೆ. ಸ್ವಾತಂತ್ರ್ಯ ಆಂದೋಲನದಲ್ಲಿ ಅದರ ಪಾತ್ರ ಹಿರಿದಾದ್ದು. ಒಂದೆಡೆ ಯುವ ಕ್ರಾಂತಿಕಾರಿಗಳ ಗುಂಪುಗಳ ಕಾರ್ಯಾಚರಣೆ, ಇನ್ನೊಂದೆಡೆ ಟ್ರೇಡ್ ಯೂನಿಯನ್ ಚಳುವಳಿ, ರೈತರ ಚಳುವಳಿ, ವಿದ್ಯಾರ್ಥಿಗಳ ಹೋರಾಟ!

ಸ್ವಾತಂತ್ರ್ಯಾ ನಂತರವೂ ಹೋರಾಟಗಳ ಪರಂಪರೆ ಮುಂದುವರೆಯಿತು. ಸಂದರ್ಭಕ್ಕೆ ತಕ್ಕಂತೆ ಸಾಮ್ರಾಜ್ಯವಾದ ವಿರೋಧಿ ಹೋರಾಟ, ಸರ್ವಾಧಿಕಾರ ವಿರೋಧಿ ಹೋರಾಟ, ಕೋಮುವಾದಿ ವಿರೋಧಿ ಹೋರಾಟ, ಶೋಷಣಾ ವಿರೋಧಿ ಹೋರಾಟಗಳು ಮೂಡಿಬಂದವು. ಈ ಹೋರಾಟಗಳಿಂದಾಗಿ ಕಾರ್ಮಿಕ ವರ್ಗಕ್ಕೆ ಸರಿಯಾದ ವರ್ಗ ನಿಲುವು ತಳೆಯಲು ಸಾಧ್ಯವಾಯಿತು. ಅದಲ್ಲದೆ ಸರ್ಕಾರದ ದಮನಕಾರಿ ನೀತಿಗಳ ವಿರುದ್ಧ ಹಾಗೂ ಪ್ರತಿಗಾಮಿ ಶಕ್ತಿಗಳ ವಿರದ್ಧ ನಡೆಸಲಾದ ಹೋರಾಟಗಳಿಂದ ಎಡ ಶಕ್ತಿಗಳ ನಡುವೆ ಐಕ್ಯತೆ ಬೆಸೆಯುವಂತಾಯಿತು. ಎಡರಂಗದ ಕಲ್ಪನೆ ಇಲ್ಲಿ ಉಗಮವಾಯಿತು. ಆರಂಭದಲ್ಲಿ ಅವಿಭಜಿತ ಕಮ್ಯುನಿಸ್ಟ್ ಪಕ್ಷ(ಸಿಪಿಐ) ಮತ್ತ ನಂತರ ಸಿಪಿಐ(ಎಂ) ಈ ಎಲ್ಲಾ ಸಂದರ್ಭಗಳಲ್ಲಿ ನೇತೃತ್ವದ ಪಾತ್ರವನ್ನು ನಿರ್ವಹಿಸಿತು.


ಎಡರಂಗ ಅಧಿಕಾರಕ್ಕೆ

ಹೀಗೆ ಬೆಳೆದು ಬಂದ ವರ್ಗಹೋರಾಟ ಮತ್ತು ಸಾಮೂಹಿಕ ಚಳುವಳಿಗೆ ಕಾಂಗ್ರೆಸ್ಸನ್ನು ಅಧಿಕಾರದಿಂದ ಕೆಳಗಿಳಿಸಲು ಸಾಧ್ಯವಾಯಿತು. 1967 ರಲ್ಲಿ ಎಡಪಕ್ಷಗಳು ಮತ್ತು ಕೆಲವು ಕಾಂಗ್ರೆಸ್ಸೇತರ ಬಂಡವಾಳಶಾಹಿ ಪಕ್ಷಗಳು ಒಟ್ಟಿಗೆ ಸೇರಿ ಒಂದು ಸಂಯುಕ್ತ ರಂಗ ಸರ್ಕಾರವನ್ನು ರಚಿಸಿಕೊಂಡವು. ಆದರೆ ಈ ಸರ್ಕಾರವು ಅದರ ಆಂತರಿಕ ವೈರುಧ್ಯಗಳಿಂದಾಗಿ ಮತ್ತು ಕೇಂದ್ರದ ಕಾಂಗ್ರೆಸ್ ಸರ್ಕಾರದ ಪಿತೂರಿಯಿಂದಾಗಿ ಹೆಚ್ಚು ಕಾಲ ಬಾಳಲಿಲ್ಲ. ಚುನಾಯಿತ ಸರ್ಕಾರಗಳನ್ನು ವಜಾ ಮಾಡುವ ಕೇಂದ್ರ ಕಾಂಗ್ರೆಸ್ ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ನೀತಿಯ ವಿರುದ್ಧ ರಾಜ್ಯದಲ್ಲಿ ಪ್ರಬಲವಾದ ಹೋರಾಟ ನಡೆಯಿತು.

1969 ರಲ್ಲಿ ಮತ್ತೊಮ್ಮೆ ಇನ್ನೊಂದು ಸಂಯುಕ್ತ ರಂಗ ಸರ್ಕಾರವನ್ನು ರಚಿಸಲು ಸಾಧ್ಯವಾಯಿತು. ಈ ಸಲ ಎಡ ಪಕ್ಷಗಳ ಬಲ ಹೆಚ್ಚಾಗಿತ್ತು. ಆದರೆ ಕೆಲವೇ ತಿಂಗಳುಗಳಲ್ಲಿ ಈ ಸರ್ಕಾರವನ್ನು ಕಿತ್ತುಹಾಕಲಾಯಿತು. ಇದಾದ ಬಳಿಕ ಉನ್ನತ ವಲಯದಲ್ಲಿ ರೂಪಿಸಲ್ಪಟ್ಟ ಪಿತೂರಿಯೊಂದರ ಮೂಲಕ ಎಡಪಕ್ಷಗಳ ನಡುವೆ ಒಡಕನ್ನುಂಟು ಮಾಡಲಾಯಿತು. ಇದರ ಪರಿಣಾಮವಾಗಿ 1971 ರಲ್ಲಿ ಎಡಪಕ್ಷಗಳು ತಮ್ಮ ತಮ್ಮೊಳಗೆ ಕಾದಾಡುವಂತಾಯಿತು. ಎಡಪಕ್ಷಗಳ ನಡುವಿನ ಐಕ್ಯತೆಯ ಕೊರತೆಯಿಂದಾಗಿ ಅವುಗಳಿಗೆ ಸರ್ಕಾರ ರಚಿಸಲು ಸಾಧ್ಯವಾಗಲಿಲ್ಲ. ಸಿಪಿಐ(ಎಂ) ದೊಡ್ಡ ಪಕ್ಷವಾಗಿ ಹೊರಹೊಮ್ಮುವಂತಾದರೂ ಸರ್ಕಾರ ರಚಿಸಲು ಆಹ್ವಾನ ನೀಡಲಿಲ್ಲ. ಅನಂತರ ಬಂದ 1972 ರ ಚುನಾವಣೆಯನ್ನು ವ್ಯಾಪಕ ಅಕ್ರಮಗಳ ಮೂಲಕ ರಿಗ್ ಮಾಡಲಾಯಿತು.

ತುರ್ತುಪರಿಸ್ಥಿತಿಯ ಕರಾಳ ಅವಧಿಯಲ್ಲಿ ಇಡೀ ದೇಶದ ಮೇಲೆ ಹೇರಲಾದ ದಮನ ದಬ್ಬಾಳಿಕೆಯನ್ನು ಪಶ್ಚಿಮ ಬಂಗಾಳದಲ್ಲಿ 70 ರ ದಶಕದ ಆರಂಭದಲ್ಲಿಯೇ ಪ್ರಾರಂಭಿಸಲಾಗಿತ್ತು.




ಆಡಳಿತದಲ್ಲಿ ಮಹಿಳೆಯರು

1972 ರಲ್ಲಿ ರಾಜ್ಯ ವಿಧಾನಸಭೆಗೆ ನಡೆದ ನಕಲಿ ಚುನಾವಣೆಯ ಅಕ್ರಮಗಳಿಗಾಗಿ ಕಾಂಗ್ರೆಸ್ ಸಮಾಜ ವಿರೋಧಿ ಶಕ್ತಿಗಳನ್ನು ಬಳಸಿಕೊಂಡಿತ್ತಲ್ಲದೆ ಪೋಲೀಸ್ ಹಾಗೂ ಪ್ಯಾರ-ಮಿಲಿಟರಿ ಪಡೆಗಳ ಬೆಂಬಲವನ್ನು ಕಾಂಗ್ರೆಸ್ ಹಾಗೂ ಪೋಲೀಸ್ ಬೆಂಬಲಿತ ಸಮಾಜಘಾತಕರು ಎಡ ಪಕ್ಷಗಳ ಸಾವಿರಾರು ಕಾರ್ಯಕರ್ತರನ್ನು ಸಾಯಿಸಿದರು. ಸಾವಿರಾರು ಕಾರ್ಯಕರ್ತ ರನ್ನು ಅವರು ವಾಸವಿದ್ದ ಪ್ರದೇಶಗಳಿಂದ ಓಡಿಸಲಾಯಿತು.

ಟ್ರೇಡ್ ಯೂನಿಯನ್ ಕಾರ್ಯಕರ್ತರನ್ನು ಕೆಲಸದಿಂದ ವಜಾ ಮಾಡಿಸಲಾಯಿತು. ಅವರು ಕೆಲಸದ ಸ್ಥಳ ಪ್ರವೇಶಿಸುವುದನ್ನು ಬಲವಂತವಾಗಿ ತಡೆಯಲಾಯಿತು. ಹೀಗೆ ತಡೆಯಲ್ಪಟ್ಟವರಲ್ಲಿ ಕಾರ್ಖಾನೆಗಳ ಕಾರ್ಮಿಕರು, ಆಫೀಸ್ ಸಿಬ್ಬಂದಿ, ಶಿಕ್ಷಕರು, ವಿದ್ಯಾರ್ಥಿಗಳು, ವಕೀಲರು, ವೈದ್ಯರು ಸಹ ಇದ್ದರು. ಎಡಪಕ್ಷಗಳ ಆಫೀಸುಗಳನ್ನು ಮತ್ತು ಸಾಮೂಹಿಕ ಸಂಘಟನೆಗಳ ಕಾರ್ಯಾಲಯಗಳನ್ನು ಕಾಂಗ್ರೆಸ್ ಗೂಂಡಾಗಳು ಬಲವಂತವಾಗಿ ವಶಪಡಿಸಿಕೊಂಡಿದ್ದರು. ದೇಶದ ಯಾವುದೇ ಭಾಗದಲ್ಲಿ ಕಂಡರಿಯದ ಈ ರೀತಿಯ ಅರೆ-ಫ್ಯಾಸಿಸ್ಟ್ ದಬ್ಬಾಳಿಕೆಯ ಮೂಲಕ ಎಡಶಕ್ತಿಗಳನ್ನು ಸಂಪೂರ್ಣವಾಗಿ ನಾಶ ಮಾಡುವುದು ಕಾಂಗ್ರೆಸ್ಸಿನ ಉದ್ದೇಶವಾಗಿತ್ತು. ವಿಶ್ವವಿದ್ಯಾಲಯಗಳು ಹಾಗೂ ಶಿಕ್ಷಣ ಸಂಸ್ಥೆಗಳು ಕಾಂಗ್ರೆಸ್ ಬೆಂಬಲಿತ ಸಮಾಜವಿರೋಧಿ ಶಕ್ತಿಗಳ ಚಟುವಟಿಕೆಗಳ ಕೇಂದ್ರಗಳಾಗಿದ್ದವು. ಸಾಮೂಹಿಕ ಕಾಪಿ ಹೊಡೆಯಲು ಮುಕ್ತ ಅವಕಾಶ ನೀಡುವ ಮೂಲಕ ಇಡೀ ಶಿಕ್ಷಣ ವ್ಯವಸ್ಥೆಯೇ ಕುಸಿದು ಬೀಳುವಂತಾಯಿತು.

ಉದ್ಯೋಗ ಕಳೆದುಕೊಂಡು, ತೀವ್ರ ಬೆಲೆ ಏರಿಕೆಯ ಹೊರೆ ಹೇರಲ್ಪಟ್ಟು ದುಡಿಯುವ ವರ್ಗದ ಸಾಮಾನ್ಯ ಜನತೆ ವರ್ಣಿಸಲಸಾಧ್ಯವಾದ ಕಷ್ಟನಷ್ಟಗಳನ್ನು ಅನುಭವಿಸಿತು.

ಇದರ ಪರಿಣಾಮವಾಗಿ 1977 ರಲ್ಲಿ ವಿಧಾನಸಭಾ ಚುನಾವಣೆಗಳು ಬಂದಾಗ, ಅನ್ಯಾಯ ಅವಮಾನಕ್ಕೆ ಒಳಗಾಗಿದ್ದ ಪಶ್ಚಿಮ ಬಂಗಾಳದ ಜನತೆ ಕಾಂಗ್ರೆಸ್ ಭಯೋತ್ಪಾದನೆಗೆ ದಿಟ್ಟ ಉತ್ತರ ನೀಡಿತು. 20 ತಿಂಗಳುಗಳ ತುರ್ತುಪರಿಸ್ಥಿತಿಯ ಅತಿರೇಕಗಳಿಗಾಗಿ ಕಾಂಗ್ರೆಸ್ಸನ್ನು ಅಧಿಕಾರದಿಂದ ಒದ್ದೋಡಿಸುವ ಮೂಲಕ ಪಶ್ಚಿಮ ಬಂಗಾಳದ ಜನತೆ ಇತಿಹಾಸವನ್ನೇ ನಿರ್ಮಾಣ ಮಾಡಿತು. ಅಂದಿನಿಂದ ಪಶ್ಚಿಮ ಬಂಗಾಳದ ಜನತೆ ಎಡರಂಗ ಸರ್ಕಾರದ ಮೇಲೆ ನಿರಂತರವಾಗಿ ತನ್ನ ವಿಶ್ವಾಸವನ್ನು ಮುಂದುವರೆಸುತ್ತಾ ಬಂದಿದೆ.

ಪ್ರಮುಖ ಸಾಧನೆಗಳು

1967 ರಲ್ಲಿ ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಅಧಿಕಾರವಹಿಸಿಕೊಂಡ ಸಂಯುಕ್ತ ರಂಗ ಸರ್ಕಾರಗಳಲ್ಲಿ ಸಿಪಿಐ(ಎಂ) ಪಾಲ್ಗೊಂಡಿದ್ದಾಗ, ಪಕ್ಷದ ಕೇಂದ್ರ ಸಮಿತಿಯು 'ಹೊಸ ಪರಿಸ್ಥಿತಿ ಮತ್ತು ಪಕ್ಷದ ಕರ್ತವ್ಯ' ಎಂಬ ನಿರ್ಣಯವೊಂದನ್ನು ಅಂಗೀಕರಿಸಿತು. ಸಿಪಿಐ(ಎಂ) ಪಾಲ್ಗೊಂಡ ಇಂತಹ ರಾಜ್ಯ ಸರ್ಕಾರಗಳ ವ್ಯಾಪ್ತಿ ಹಾಗೂ ಇತಿಮಿತಿಗಳ ಆ ನಿರ್ಣಯವು ವಿಶ್ಲೇಷಿಸಿತ್ತು. ನಿರ್ಣಯ ಹೀಗೆ ಹೇಳಿತ್ತು "ವರ್ಗ ದೃಷ್ಟಿಕೋನ, ವರ್ಗ ಸಂಯೋಜನೆ ಮತ್ತು ಇತರ ಅನೇಕ ವಿಷಯಗಳ ದೃಷ್ಟಿಯಿಂದ ಪ್ರಜಾಸತ್ತಾತ್ಮ... ಆಡಳಿತವನ್ನು ಸುಸಂಗತವಾಗಿ ಜಾರಿ... ತರುವುದಕ್ಕೂ ಅದೊಂದು ಉಪಯು... ಸಾಧನವಾಗಲಾರದು, ಸ್ಥಾಪಿತ ಹಿತಾಸಕ್ತಿ... ವಿರುದ್ಧ ನಿರ್ಣಾಯಕವಾಗಿ ಗುರಿಯಿಟ್ಟ ವರ್ಗ... ಧೋರಣೆಗಳನ್ನು ಜಾರಿಗೆ ತರುವ ಪ್ರಶ್ನೆ ದೂ... ಉಳಿಯಿತು".

ನಿರ್ಣಯವು ಮುಂದುವರೆಯುತ್ತಾ "ಈ... ನಮ್ಮ ಮುಂದಿರುವ ಈ ಸಂಯುಕ್ತರಂ... ಸರ್ಕಾರಗಳು, ಜನತೆಗೆ ನೈಜವಾದ ಪರಿಹಾರಗಳ... ಒದಗಿಸಲು ಸಾಕಷ್ಟು ಅಧಿಕಾರವನ್ನು ಹೊಂದಿರು... ಸರ್ಕಾರ ಎಂದು ಭಾವಿಸುವುದಕ್ಕಿಂತ ಹೆಚ್ಚಾ... ಅದೊಂದು ನಮ್ಮ ಜನತೆಯ ಕೈಯಲ್ಲಿರು... ಹೋರಾಟದ ಅಸ್ತ್ರವೆಂದು ಪರಿಗಣಿಸಬೇಕು... ಸ್ಪಷ್ಟವಾದ ವರ್ಗ ವಿಶ್ಲೇಷಣೆಯ ಪ್ರಕಾರ, ನಮ್ಮ... ಪಕ್ಷ ಇಂತಹ ಸರ್ಕಾರಗಳಲ್ಲಿ ಭಾಗಹಿಸುವುದು... ಜನತಾ ಪ್ರಜಾಪ್ರಭುತ್ವ, ಅನಂತರ ಸಮಾಜವಾದ... ಉದ್ದೇಶಕ್ಕಾಗಿ ಹೆಚ್ಚೆಚ್ಚು ಜನರನ್ನು ಮತ್ತು ಹೆಚ್ಚೆ... ಮಿತ್ರರನ್ನು ಗೆಲ್ಲುವ ಒಂದು ವಿಶಿಷ್ಟ ರೀತಿಯ... ಹೋರಾಟ ಮಾತ್ರ ಆಗಿರುತ್ತದೆ.

ಈಗ ಎಡರಂಗ ಸರ್ಕಾರವು 25 ವರ್ಷಗ... ಆಳ್ವಿಕೆಯನ್ನು ಪೂರ್ಣಗೊಳಿಸುತ್ತಿರುವಾಗ... ರಾಜ್ಯದ ಜನತೆಗೆ ಗಣನೀಯಾದ ಪರಿಹಾರವ... ಒದಗಿಸಲು ನಮಗೆ ಸಾಧ್ಯವಾಗಿದೆ ಎಂದ... ಹೇಳಬಹುದು. ಇದನ್ನು ಕಾಂಗ್ರೆಸ್ ಸರ್ಕಾರ... ಮಾಡಬಹುದಾಗಿತ್ತಾದರೂ, ಕಾಂಗ್ರೆಸ್ ಸರ್ಕಾ... ಅಂತಹ ರಾಜಕೀಯ ಇಚ್ಛಾಶಕ್ತಿ ಇಲ್ಲದಿದ್ದುದರಿಂ... ಅವರು ಅದನ್ನು ಮಾಡಲಿಲ್ಲ ಎಂದು ಜನ... ಅರ್ಥಮಾಡಿಕೊಳ್ಳುವಂತಾಯಿತು. ನಮಗೆ ಏನ... ಮಾಡಲು ಸಾಧ್ಯವಾಗಲಿಲ್ಲವೋ ಅದನ್ನು ಮು... ಅದರ ಕಾರಣಗಳನ್ನು ನಾವು ಸ್ಪಷ್ಟವಾಗಿ ಜನ... ಹೇಳಿದ್ದೇವೆ. ಬೇರೆ ಬಂಡವಾಳಶಾಹಿ ಪಕ್ಷಗಳ... ಎಡಪಕ್ಷಗಳು ಸಾಧಿಸಲಾಗದ ಸುಳ್ಳು ಭರವಸೆಗಳ... ನೀಡುವುದಿಲ್ಲವೆಂದು ರಾಜ್ಯದ ಜನತೆ ಎಡ... ಸರ್ಕಾರದೊಂದಿನ ಅವರ ಅನುಭವದಿಂದ... ತಿಳಿದುಕೊಂಡಿದ್ದಾರೆ. ಇದು ಎಡಪಕ್ಷಗಳಿಗೂ ಇ... ಪಕ್ಷಗಳಿಗೂ ನಡುವೆ ಇರುವ ಒಂದು ಪ್ರಮು... ವ್ಯತ್ಯಾಸ.

ಹೀಗೆ ಒದಗಿಸಲಾದ ಪರಿಹಾರದಿಂದ ಮುಖ್ಯವಾಗಿ, ಭೂಹೀನ ಹಾಗೂ ಅಂಚಿನ ರೈತರಿಗೆ, ಕಾರ್ಮಿಕ ವರ್ಗಕ್ಕೆ ಗ್ರಾಮೀಣ ಕಸಬುದಾರರಿಗೆ, ಬಡ ಮತ್ತು ಸಾಮಾನ್ಯ ಜನಗಳಿಗೆ ಪ್ರಯೋಜನವಾಗಿದೆ. ಸಂವಿಧಾನಾತ್ಮಕ ಅಧಿಕಾರದ ಇತಿಮಿತಿಗಳ ಮತ್ತು ಕೇಂದ್ರ ಸರ್ಕಾರದ ಮಲತಾಯಿ ಧೋರಣೆಯ ಹೊರತಾಗಿಯೂ, ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವು ಕೃಷಿ, ಭೂಸುಧಾರಣೆಗಳು, ಗೇಣಿದಾರರ ದಾಖಲಾತಿ, ಪಂಚಾಯತ್ ರಾಜ್ ಮೂಲಕ ಅಧಿಕಾರ ವಿಕೇಂದ್ರೀಕರಣ, ಗ್ರಾಮೀಣ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಗಳು ಮೊದಲಾದ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆಗಳನ್ನು ಮಾಡಿದೆ. ದೇಶದ ಬೇರೆ ಯಾವುದೇ ಒಂದು ಕಡೆ, ಪಶ್ಚಿಮ ಬಂಗಾಳದಲ್ಲಿ ಭೂಹೀನರಿಗೆ ವಿತರಣೆ ಮಾಡಿದಷ್ಟು ಭೂಮಿಯನ್ನು ವಿತರಣೆ ಮಾಡಿಲ್ಲ. ಭೂಮಿಯನ್ನು ಪಡೆದ ಫಲಾನುಭವಿಗಳಲ್ಲಿ ಹೆಚ್ಚಿನವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರು. ಈಗ ಒಟ್ಟು ಕೃಷಿ ಭೂಮಿಯ ಶೇಕಡ 60 ರಷ್ಟು ನೀರಾವರಿಗೆ ಒಳಪಟ್ಟಿದ್ದು ಅಧಿಕ ಹಿಡುವಳಿ ಬೀಜ ಹಾಗೂ ಗೊಬ್ಬರಗಳ ವ್ಯಾಪಕ ಬಳಕೆ ಸಾಧ್ಯವಾಗಿದೆ. ಮೀನು ಸಾಗಾಣಿಕೆಯಲ್ಲಿಯೂ ಗಣನೀಯ ಯಶಸ್ಸನ್ನು ಸಾಧಿಸಲಾಗಿದೆ.

ವಿದ್ಯುಚ್ಛಕ್ತಿ ಮೊತ್ತಮೊದಲ ಎಡರಂಗ ಸರ್ಕಾರಕ್ಕೆ ಒಂದು ಪ್ರಮುಖ ಸವಾಲಾಗಿತ್ತು. ಬೇಡಿಕೆ ಮತ್ತು ವಿದ್ಯುತ್ ಉತ್ಪಾದನೆಯ ನಡುವೆ ದೊಡ್ಡ ಅಂತರವಿತ್ತು. ಇದಕ್ಕೆ ಹಿಂದಿನ ಕಾಂಗ್ರೆಸ್ ಸರ್ಕಾರಗಳ ನಿಷ್ಕಾಳಜಿಯೇ ಕಾರಣವಾಗಿತ್ತು. ಎಡರಂಗ ಸರ್ಕಾರವು ಈ ಅಂತರವನ್ನು ಕಡಿಮೆಮಾಡಲು ಆದ್ಯತೆಯ ಕ್ರಮಗಳನ್ನು ಕೈಗೊಂಡಿತು. ಇಂದು ಪಶ್ಚಿಮ ಬಂಗಾಳವು ಹೆಚ್ಚುವರಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುತ್ತದೆ. ಎಡರಂಗ ಸರ್ಕಾರದ ಪರಿಶ್ರಮದ ಫಲವಾಗಿ 1977 ರಲ್ಲಿ 1300 ಮೆ.ವಾ. ರಷ್ಟು ಇದ್ದ ಉತ್ಪಾದನಾ ಸಾಮರ್ಥ್ಯವು 2001-2002 ರಲ್ಲಿ 7309 ಮೆ.ವಾ. ರಷ್ಟಾಗಿದೆ. ಅಸಂಪ್ರದಾಯಿಕ ವಿದ್ಯುತ್ ಉತ್ಪಾದನೆಗೂ ಆದ್ಯತೆ ನೀಡಲಾಗಿದ್ದು ಇಡೀ ದೇಶದಲ್ಲಿ ಪಶ್ಚಿಮ ಬಂಗಾಳ ಪ್ರಥಮ ಸ್ಥಾನದಲ್ಲಿದೆ.

ಪಶ್ಚಿಮ ಬಂಗಾಳವು ದೇಶದಲ್ಲಿ ಅತಿಹೆಚ್ಚು ಜನ ಸಾಂದ್ರತೆ ಇರುವ ರಾಜ್ಯವಾಗಿದೆ. ಜನಸಂಖ್ಯೆಗೆ ಹೋಲಿಸಿದಾಗ ಕೃಷಿಭೂಮಿಯ ಪ್ರಮಾಣ ತುಂಬಾ ಕಮ್ಮಿ ಇರುವುದರಿಂದ ಬಹುಸಂಖ್ಯಾತ ಜನರಿಗೆ ಜೀವನೋಪಾಯ ಒದಗಿಸುವುದು ಒಂದು ದೊಡ್ಡ ಪ್ರಶ್ನೆಯಾಗಿದೆ. ಆದ್ದರಿಂದ ಕೈಗಾರೀಕರಣಕ್ಕೆ ಆದ್ಯತೆ ನೀಡಲೇಬೇಕಾಯಿತು. 1956 ರ ಕೈಗಾರಿಕಾ ನೀತಿಯನ್ನು ಅಂಗೀಕರಿಸಿದ ಬಳಿಕ, ಕೇಂದ್ರ ಸರ್ಕಾರವು ಪಶ್ಚಿಮ ಬಂಗಾಳ ಮತ್ತು ಕೆಲವುರಾಜ್ಯಗಳಿಗೆ ಸಂಬಂಧಿಸಿ ಮಲತಾಯಿ ಧೋರಣೆಯನ್ನು ಅನುಸರಿಸಲಾರಂಭಿಸಿತು.

ಇದರ ಪರಿಣಾಮವಾಗಿ, ಪಶ್ಚಿಮ ಬಂಗಾಳದಲ್ಲಿ ಸಾರ್ವಜನಿಕ ರಂಗದಲ್ಲಾಗಲಿ, ಖಾಸಗಿ ರಂಗದಲ್ಲಾಗಲಿ ಬಂಡವಾಳ ಹೂಡಿಕೆ ನಿಂತು ಹೋಯಿತು ಮತ್ತು ಅದರಿಂದ ಕೈಗಾರಿಕಾ ಉತ್ಪಾದನೆ ತೀವ್ರವಾಗಿ ಕುಸಿಯಿತು.

ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದ ನಂತರ ರಾಜ್ಯದ. ಕೈಗಾರೀಕರಣಕ್ಕಾಗಿ ಕ್ರಮಕೈಗೊಂಡಿತಾದರೂ ಕೇಂದ್ರ ಸರ್ಕಾರದ ಅಸಹಕಾರ ಮತ್ತು ಅಡೆತಡೆಗಳಿಂದಾಗಿ ಎಡರಂಗ ಸರ್ಕಾರದ ಅಧಿಕಾರ ಅವಧಿಯ ಮೊದಲ ಭಾಗದಲ್ಲಿ ದೊಡ್ಡ ಪ್ರಮಾಣದಲ್ಲಿ ಕೈಗಾರಿಕೆಗಳ ಸ್ಥಾಪನೆ ಸಾಧ್ಯವಾಗಲಿಲ್ಲ. ಇತ್ತೀಚೆಗೆ ಕೇಂದ್ರ ಸರ್ಕಾರವು ಕೆಲವು ಅಧಿಕಾರಗಳನ್ನು ಕೈಬಿಟ್ಟ ನಂತರ ಮತ್ತು ಎಡರಂಗ ಸರ್ಕಾರದ ನಿರಂತರ ಪ್ರಯತ್ನದ ಫಲವಾಗಿ ಪರಿಸ್ಥಿತಿಯು ಪಶ್ಚಿಮ ಬಂಗಾಳದ ಪರವಾಗಿ ಬದಲಾವಣೆಹೊಂದುತ್ತಿದೆ. ಕೈಗಾರಿಕೋದ್ಯಮಿಗಳು ಬಂಡವಾಳ ಹೂಡಲು ಪಶ್ಚಿಮ ಬಂಗಾಳಕ್ಕೆ ಆಗಮಿಸುತ್ತಿದ್ದಾರೆ. ಗುಡಿಕೈಗಾರಿಕೆಗಳು ಹಾಗೂ ಸಣ್ಣ ಕೈಗಾರಿಕೆಗಳು ರಾಜ್ಯ ಸರ್ಕಾರದ ನಿಯಂತ್ರಣದಲ್ಲಿ ಇದ್ದುದರಿಂದ, ಸ್ವಲ್ಪ ಸಮಯದಲ್ಲೇ ಎಡರಂಗ ಸರ್ಕಾರವು ಈ ಕ್ಷೇತ್ರದಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸುವುದರಲ್ಲಿ ಯಶಸ್ವಿಯಾಯಿತು. ಪಶ್ಚಿಮ ಬಂಗಾಳದ ಈ ಕ್ಷೇತ್ರವು ಇಂದು ದೇಶದಲ್ಲೇ ಪ್ರಥಮ ಸ್ಥಾನದಲ್ಲಿದೆ.


ಬಡತನದ ರೇಖೆಗಿಂತ ಕೆಳಗೆ ಬದುಕುತ್ತಿದ್ದ ಪಶ್ಚಿಮ ಬಂಗಾಳದ ಜನತೆಯ ಪ್ರಮಾಣ 80ರ ದಶಕದ ಆರಂಭದಲ್ಲಿ ಶೇಕಡ 54ರಷ್ಟು ಇದ್ದದ್ದು


ಸಾಕ್ಷರತೆಯಲ್ಲಿ ಸಾಧನೆ

ಈಗ ಶೇಕಡ 24ಕ್ಕೆ ಇಳಿದಿದೆ. ಕಳೆದ ಒಂದು ದಶಕದಿಂದ ರಾಜ್ಯದ ಕೃಷಿ ಉತ್ಪಾದನೆಯು ದೇಶದ ಇತರ ಎಲ್ಲಾ ರಾಜ್ಯಗಳಿಂದ ಹೆಚ್ಚಾಗಿದೆ. ಇದರಿಂದಾಗಿ ಗ್ರಾಮೀಣ ಪ್ರದೇಶದ ಕೊಂಡುಕೊಳ್ಳುವ ಸಾಮರ್ಥ್ಯವು ಹೆಚ್ಚಾಗಿದೆ, ಮತ್ತು ಗ್ರಾಮೀಣ ಕೂಲಿಕಾರರು ಹಳ್ಳಿಗಳಿಂದ ಪಟ್ಟಣದತ್ತ ವಲಸೆಹೋಗುವುದು ಕಡಿಮೆಯಾಗಿದೆ. ಸಾಕ್ಷರತೆ, ಜನಸಂಖ್ಯೆ ನಿಯಂತ್ರಣ, ಶಿಶು ಮರಣ ಪ್ರಮಾಣ ಕುಸಿತ, ಮೊದಲಾದ ವಿಷಯಗಳಲ್ಲಿ ಪಶ್ಚಿಮ ಬಂಗಾಳವು ದೇಶದಲ್ಲೇ ಪ್ರಥಮಸ್ಥಾನದಲ್ಲಿದೆ.ಲ

ಪಶ್ಚಿಮ ಬಂಗಾಳವು ಕೋಮುವಾದ, ಜಾತಿವಾದದ ಗಲಭೆಗಳಿಗೆ ಅವಕಾಶ ನೀಡದ ದೇಶದಲ್ಲೇ ಅಪರೂಪದ ರಾಜ್ಯವಾಗಿದೆ. 1984ರಲ್ಲಿ ಸಿಖ್ಖರ ವಿರುದ್ಧ ನಡೆದ ಕೋಮುಗಲಭೆಗಳ ದಿನಗಳಲ್ಲಾಗಲಿ, ಅಯೋಧ್ಯೆಯ ಹೆಸರಿನಲ್ಲಿ ಬಿಜೆಪಿಯವರು ಹುಟ್ಟುಹಾಕಿದ ಕೋಮುದಳ್ಳುರಿಯ ದಿನಗಳಲ್ಲಿ ಪಶ್ಚಿಮ ಬಂಗಾಳವು ಕೋಮು ಸಾಮರಸ್ಯದ ಪ್ರಜ್ವಲಿತ ಮಾದರಿಯಾಗಿ ಮೆರೆಯಿತು. ಕೋಮುವಾದಿ ಶಕ್ತಿಗಳ ಪ್ರಚೋದನೆ ಹಾಗೂ ಚಿತಾವಣೆಗಳ ನಡುವೆಯೂ ಪಶ್ಚಿಮ ಬಂಗಾಳವು ಕೋಮು ಸೌಹಾರ್ದತೆಯನ್ನು ಇಂದಿಗೂ ಕಾಪಾಡಿಕೊಂಡು ಬಂದಿದೆ.

ರಾಜ್ಯದ ಹಾಗೂ ದೇಶದ ಜನತೆಯ ಹಿತದೃಷ್ಟಿಯಿಂದ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವು ಕೇಂದ್ರ ರಾಜ್ಯ ಸಂಬಂಧಗಳ ಪುನರ್ರಚನೆಯ ಪ್ರಶ್ನೆಯನ್ನು ಎತ್ತುವುದಕ್ಕೆ ನೇತೃತ್ವವನ್ನು ನೀಡಿದೆ. ಅನೇಕ ಸಲ ಈ ಪ್ರಶ್ನೆಯು ಒಂದು ಆಂದೋಲನದ ಸ್ವರೂಪ ಪಡೆಯುವಂತಾಗಿ ಅನೇಕ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರಗಳು ಮತ್ತು ಕೆಲವು ಎನ್.ಡಿ.ಎ ಮಿತ್ರ ಪಕ್ಷಗಳ ಸರ್ಕಾರಗಳು ಎಡರಂಗ ನೇತೃತ್ವದ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತಾಯಿತು.



ಮುಂದಿನ ಜವಾಬ್ದಾರಿ : 25 ವರ್ಷಗಳ ಹಿಂದಿನ ಪರಿಸ್ಥಿತಿಗೆ ಹೋಲಿಸಿದಾಗ, ಇಂದು, ಮೇಲೆ ವಿವರಿಸಿದ ಸಾಧನೆಗಳಿಂದಾಗಿ, ಪಶ್ಚಿಮ ಬಂಗಾಳದ ಜನತೆಯು ತಮ್ಮ ಹಕ್ಕುಗಳ ಬಗ್ಗೆ, ತಮ್ಮ ಆಶೋತ್ತರಗಳ ಬಗ್ಗೆ ತುಂಬಾ ಪ್ರಜ್ಞಾವಂತವಾಗಿದೆ. ಸೀಮಿತ ಸಂವಿಧಾನಾತ್ಮಕ ಅಧಿಕಾರ ಮತ್ತು ಸೀಮಿತ ಹಣಕಾಸು ಸಾಮರ್ಥ್ಯದೊಂದಿಗೆ ಜನತೆಯ ನ್ಯಾಯಸಮ್ಮತವಾದ ಆಶೋತ್ತರಗಳನ್ನು ಈಡೇರಿಸುವುದು ಎಡರಂಗ ಸರ್ಕಾರಕ್ಕೆ ತುಂಬಾ ಕಷ್ಟದ ಕೆಲಸವಾಗಿದೆ. ಇದರ ಜೊತೆಯಲ್ಲಿ ಈಗ ಆರ್ಥಿಕ ಪುನರ್ರಚನೆಯ ಹೆಸರಿನಲ್ಲಿ ಬರುತ್ತಿರುವ ಕೇಂದ್ರ ಸರ್ಕಾರದ ಹೊಸ ದಾಳಿಗಳಿಂದ ಎಡರಂಗ ಸರ್ಕಾರವು ಜನತೆಗೆ ನೀಡುತ್ತಾ ಬಂದಿದ್ದ ಪರಿಹಾರವನ್ನು ಮುಂದುವರೆಸುವುದು ಕಷ್ಟದ ಕೆಲಸವಾಗಲಿದೆ.

ಇಂತಹ ಸಂದರ್ಭದಲ್ಲಿ ಎಡರಂಗ ಸರ್ಕಾರದ ವಿರುದ್ಧ ಜನರನ್ನು ಪ್ರಚೋದಿಸುವ ಮೂಲಕ ಚುನಾವಣೆಯಲ್ಲಿ ಎಡರಂಗವನ್ನು ಸೋಲಿಸುವ ಪ್ರಯತ್ನಗಳು ಹೆಚ್ಚಾಗುತ್ತಿವೆ. ಆದರೆ ರಾಜ್ಯದ ಜನತೆಯು ಎಡರಂಗವನ್ನು ಬಲವಾಗಿ ಬೆಂಬಲಿಸುತ್ತಿರುವುದನ್ನು ಅವರು ಮನಗಂಡರು. ನಂತರ ಈ ಪ್ರತಿಗಾಮಿ ಶಕ್ತಿಗಳು ಎಡರಂಗ ಸರ್ಕಾರವನ್ನು ಉರುಳಿಸಲು ಉನ್ನತ ಮಟ್ಟದ ಸಂಚುಗಳನ್ನು ಹೂಡಲಾರಂಭಿಸಿದವು. ಟಿ.ಎಂ.ಸಿ., ಬಿ.ಜೆ.ಪಿ., ಪಿ.ಡಬ್ಲ್ಯೂ.ಜಿ., ಮತ್ತು ಭಾರತ ಸರ್ಕಾರಗಳು ನೇರವಾಗಿ ಭಾಗವಹಿಸಿದ್ದ ಕೇಶ್‌ಪುರ್ ಘಟನೆ ಇಂತಹ ಸಂಚಿನ ಸ್ಪಷ್ಟ ಉದಾಹರಣೆಯಾಗಿದೆ. ಇಂತಹ ಸಂಚುಗಳನ್ನು ವಿಫಲಗೊಳಿಸಿ ಮುನ್ನಡೆಯಲು ಜನತೆ ಸದಾ ಎಚ್ಚರವಹಿಸುವಂತೆ ಗಮನ ನೀಡಬೇಕಾಗಿದೆ.

ಎಡರಂಗ ಸರ್ಕಾರವು ರಾಜ್ಯದ ಜನತೆಗೆ ಪರಿಹಾರವನ್ನು ಒದಗಿಸುವ ಜೊತೆಯಲ್ಲಿ ಅವರಿಗೆ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ನೀಡಿದೆ. ಟ್ರೇಡ್‌ಯೂನಿಯನ್ ಹಾಗೂ ಇತರ


ಎಡರಂಗದ ರೂವಾರಿಗಳು

ಪ್ರಜಾಸತ್ತಾತ್ಮಕ ಹೋರಾಟಗಳಲ್ಲಿ ಹಸ್ತಕ್ಷೇಪ ಮಾಡದಿರುವುದು ಎಡರಂಗ ಸರ್ಕಾರದ ಧೋರಣೆಯಾಗಿದೆ. ಈ ಧೋರಣೆಯಿಂದ ಪ್ರೇರಿತರಾದ ಕಾರ್ಮಿಕರು, ರೈತರು ಮತ್ತು ಇತರ ಪ್ರಜಾಸತ್ತಾತ್ಮಕ ಜನ ವಿಭಾಗಗಳು ಸಾಮ್ರಾಜ್ಯಶಾಹಿ ಪಿತೂರಿಗಳ ವಿರುದ್ಧ ಉದಾರೀಕರಣ, ಜಾಗತೀಕರಣದ ವಿರುದ್ಧ, ಕೋಮುವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಅನೇಕ ಹೋರಾಟಗಳನ್ನು ನಡೆಸಲು ಸಾಧ್ಯವಾಯಿತು. ಈ ಸಮರಶೀಲ ಹೋರಾಟಗಳಲ್ಲಿ 3500ಕ್ಕೂ ಹೆಚ್ಚು ಸಂಗಾತಿಗಳು ಪ್ರಾಣಾರ್ಪಣೆಗೈದರು. ಈ ಹೋರಾಟಗಳ ಮೂಲಕ ದುಡಿಯುವ ಜನರ ಪ್ರಜ್ಞೆ ಹೆಚ್ಚಾಗಿ. ಸಮಾಜದಲ್ಲಿ ವರ್ಗಶಕ್ತಿಗಳ ಬಲಾಬಲವನ್ನು ಪರಿವರ್ತಿಸಲು ಸಾಧ್ಯವಾಯಿತು. ಒಂದು ವೇಳೆ ಎಡರಂಗ ಸರ್ಕಾರವು ಜನತೆಗೆ ಕೆಲವೊಂದು ಪರಿಹಾರಗಳನ್ನು ಒದಗಿಸುವುದರಲ್ಲಿ ತೃಪ್ತಿಯಾಗಿ ಅಧಿಕಾರವನ್ನು ಹೋರಾಟದ ಅಸ್ತ್ರವಾಗಿ ಬಳಸಲು ವಿಫಲವಾಗಿದ್ದರೆ, ಆಡಳಿತದಲ್ಲಿರುವವರ ವಿರುದ್ಧದ ಜನತೆಯ ಆಕ್ರೋಶದಿಂದ ತಪ್ಪಿಸಿಕೊಳ್ಳಲಾಗುತ್ತಿರಲಿಲ್ಲ ಮಾತ್ರವಲ್ಲ ಇಷ್ಟೊಂದು ಕಾಲ ಅಧಿಕಾರದಲ್ಲಿ ಮುಂದುವರೆಯುವುದು ಸಾಧ್ಯವಾಗುತ್ತಿರಲಿಲ್ಲ.

ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರ್ಕಾರದ ಯಶಸ್ಸಿಗೆ ವರ್ಗಶಕ್ತಿಗಳ ದೃಢೀಕರಣ ಮುಖ್ಯ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಎಡರಂಗಕ್ಕೆ ದೊರೆತ ಮತಗಳನ್ನು ಪರಿಶೀಲಿಸುವುದು ಸೂಕ್ತ.

ವಿಧಾನ ಸಭಾ ಚುನಾವಣೆಗಳಲ್ಲಿ ಎಡರಂಗ ಗಳಿಸಿದ ಶೇಕಡವಾರು ಮತಗಳು.

ವರ್ಷ	ಶೇಕಡವಾರು ಮತಗಳು
1977	45.97
1982	52.57
1987	52.96
1991	48.17
1996	49.08
2001	48.99

ತೀವ್ರ ಆರ್ಥಿಕ ಬಿಕ್ಕಟ್ಟು, ಕಡಿಮೆಯಾಗುತ್ತಿರುವ ಪರಿಹಾರ ಕ್ರಮಗಳು, ಅಧಿಕಾರದಲ್ಲಿರುವ ಸರ್ಕಾರದ ವಿರುದ್ಧ ಸಹಜವಾಗಿ ಬೆಳೆಯುತ್ತಿರುವ ಅತೃಪ್ತಿಯ ಹಿನ್ನಲೆಯಲ್ಲಿಯೂ ಈ ಅಂಕಿಅಂಶಗಳು ನಿರಾಶಾದಾಯಕವಾಗಿಲ್ಲ. ಮೊದಲ ಮೂರು ಚುನಾವಣೆಗಳಲ್ಲಿ ಎಡರಂಗಕ್ಕೆ ಜನತೆಯ ಬೆಂಬಲ ಹೆಚ್ಚಾಗುತ್ತಾ ಹೋಗಿದೆ. ಆದರೆ ಅನಂತರದ ಚುನಾವಣೆಗಳಲ್ಲಿ ಸಣ್ಣ ಪ್ರಮಾಣದಲ್ಲಿ ಬೆಂಬಲ ಇಳಿಮುಖವಾಗುತ್ತಿರುವುದು ಗಮನಕ್ಕೆ ಬರುತ್ತದೆ. ಈ ಅಂಚಿನ ಇಳಿತಕ್ಕೆ ಸಂಚಾರಿ ಮತದಾರರು ಒಂದು ಕಾರಣವಾಗಿದ್ದಾರೆ. ಅದಲ್ಲದೆ ಆರಂಭದ 3 ಚುನಾವಣೆಗಳ ಅವಧಿಯಲ್ಲಿ ಜನತೆಯ ಆಶೋತ್ತರಗಳು ಕಡಿಮೆ ಇದ್ದು ಪರಿಹಾರ ನೀಡುವ ಎಡರಂಗದ ಸಾಮರ್ಥ್ಯ ಹೆಚ್ಚು ಇರುತ್ತಿತ್ತು. ಆದರೆ ನಂತರದ ಅವಧಿಯಲ್ಲಿ ಜನತೆಯ ಆಶೋತ್ತರಗಳು ಹೆಚ್ಚಾದವು. ಆದರೆ ಪರಿಹಾರ ಒದಗಿಸುವ ಎಡರಂಗದ ಸಾಮರ್ಥ್ಯ ಕಡಿಮೆಯಾಯಿತು. ಆದ್ದರಿಂದ ಎಡರಂಗ ಸರ್ಕಾರ ಕೇವಲ ಪರಿಹಾರ ಮತ್ತು ಅಭಿವೃದ್ಧಿಯ ಕಾರ್ಯಕ್ರಮಗಳಿಗೆ ಸೀಮಿತಗೊಳ್ಳಬಾರದು. ದುಡಿಯುವ ಜನತೆಯ ಪ್ರಜ್ಞೆಯನ್ನು ನಿರಂತರವಾಗಿ ಹೆಚ್ಚಿಸಲು ಅಗತ್ಯವಾದ ಹೋರಾಟಗಳನ್ನು ಸಂಘಟಿಸಲು ಆದ್ಯತೆ ನೀಡಬೇಕಾಗುತ್ತದೆ.

ಇಂತಹ ನಕಾರಾತ್ಮಕ ಪರಿಸ್ಥಿತಿಯಲ್ಲಿಯೂ ವರ್ಗ ಶಕ್ತಿಗಳ ಬಲಾಬಲವನ್ನು ನಮ್ಮ ಪರವಾಗಿ ಬದಲಾಯಿಸುವುದು ನಮಗೆ ಸಾಧ್ಯವಾಗಿದೆ. ಇನ್ನಷ್ಟು ಹೆಚ್ಚು ಗಮನನೀಡುವ ಮೂಲಕ ನಾವು ಇನ್ನೂ ಉತ್ತಮ ಫಲಿತಾಂಶವನ್ನು ಮುಂದಿನ ದಿನಗಳಲ್ಲಿ, ಪಡೆಯಲು ಸಾಧ್ಯವಿದೆ.


ಶಿಕ್ಷಣಕ್ಕೆ ಒತ್ತು


ಬುಶ್‌ರ ಇರಾಕ್ ಯುದ್ಧೋನ್ಮಾದ ನಿಲ್ಲಬೇಕು !!

ಅಮೆರಿಕಾ ಇರಾಕ್‌ನ ಮೇಲೆ ತನ್ನ ಆಕ್ರಮಣವನ್ನು ತೀವ್ರಗೊಳಿಸಿದೆ. ಇರಾಕ್‌ನ ಅಧ್ಯಕ್ಷ ಸದ್ದಾಂ ಹುಸೇನ್‌ರನ್ನು ಪದಚ್ಯುತಗೊಳಿಸಿ, ಆ ದೇಶವನ್ನೇ ಕಬಳಿಸುವ ಸಂಚು ಅದು. ಈ ಅಂತರ್ರಾಷ್ಟ್ರೀಯ ಭಯೋತ್ಪಾದಕ ಅಮೆರಿಕಾದ ಸಾರ್ವಭೌಮತ್ವದ ದೇಶವೊಂದರ ಮೇಲೆ ಯಾಕೆ ಯುದ್ಧ ಸಾರುತ್ತಿದೆ. ಹುರುಳಿಲ್ಲದ ಅದರ ಆರೋಪಗಳನ್ನೇಕೆ ಮುಂದೆ ಮಾಡುತ್ತಿದೆ?

ಶರತ್‌ಚಂದ್ರ

ಅಧ್ಯಕ್ಷ ಬುಶ್ ದಿನಾ ಈಗ ಇರಾಕ್ ಮೇಲೆ ಯುದ್ಧದ ಮಾತನಾಡುತ್ತಿದ್ದಾರೆ. ಸಾಮೂಹಿಕ-ಹತ್ಯೆಯ ಶಸ್ತ್ರಾಸ್ತ್ರಗಳ ಪರೀಕ್ಷಣೆಗೆ ತಡೆ, ಬಿನ್ ಲಾಡೆನ್ ಭಯೋತ್ಪಾದಕರಿಗೆ ನೆರವು. ಅಂತರಾಷ್ಟ್ರೀಯ ಕಾನೂನುಗಳ ಉಲ್ಲಂಘನೆ ಮತ್ತು ಇರಾಕಿ ಜನತೆಗೆ ಪರಿಹಾರ ಸಾಮಗ್ರಿಗೆ ತಡೆ - ಇವು ಅಧ್ಯಕ್ಷ ಬುಶ್ ಯುದ್ಧಕ್ಕೆ ಹೂಡುತ್ತಿದ್ದ ಕಾರಣಗಳು- ನೆಪಗಳು. ಇವು ಒಂದೊಂದಾಗಿ ಸುಳ್ಳು ಎಂದು ಸಾಬೀತಾಗಿದೆ. ನಿಜವಾದ ಕಾರಣ ಜಗತ್ತಿನ ಎರಡನೇ ಅತೀ ದೊಡ್ಡ ತೈಲ ಉತ್ಪಾದಕನಾದ ಇರಾಕ್ ಮೇಲೆ ನೇರ ಹಿಡಿತ.

ಆದರೆ ಹತ್ತು ವರ್ಷಗಳ ನಂತರ ಎಲ್ಲರೂ ಹೆಚ್ಚು ಬುದ್ಧಿವಂತರಾಗಿದ್ದಾರೆ. ಬುಶ್ ಎರಚಿದ


ಸದ್ದಾಂ ಹುಸೇನ್

ಮಂಕುಬೂದಿ ಈ ಬಾರಿ ಕೆಲಸ ಮಾಡುವುದು ಕಷ್ಟ. ಜರ್ಮನಿ, ನಾಟೋ ಬೆಂಬಲ ಕಷ್ಟ ಈ ಬಾರಿ. ನಿಕಟ ಮಿತ್ರ ಬ್ರಿಟನ್ ಸಹ ಹಿಂದೇಟು ಹೊಡೆಯಬಹುದು. ಪಶ್ಚಿಮ ಏಶ್ಯಾದ ಅರಬ್ ದೇಶಗಳಿಂದಲಂತೂ ಸುತಾರಾಂ ಬೆಂಬಲವಿಲ್ಲ.

ಆದರೂ ಸೆಪ್ಟೆಂಬರ್ 11 ರ ನಂತರ ಬಡಿದೆಬ್ಬಿಸಿದ 'ಭಯೋತ್ಪಾದನೆಯ ವಿರುದ್ಧ ಯುದ್ಧ'ದ ಉನ್ಮಾದ ಒಂದೆಡೆ. ಇನ್ನೊಂದೆಡೆ ದೈತ್ಯ ಕಂಪನಿಗಳ ಹಗರಣಗಳು, ಆರ್ಥಿಕ ಬಿಕ್ಕಟ್ಟು ಮತ್ತು ಸೆನೆಟ್ ಚುನಾವಣೆಗಳ ಭಯ. ಇವೆಲ್ಲವೂ ಅಧ್ಯಕ್ಷ ಬುಶ್ ಅಕ್ಟೋಬರ್ ಹೊತ್ತಿಗೆ ಇರಾಕ್ ಮೇಲೆ ಆಕ್ರಮಣಕ್ಕೆ ಭಾರಿ ತಯಾರಿ ನಡೆಸುವಂತೆ ಮಾಡಿದೆ. ಇದನ್ನು ನಿಲ್ಲಿಸಲು ಜಗತ್ತಿನ ಎಲ್ಲೆಡೆ ಏಳುತ್ತಿರುವ ಪ್ರತಿರೋಧದ ಅಲೆಜತೆ ಭಾರತದ ಸರ್ಕಾರ ಮತ್ತು ಜನತೆ ದನಿಗೂಡಿಸಬೇಕು. ಇಲ್ಲದಿದ್ದರೆ ಇಡೀ ಜಗತ್ತಿಗೆ ಅಪಾಯ ಗ್ಯಾರಂಟಿ.

ಅಧ್ಯಕ್ಷ ಬುಶ್ ಇರಾಕ್ ಮೇಲೆ ಯುದ್ಧ ಸಾರಿಬಿಟ್ಟಿದ್ದಾರೆ. ಅಕ್ಟೋಬರ್ ಹೊತ್ತಿಗೆ ಇರಾಕ್ ಮೇಲೆ ಭಾರಿ ಆಕ್ರಮಣ ಮಾಡಿ ಸದ್ದಾಂಹುಸೇನ್‌ರನ್ನು ಉರುಳಿಸುವ ಅಮೆರಿಕದ 'ಮಿತ್ರ' ಸರ್ಕಾರ ಸ್ಥಾಪಿಸುವ ಎಲ್ಲಾ ಸಿದ್ಧತೆ ನಡೆಸಿದೆ. ಎರಡೂವರೆ ಲಕ್ಷ ಅಮೆರಿಕನ್ ಸೈನಿಕರು ಇರಾಕ್ ಮೇಲೆ ಎರಗಿ ಇಡೀ ದೇಶವನ್ನೇ ವಶಪಡಿಸಿಕೊಳ್ಳುವುದೋ ಅಥವಾ 25 ಸಾವಿರ ಸೈನಿಕರನ್ನು ಬಾಗ್ದಾದ್ ಮೇಲೆ ಇಳಿಸಿ ಪ್ರಮುಖ ಕೇಂದ್ರಗಳನ್ನು ವಶಪಡಿಸಿಕೊಳ್ಳುವುದೋ ಎಂಬುದಷ್ಟೇ ನಿರ್ಧಾರವಾಗಬೇಕಾಗಿರುವುದು. ಸದ್ದಾಂ ಹುಸೇನ್‌ರನ್ನು ಉರುಳಿಸಿದ ಮೇಲೆ ಯಾರನ್ನು ಅಧಿಕಾರದಲ್ಲಿ ಕೂರಿಸುವುದು ಎಂಬ ಬಗ್ಗೆ ಬುಶ್ ಸರ್ಕಾರ ಹೆಚ್ಚು ಚಿಂತಾಕ್ರಾಂತವಾಗಿದೆಯಂತೆ. ಇತ್ತೀಚೆಗೆ ಬಹಿರಂಗವಾಗಿಯೇ ಇರಾಕಿನ ವಿರೋಧಿ ಗುಂಪುಗಳ ಸಮ್ಮೇಳನವನ್ನು ವಾಶಿಂಗ್‌ಟನ್ನಿನಲ್ಲಿಯೇ ನಡೆಸಲಾಯಿತು. ಈ

ಬುಶ್ + ತೈಲ = ರಕ್ತಪಾತ

ಸಮ್ಮೇಳನದಲ್ಲಿ ಅಮೆರಿಕದ ರಕ್ಷಣಾ ಮಂತ್ರಿ ಹಾಜರಿದ್ದರೆ, ಸಮ್ಮೇಳನದ ಪ್ರತಿನಿಧಿಗಳು ವಿಡಿಯೋ ಸಮ್ಮೇಳನ'ದ ಸಹಾಯದಿಂದ ಉಪಾಧ್ಯಕ್ಷ ಡಿಕ್‌ಚೇನಿ ಯವರೊಂದಿಗೆ ಮಾತುಕತೆ ನಡೆಸಿದರು. 1998ರಿಂದ ಈಚೆಗೆ ಇರಾಕಿ 'ಭಿನ್ನಮತೀಯರು' ಗುಂಪುಗಳಿಗೆ ಅಮೆರಿಕಾ ಬಹಿರಂಗವಾಗಿಯೇ ಧನಸಹಾಯ ಮಾಡುತ್ತಿದೆ. ಇದಕ್ಕಾಗಿ ಪಾರ್ಲಿಮೆಂಟಿನ ಅಧಿಕೃತ ಅನುಮತಿ ಪಡೆಯಲಾಗಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಸುಮಾರು ಹತ್ತು ಕೋಟಿ ಡಾಲರುಗಳನ್ನು ಇರಾಕಿ 'ಭಿನ್ನಮತೀಯರ' ಮೇಲೆ ಸುರಿದಿದೆ. ಇವೆಲ್ಲ ಸಾರ್ವಭೌಮ ದೇಶವಾದ ಇರಾಕ್ ಒಂದರ ಮೇಲೆ ಆಕ್ರಮಣಕ್ಕೆ, ಅಲ್ಲಿನ ಸರ್ಕಾರವನ್ನು ಬದಲಾಯಿಸಲು ಅಧ್ಯಕ್ಷ ಬುಶ್‌ಗೆ ಅಧಿಕಾರ ಕೊಟ್ಟವರು ಯಾರು ಅಂತ ಕೇಳಬಹುದು? 1991ರ ಕೊಲ್ಲಿಯುದ್ಧದ ಮೊದಲು ವಿಶ್ವಸಂಸ್ಥೆಯ ನಿರ್ಣಯವಿತ್ತು. ಕುವೈತ್ ಮೇಲೆ ಆಕ್ರಮಣ ಮಾಡುವ ಪ್ರಮಾದ ಎಸಗಿತ್ತು ಇರಾಕ್. ಇದರ ಅರ್ಥ ಆಗಿನ ಯುದ್ಧ ಸರಿಯಾದ್ದು ಎಂದಲ್ಲ. ಆದರೂ ಕೆಲವಾದರೂ ನಿಯಮಗಳನ್ನು ಪಾಲಿಸಲಾಗಿತ್ತು. ಆದರೆ ಈಗ ಎಲ್ಲವನ್ನೂ ಗಾಳಿಗೆ ತೂರಲಾಗಿದೆ.

ನಾಲ್ಕು ನೆಪಗಳು :

ಅಧ್ಯಕ್ಷ ಬುಶ್ ಬೇರೆ ಬೇರೆ ಸಮಯದಲ್ಲಿ ಇರಾಕ್ ಮೇಲೆ ಆಕ್ರಮಣಕ್ಕೆ ಬೇರೆ ಬೇರೆ ಕಾರಣಗಳನ್ನು ಕೊಡುತ್ತಾ ಬಂದಿದ್ದಾರೆ. ಇವುಗಳಲ್ಲಿ ಪ್ರಮುಖವಾದವು ನಾಲ್ಕು.

- ಮೊದಲನೆಯದು ಇರಾಕ್ ಬಳಿ ಸಾಮೂಹಿಕ ನರಹತ್ಯೆಗೆ ಬಳಸುವ ಮಾರಕಾಸ್ತ್ರಗಳ (ರಾಸಾಯನಿಕ, ಜೈವಿಕ, ಅಣು)ನ್ನು ಶೇಖರಿಸಿದೆ.
- ಎರಡನೆಯದು ಇರಾಕ್ ಅಂತರ್ರಾಷ್ಟ್ರೀಯ ಕಾನೂನು, ನಿಯಮಗಳನ್ನು ಧಿಕ್ಕರಿಸುತ್ತಿದೆ.
- ಮೂರನೆಯದು ಅಲ್-ಕಾಯಿದಾಕ್ಕೆ ಒಟ್ಟಾರೆಯಾಗಿ ಮತ್ತು ಸೆಪ್ಟೆಂಬರ್ 11ರ ಭಯೋತ್ಪಾದಕ ಕೃತ್ಯಕ್ಕೆ ಇರಾಕ್ ಸರ್ಕಾರ ನೆರವಾಗಿದೆ.
- ನಾಲ್ಕನೆಯದಾಗಿ ಮಾನವೀಯ ಸಹಾಯ ಇರಾಕಿ ಜನರನ್ನು ತಲುಪಲು" ಇರಾಕ್ ಸರ್ಕಾರಕ್ಕೆ ಅಡ್ಡಿಯಾಗಿದೆ.


ಈ ಕಾರಣಗಳೂ (ನೆಪಗಳು ಎಂದರೆ ಹೆಚ್ಚು ಸರಿಯಾದೀತು) ಒಂದೊಂದಾಗಿ ಉದುರಿ ಬೀಳುತ್ತಿದ್ದಂತೆ, ಅಧ್ಯಕ್ಷ ಬುಶ್ ಇವೆಲ್ಲಾ ಕಾರಣಗಳು ರುಜುವಾತಾಗದಿದ್ದರೂ, ಸದ್ದಾಂಹುಸೇನರನ್ನು ಅಧಿಕಾರದಿಂದ ಇಳಿಸುವುದೇ ಯುದ್ಧದ ಉದ್ದೇಶ ಎಂದಿದ್ದಾರೆ. ಹೇಗೆ ಈ ಪ್ರತಿಯೊಂದು ಕಾರಣ ಅಥವಾ ನೆಪಕ್ಕೆ ಯಾವುದೇ ಪುರಾವೆ ಇಲ್ಲ. ಇದು ಹಸಿಸುಳ್ಳು ಎಂದು ರುಜುವಾತಾಗಿದೆ. (ವಿವರಗಳಿಗೆ ಬಾಕ್ಸ್ ಕಳಚಿಬಿದ್ದ ನಾಲ್ಕು ನೆಪಗಳು ಬಾಕ್ಸ್ ನೋಡಿ)

ಬುಶ್ ಕಿತ್ತು ಹಾಕಲು ಇವೇ ನಾಲ್ಕು ಕಾರಣಗಳು ಸಾಕು


ಆದರೆ ಈ ನಾಲ್ಕು ಕಾರಣಗಳ ಬಗ್ಗೆ ಇನ್ನೊಂದು ರೀತಿಯಲ್ಲಿ ನೋಡಬಹುದು. ಈ ನಾಲ್ಕು ಕಾರಣಗಳು ಒಂದು ದೇಶದ ಮೇಲೆ ಆಕ್ರಮಣ ಮಾಡಲು, ಆದೇಶದ ಅಧ್ಯಕ್ಷರನ್ನು ಸರ್ಕಾರವನ್ನು ಬದಲಾಯಿಸಬಹುದು ಎನ್ನುವುದಾದರೆ ಅಮೆರಿಕಾದ ಮೇಲೆ ಆಕ್ರಮಣ ಮಾಡಿ ಅಧ್ಯಕ್ಷ ಬುಶ್‌ರನ್ನು ಬದಲಾಯಿಸುವುದು ತುರ್ತು ಅಗತ್ಯ! ಯಾಕೆ ಅಂದೀರಾ? ಒಂದೊಂದಾಗಿ ಕಾರಣಗಳನ್ನು ನೋಡಿ. ಅಮೆರಿಕಾದ ಬಳಿ ಜಗತ್ತಿನ ಅತ್ಯಂತ ದೊಡ್ಡ 'ಸಾಮೂಹಿಕ ನರಹತ್ಯೆಯ ಮಾರಕಾಸ್ತ್ರಗಳು ಸ್ಟಾಕು ಇದೆ. ಇಂತಹ ಅಸ್ತ್ರ (ಅಣುಬಾಂಬು)ವನ್ನು ನಿಜವಾಗಿಯೂ ಬಳಸದ ಏಕಮಾತ್ರ ದೇಶ ಅಮೆರಿಕಾ. ಕಳೆದ ಕೆಲವು ವರ್ಷಗಳಿಂದ ಅಮೆರಿಕ ಒಂದಾದ ನಂತರ ಒಂದು ಅಂತರ್ರಾಷ್ಟ್ರೀಯ ಒಪ್ಪಂದಗಳನ್ನು ಕಾನೂನುಗಳನ್ನು ಮುರಿಯುತ್ತಾ ಬಂದಿದೆ. ರಶ್ಯಾದ ಜತೆ ಕ್ಷಿಪಣೆ - ವಿರೋಧಿ ಒಪ್ಪಂದ, ಅಣ್ವಸ್ತ್ರ - ಪರೀಕ್ಷಣೆ ನಿಷೇಧ, ಒಪ್ಪಂದ ಇವನ್ನು ಅಮೆರಿಕ ಏಕಪಕ್ಷೀಯವಾಗಿ ಮುರಿದಿದೆ. ಇನ್ನೂ ಹಲವು ಅಂತರ್ರಾಷ್ಟ್ರೀಯ ಒಪ್ಪಂದಗಳಿಗೆ ಸಹಿ ಹಾಕದಿರುವ ಏಕಮಾತ್ರ ದೇಶ ಅಮೇರಿಕ ಅಂತರ್ರಾಷ್ಟ್ರೀಯ ಕ್ರಿಮಿನಲ್ ಕೋರ್ಟು, ಕ್ಯೋಟೋ ಒಪ್ಪಂದ, WTO ದಲ್ಲೂ ನಿಯಮಗಳನ್ನು ಉಲ್ಲಂಘಿಸಿದ್ದಕ್ಕೆ ಅತ್ಯಂತ ಹೆಚ್ಚಿನ ದೂರುಗಳನ್ನು ಹೊಂದಿರುವ ದೇಶ ಅಮೆರಿಕ. ಅದರ ಹತ್ತಿರದ ಮಿತ್ರದೇಶಗಳಾದ ಯುರೋಪಿಯನ್ ಒಕ್ಕೂಟದ ದೇಶಗಳಲ್ಲಿ ಅಮೆರಿಕಾದ ವಿರುದ್ಧ WTOಗೆ ದೂರು ಕೊಟ್ಟಿವೆ. ಇತ್ತೀಚಿನ ಪುರಾವೆಗಳು ಸೆಪ್ಟೆಂಬರ್ 11ರ ಬಗ್ಗೆ ಅಮೆರಿಕಾದ ಗೂಢಚಾರ ಸಂಸ್ಥೆಗಳಿಗೂ, ಸರ್ಕಾರಕ್ಕೂ ಸುಳಿವು ಇತ್ತು ಎಂದು ಬಯಲುಪಡಿಸಿವೆ. ಕಳೆದ ನೂರು ವರ್ಷಗಳಿಂದ ಅಮೆರಿಕದ ಅನಧಿಕೃತ ಸಂಸ್ಥೆಯಾದ CIA ನಡೆಸದ ಭಯೋತ್ಪಾದಕ ಕೃತ್ಯಗಳಿಲ್ಲ. ವಿದೇಶಿ ನಾಯಕರ ಕೊಲೆ (ಅಲೆಂದೆ, ಲೂಮುಂಬಾ ಇತ್ಯಾದಿ), ಸಂವಿಧಾನಬದ್ಧ ಚುನಾಯಿತ ಸರ್ಕಾರಗಳ ಪತನ, ನರಮೇಧ, ಯುದ್ಧ ಅಪರಾಧ ಇವುಗಳ ಪಟ್ಟಿ ಮಾಡಲೂ ಹಲವು ಸಂಪುಟಗಳೇ ಬೇಕು. ಇರಾಕ್, ಯುಗೋಸ್ಲಾವಿಯಾ, ಅಫಘಾನಿಸ್ತಾನ ಮುಂತಾದ ಕಡೆ ಪರಿಹಾರ ಸಾಮಗ್ರಿ ಜನರಿಗೆ ತಲುಪುವಂತೆ ಮಾಡಿರುವುದು ಅಮೆರಿಕನ್ ಸರ್ಕಾರದ ಏಕಪಕ್ಷೀಯ ಕ್ರಮಗಳು, ವಿಶ್ವಸಂಸ್ಥೆಯ ಭದ್ರತಾ ಅಥವಾ ಯಾವುದೋ ಅಂತರ್ರಾಷ್ಟ್ರೀಯ ಕಾನೂನು ನಿಯಮ ಮಾನ್ಯ ಮಾಡದೆ ಇರಾಕ್ ಮೇಲೆ ಯುದ್ಧ ಸಾರುವುದೇ ಅತ್ಯಂತ ದೊಡ್ಡ ಭಯೋತ್ಪಾದಕ ಕೃತ್ಯ.

ಬುಶ್ + ತೈಲ = ರಕ್ತಪಾತ

ಆದರೆ ಅಮೆರಿಕಾದ ಇರಾಕ್ ಯುದ್ಧದ ನಿಜವಾದ ಉದ್ದೇಶವಾದರೂ ಏನು? ಒಂದೇ ಶಬ್ದದ ಉತ್ತರ ಇದಕ್ಕೆ ತೈಲ. ಇರಾಕ್ ಎರಡನೇ ಅತಿ ದೊಡ್ಡ ತೈಲ ಉತ್ಪಾದಕ. ಅದರ ಪ್ರಾಕೃತಿಕ ಗ್ಯಾಸ್ ನಿಕ್ಷೇಪ ಸಹ ದೊಡ್ಡದಿದೆ. ಇರಾಕ್‌ನಲ್ಲಿ ಇನ್ನೂ ಕಂಡು ಬರದ ನಿಕ್ಷೇಪ ಬಹಳ ಇರಬೇಕು. ಎಂದು ಅಂದಾಜಿದೆ. ಅದನ್ನೆಲ್ಲಾ ಸೇರಿಸಿದರೆ ಇರಾಕ್ ಮೊದಲ ಸ್ಥಾನದಲ್ಲಿರುವ ಸೌದಿ ಅರೇಬಿಯಾದಷ್ಟೇ ತೈಲ-ಗ್ಯಾಸ್


ಜಾರ್ಜ್ ಬುಶ್

ಹೊಂದಿರಬಹುದು. ಇರಾಕ್ ತೈಲ ಉತ್ಪನ್ನ ಗುಣಮಟ್ಟದ್ದು ಮತ್ತು ಕಡಿಮೆ ಖರ್ಚಿನಲ್ಲಿ ತೆಗೆಯಬಹುದಾದ್ದು. ಇದು ದೈತ್ಯ ತೈಲ ಕಂಪನಿಗಳ ಹಿಡಿತಕ್ಕೆ ಸಿಗದಿರುವ ಮುಖ್ಯ ತೈಲಭಾವಿಗಳು ಇರಾಕ್‌ನವು. ಇದರಲ್ಲಿ ನಾಲ್ಕು ಬ್ರಿಟನ್‌ಅಮೆರಿಕಾದ ಕಂಪನಿಗಳು (ತಲಾ ಎರಡು) ಇನ್ನೊಂದು ಫ್ರಾನ್ಸ್. ಆದ್ದರಿಂದ ಇರಾಕ್ ಮೇಲೆ ದಿಗ್ಬಂಧನಕ್ಕೆ ಬ್ರಿಟನ್ ಅಮೆರಿಕಾಗಳ ಸಾರಾಸಗಟು ಬೆಂಬಲ. 1972ರ ತೈಲ ರಾಷ್ಟ್ರೀಕರಣದ ಮೊದಲು ಅಮೆರಿಕಾ ಬ್ರಿಟನ್‌ಗಳ ಇರಾಕ್‌ನ ತೈಲ ಸಂಪತ್ತಿನ ಮುಕ್ಕಾಲು ಭಾಗದ ಒಡೆತನ ಹೊಂದಿದ್ದವು. ರಾಷ್ಟ್ರೀಕೃತ ಕಂಪನಿಗಳ ಖಾಸಗೀಕರಣದ 'ರೋಗ' ಜಗತ್ತಿನ ತುಂಬಾ ಹಬ್ಬುತ್ತಿರುವ ಪರಿಸ್ಥಿತಿಯ ಲಾಭ ಪಡೆದು, ತಮ್ಮ ಹಿಂದಿನ ಅಧಿಪತ್ಯ ಸ್ಥಾಪಿಸಬೇಕೆಂದು ಅಮೇರಿಕ ಬ್ರಿಟನ್‌ಗಳ ಬಯಕೆ. 1972ರ ರಾಷ್ಟ್ರೀಕರಣದ ನಂತರ ತೈಲ ಸಂಪತ್ತು ಅಭಿವೃದ್ಧಿಗೆ ಬೇಕಾದ ಬಂಡವಾಳಹೂಡಿಕೆ, ತಂತ್ರಜ್ಞಾನಕ್ಕೆ ಇರಾಕ್ ಫ್ರಾನ್ಸ್ ಮತ್ತು ರಶ್ಯಾದ ಬೆಂಬಲ ತೆಗೆದುಕೊಂಡಿತು. ದಿಗ್ಬಂಧನ ತೆಗೆದುಹಾಕುತ್ತಿರುವಂತೆ ಇರಾಕ್ ಜತೆ ತೈಲ ವ್ಯವಹಾರವು ತೊಡಗಲು ಚೀನಾ, ಜಪಾನ್, ಜರ್ಮನಿ ಕಾದಿವೆ. ಈಗಿನ ಅಂತರ್ರಾಷ್ಟ್ರೀಯ ಪರಿಸ್ಥಿತಿ ಬಳಸಿ ತನ್ನ ಎದುರಾಳಿಗಳನ್ನು ಮಟ್ಟಹಾಕಬೇಕು. ಇದು ಇರಾಕ್‌ನ ಮೇಲಿನ ದಿಗ್ಬಂಧನವನ್ನು ಅನಿರ್ದಿಷ್ಟಕಾಲ ಮುಂದುವರೆಸಲು ಕಾರಣ ಕೂಡಾ. ಇರಾಕ್ ಮೇಲೆ ದಿಗ್ಬಂಧನ ಮುಂದುವರೆದಷ್ಟೂ ಜನತೆಯ ಸಂಕಷ್ಟ ಒಪ್ಪಂದವಾಗಿ ಅವರು ಸದ್ದಾಂ ವಿರುದ್ಧ ಬಂಡೇಳುತ್ತಾರೆ. ಸದ್ದಾಂನನ್ನು ಉರುಳಿಸಿ, 'ಮಿತ್ರ ಸರ್ಕಾರ' ಸ್ಥಾಪಿಸುವುದು ಸುಲಭವಾಗುತ್ತದೆ ಎಂತಲೂ ಅವರ ಲೆಕ್ಕಾಚಾರ. ಸೌದಿ ಅರೇಬಿಯಾದಲ್ಲಿ ಶೇಕ್ ವಿರುದ್ಧ ಇಸ್ಲಾಮಿಕ್ ಕ್ರಾಂತಿ



ಅಳಿದ ಮೇಲೆ

ಮುಂದುವರೆದ ಭಾಗ

ಯಾಕೂಬ್ ನಿಧಾನವಾಗಿ ಾತನಾಡುತ್ತಿದ್ದ. ಅವನ ಮಾತಿನಲ್ಲಿ ತಂದೆಯಂತೆ ಡಿಬಿಡಿಯಿಲ್ಲ. ಶಬ್ದಗಳ ಮೇಲಾಟವಿಲ್ಲ. ಅವನ ೂಪ ಕೂಡ ತಾಯಿಯಂತೆ. ದುಂಡಗಿನ ಮುಖ. ಗಲ ಬಾಯಿ, ರಿಝುವಿಯ ಹಾಗೆ ಕುಳ್ಳನಲ್ಲ.

'ಅಂಕಲ್, ನಿಮ್ಮಿಂದ ಒಂದು ಹಾಯವಾಗಬೇಕಾಗಿತ್ತು' ಎಂದ.

'ಈ ಫಿಲ್ಮ್‌ಗಾಗಿ ಕೆ.ಪಿ. ಪ್ರೊಡಕ್ಷನ್ಸ್‌ನವರು ೈನಾನ್ಸ್ ಕೊಡಲು ಒಪ್ಪಿದ್ದಾರೆ. ಅವರಿಂದ ಅಪ್ಪ ಂದು ಲಕ್ಷ ರೂಪಾಯಿ ಅಡ್ವಾನ್ಸ್ ತಗೊಂಡಿದ್ದ. ದನ್ನು ಎಲ್ಲರಿಗೂ ಹಂಚಿ ಬಿಟ್ಟಿದ್ದಾನೆ. ಈಗ ನಾವು ಲ್ಮ್ ಹೇಗಾದರೂ ಮಾಡಿ ಮುಗಿಸಬೇಕು.'

ರಿಝುವಿಯಾಗಿದ್ದರೆ ಇಷ್ಟು ಸ್ಪಷ್ಟವಾಗಿ, ಂಕ್ಷಿಪ್ತವಾಗಿ, ನಿಧಾನವಾಗಿ ವಿಷಯವನ್ನು ವರಿಸುತ್ತಿರಲಿಲ್ಲ ಅನಿಸಿತು. ಅವನ ಕೊಂಕು, ನಗೆ, ವ್ಯಂಗ್ಯ ಯಾವುದೂ ಮಗನಿಗೆ ಬಂದಿರಲಿಲ್ಲ. ಏಕೋ ಮನಸ್ಸು ವಿಷಣ್ಣವಾಯಿತು.

'ಬಜೆಟ್ ಎಷ್ಟು ಅಂತ ಅಗ್ರಿಮೆಂಟ್ ಆಗಿತ್ತು? ಎಂದು ಕೇಳಿದೆ.

'ತೋರಿಸತೇನೆ' ಎಂದು ಯಾಕೂಬ್ ಎದ್ದು ಒಳಗೆ ಹೋದ.

ಒಮ್ಮೆಲೆ ರಿಝುವಿಯ ಹೆಂಡತಿ ಮಾತನಾಡಲಾರಂಭಿಸಿದಳು.

'ಮಗಳು ಮದುವೆಗೆ ಬೆಳೆದು ನಿಂತಿದ್ದಾಳೆ. ಅವಳ ಮದುವೆ ಮಾಡಿಬಿಡೋಣ ಅಂತ ಬೆನ್ನು ಹತ್ತಿದ್ದೆ. ಆದರೆ ಇವರು ಈ ಕನ್ನಡ ಕತೆಯ ಪಿಕ್ಚರ್ ಆದರೆ ಅದರಿಂದ ಮದುವೆಯ ಖರ್ಚು ಹೊರಡತದೆ. ಆದ್ದರಿಂದ ಅದನ್ನು ಮೊದಲು ಮಾಡಿ ಮುಗಿಸತೇನೆ ಅಂತ ಅಂದರು. ಮೂವತ್ತು ವರ್ಷದಿಂದ ಈ ಇಂಡಸ್ಟ್ರಿಯಲ್ಲಿ ದುಡಿದು ಗಳಿಸಿದ್ದೇನು? ಏನೋ ಮನೆ ನಡೀತು. ಆದರೆ ಮಗಳ ಮದುವೆಗೆ ಬೇಕಾದಷ್ಟನ್ನೂ ಉಳಿಸಲಿಲ್ಲ. ಈಗ ಈ ಪಿಕ್ಚರ್ ಒಂದಾಗಲಿ- ಬೇಕಾದಷ್ಟು ಉಳಿಸಬಹುದು ಅನ್ನುತ್ತಿದ್ದರು ಎಂದು ಸುಮ್ಮನಾದಳು. ಆ ಮೇಲೆ, ಯಾವಾಗಲೂ ಇಂಥದೇ ಮಾತು ಕೇಳಿ ಆಸೆನೇ ಸತ್ತು ಹೋಗಿತ್ತು. ಈಗ ಅವರೇ ಹೋದರು'.

'ಭಾಭೀಜೀ, ನನ್ನಿಂದಾದಷ್ಟು ಮಾಡತೇನೆ' ಅಂದೆ.

ಯಾಕೂಬ್ ಫೈಲು ತಂದು ಕೊಟ್ಟ. ಅದರಲ್ಲಿ ಲೆಕ್ಕವನ್ನು ನೋಡಿ ನಾನು ದಿಗಿಲಾದೆ. ಎರಡು ಗಂಟೆಗಳ ಟೆಲಿಫಿಲ್ಮ್. ಹದಿನಾರು ಮಿಲಿಮೀಟರ್ ನೆಗೆಟಿವ್ ಮೇಲೆ ಚಿತ್ರೀಕರಿಸಬೇಕಾದದ್ದು. ಅದನ್ನು ಹನ್ನೊಂದು ಲಕ್ಷ ರೂಪಾಯಿಗಳಲ್ಲಿ ಮುಗಿಸಿ ಕೊಡುತ್ತೇನೆ ಎಂದು ರಿಝುವಿ ಒಪ್ಪಿಕೊಂಡಿದ್ದ.

ಎಲ್ಲೋ ಏನೋ ತಪ್ಪಿರಬೇಕೆಂದು ಮತ್ತೆ ಮತ್ತೆ ಪುಟ ತಿರುವಿ ನೋಡಿದೆ. ಇನ್ನೆಲ್ಲಾದರೂ ಇನ್ನೇನಾದರೂ ಜೋಡಣೆ ಇರಬಹುದೇನೋ ಅಂತ ಹುಡುಕಾಡಿದ. ಇಷ್ಟಕ್ಕೆಲ್ಲ ಒಪ್ಪಿದ್ದಲ್ಲದೆ ಎರಡು ಹಾಡುಗಳನ್ನ ಸೇರಿಸುತ್ತೇನೆ ಎಂದು ಮಾತು ಕೊಟ್ಟಿದ್ದ.

'ಯಾಕೂಬ್, ಕೆ.ಪಿ. ಪ್ರೊಡಕ್ಷನ್‌ದರವನ್ನು ಒಮ್ಮೆ ಮಾತಾಡಿಸೋಣ' ಎಂದೆ.

'ನಾನು ಅವರ ನಂಬರ್ ಕೊಡತೇನೆ. ನಾನೂ ಬರಬೇಕೇನು? ನನಗೆ ಅದರಲ್ಲೇನೂ ತಿಳಿಯೋದಿಲ್ಲ. ಅಪ್ಪ ನನಗೆ ಶೂಟಿಂಗ್‌ನ ಹತ್ತಿರ ಹಾಯಗೊಡಲಿಲ್ಲ' ಎಂದ.

'ಈಗಲಾದರೂ ಕಲಿ' ಎಂದೆ.

ರಿಝುವಿಯ ಹೆಂಡತಿ ಮಗನ ಕಡೆಗೆ ನೋಡಿದಳು.

'ನಿಮಗೇನೂ ಅಭ್ಯಂತರವಿಲ್ಲ ತಾನೆ' ಎಂದು ಕೇಳಿದೆ.

'ರುಖ್ಸಾನಾ ಮದುವೆ ಆಗಬೇಕಲ್ಲ. ಇದೊಂದು ಸಲ ಆಗಲಿ' ಎಂದಳು.

'ಅಂಕಲ್, ಕಾದಂಬರಿ ಬರೆದವರಿಗೂ ತಿಳಿಸಬೇಕಲ್ಲ'.

'ಅದನ್ನು ನಾನು ನೋಡಿಕೊಳ್ಳುತ್ತೇನೆ' ಎಂದೆ. ಜೀವನ ಕಲೆಯನ್ನು ಅನುಕರಿಸಲಾರಂಭಿಸಿತ್ತು. ಯಶವಂತ ರಾಯನ ಹಾಗೆ ರಿಝುವಿ ಕೂಡ ಆಪ್ತ ಮಿತ್ರರಿಂದ ದೂರ ಒಬ್ಬಂಟಿ ಸತ್ತಿದ್ದ. ಒಬ್ಬ ವಿಧವೆಯ ಮನೋರಥ ಪೂರ್ತಿ ಆಗಬೇಕಾಗಿತ್ತು. ವಾಸ್ತವದಲ್ಲೇ ನಾನು ಶಿವರಾಮ ಕಾರಂತರ ಪಾತ್ರ ನಿರ್ವಹಿಸಲಾರಂಭಿಸಿದ್ದೆ.

'ಇಪ್ಪತ್ತೈದು, ಐವತ್ತು, ಎಪ್ಪತ್ತೈದು' ಅಂಕಿಗಳನ್ನು ಘೋಷಿಸುತ್ತ ಬಂಗಾರ, ಬೆಳ್ಳಿ ಬಣ್ಣಗಳ ಹಿಂದೆ ಅಡಗಿರುವ ಪ್ಲಾಸ್ಟಿಕ್ ಟ್ರೋಫಿಗಳು. ಅರ್ಧನಗ್ನ ನಾಯಕ ನಾಯಕಿಯರ ಪೋಸ್ಟರುಗಳ ನಡುವೆ ಕಾವಿ ಹಿನ್ನೆಲೆಯ ಮೇಲೆ ಬರೆದಿರುವ ದೊಡ್ಡ ಓಂಕಾರ. ಅದನ್ನು ಸೀಳಿ ಹೋಗುವ ತ್ರಿಶೂಲ. ಅದರ ಕೆಳಗೆ 'ಗರ್ವಸೆ ಜೋ ಹಮ್ ಹಿಂದೂ ಹೈಂ' ಎಂಬ ಸಾಲು.

ಇದು ಯಾಕೂಬನ ಲಕ್ಷ್ಯಕ್ಕೆ ಬಂತೋ ಇಲ್ಲವೋ ಗೊತ್ತಾಗಲಿಲ್ಲ.

'ಬಜೆಟ್ಟನ್ನು ಹೆಚ್ಚು ಮಾಡುವ ಪ್ರಶ್ನೆಯೇ ಇಲ್ಲ. ಇಂಪಾಸಿಬಲ್! ಕೆ.ಪಿ. ಪ್ರೊಡಕ್ಷನ್‌ನ ಕೈಲಾಶ್ ಪ್ರಸಾದ್ ತನ್ನ ಅಸಹಾಯಕತೆಯನ್ನು ಅಂಡರ್‌ಲೈನ್ ಮಾಡುವಂತೆ ತನ್ನ ಎರಡೂ ಕೈಗಳನ್ನು ಅಗಲವಾಗಿ ಚಾಚಿದ.

'ಹನ್ನೊಂದು ಲಕ್ಷದಲ್ಲಿ ಫಿಲ್ಮ್ ಮಾಡಲಿಕ್ಕೆ ಸಾಧ್ಯವಿಲ್ಲದಿದ್ದರೆ ರಿಝುವಿ ಒಪ್ಪಿಕೊಂಡದ್ದಾದರೂ ಯಾಕೆ?'

ಯಾಕೂಬ್ ದೀನನಾಗಿ ನನ್ನ ಕಡೆಗೆ ನೋಡಿದ.

ನಾನು 'ನನಗೆ ಗೊತ್ತಿಲ್ಲ' ಎಂದೆ.

ಆದರೆ ನನಗೆ ಗೊತ್ತಾಗಿತ್ತು. ಈ ಧೂರ್ತವಿತ್ತ ಪ್ರವೀಣನ ಜೊತೆಗೆ ಮಾತನಾಡುತ್ತಿದ್ದಂತೆ ಮೆಲ್ಲನೆ ವಸ್ತುಸ್ಥಿತಿ ಸ್ಪಷ್ಟವಾಗಹತ್ತಿತ್ತು. ಇಂಥ ಸಣ್ಣ ಬಜೆಟ್ಟಿನಲ್ಲಿ ಚಿತ್ರಪಟ ನಿರ್ಮಿಸುವುದು ಅಸಾಧ್ಯ ಎಂದು ಗೊತ್ತಿದ್ದೂ ರಿಝುವಿ ಒಪ್ಪಿಕೊಂಡಿದ್ದ. ಏಕೆಂದರೆ ಹೇಗಾದರೂ ಮಾಡಿ, ಏನಾದರೂ ಮಾಡಿ 'ಅಳಿದ ಮೇಲೆ' ಚಿತ್ರೀಕರಿಸಲೇಬೇಕಾಗಿತ್ತು. ಈ ಜಿದ್ದಿಗಾಗಿ ಮಗಳ ಮದುವೆ ಮುಂದೂಡಿದ್ದ. ಮದುವೆಯ ಖರ್ಚು ಆ ಟೆಲಿಫಿಲ್ಮ್‌ನಿಂದ ಹೊರಡುತ್ತದೆ ಎಂದು ಹೆಂಡತಿಗೆ ಸುಳ್ಳು ಹೇಳಿದ್ದ. ರಿಝುವಿಯ ಉತ್ಸಾಹ ನೋಡಿ ಇವ ಯಾವ ಬಜೆಟ್ಟಿಗಾದರೂ ಒಪ್ಪುತ್ತಾನೆ ಎಂದು ಕಂಡುಕೊಂಡ ಕೈಲಾಶ್ ಪ್ರಸಾದ್, ಬಜೆಟ್ಟನ್ನು ಇನ್ನಷ್ಟು ಮೊಟಕುಗೊಳಿಸಿದ್ದ. ಈ ಸಾಹಸಕ್ಕೆ ಕೈಹಾಕಿದ್ದರೆ ರಿಝುವಿ ಇನ್ನೂ ಮೂರು ನಾಲ್ಕು ಲಕ್ಷದ ಸಾಲ ಕೊರಳಿಗೆ ಕಟ್ಟಿಕೊಳ್ಳುತ್ತಿದ್ದ. ವೈಯಕ್ತಿಕ ಸಾಲ. ಅಂದರೆ ಮಗಳ ಮದುವೆ ಇನ್ನೂ ಮುಂದೆ ಬೀಳುತ್ತಿತ್ತು. ಇನ್ನಷ್ಟು ತೊಡಕಿನದಾಗುತ್ತಿತ್ತು.

ಮುಂದುವರಿಯುವುದು

→

ಫಲವಾಗಿ ಇರಾನ್ ನಂತೆ ಅಮೆರಿಕ-ಬ್ರಿಟನ್ ೂರ್ಣವಾಗಿ ಹೊರಗೆ ಬೀಳಬೇಕಾದೀತು. ದ್ದರಿಂದ ಇನ್ನೊಂದು ತೈಲದ ಪ್ರಮುಖ ಂಪನ್ಮೂಲ ನೇರವಾಗಿ ವಶಪಡಿಸಿಕೊಳ್ಳುವುದು ಳ್ಳೇದು. ಇದಕ್ಕೆ ಇರಾಕ್ ಅತ್ಯುತ್ತಮ ಪ್ರಶಸ್ತ ದೇಶ ಂತ ಹಲವು ಬುಶ್‌ರ ಉಗ್ರಗಾಮಿ ಸಲಹೆಗಾರರು ೇಳಿದ್ದಾರಂತೆ. ಅಧ್ಯಕ್ಷ ಬುಶ್ ಮತ್ತು ಉಪಾಧ್ಯಕ್ಷ ೇನಿ ಇಬ್ಬರೂ ತೈಲಕಂಪನಿಗಳಲ್ಲಿ ಹಿರಿಯ ಧಿಕಾರಿಗಳಾಗಿದ್ದವರು. ಆದ್ದರಿಂದ ತೈಲ ಲಾಭಿಗೆ ೇರವಾಗಿ ಸೋರಿದರೂ ಹಿಂದೆಂದೂ ಅಧ್ಯಕ್ಷ ಉಪಾಧ್ಯಕ್ಷ ಇಬ್ಬರೂ ತೈಲ-ಲಾಭಿಗೆ ೇರಿದವರಾಗಿರಲಿಲ್ಲ, ಅಂತರ್ರಾಷ್ಟ್ರೀಯ ಸನ್ನಿವೇಶವೂ ಅನುಕೂಲಕರವಾಗಿದೆ. ಇದು ಇರಾಕ್ ಯುದ್ಧೋನ್ಮಾದದ ಹಿಂದಿರುವ ಆಶಯಗಳು ಇರಾಕ್‌ನ ಜನತೆ ಸಮಸ್ಯೆ ರಿಹರಿಸಲೂ ಮಿಲಿಟರಿ ಸರ್ವಾಧಿಕಾರ ತ್ತೊಗೆದು ಪ್ರಜಾಸತ್ತೆ ತರಲಿಲ್ಲ.

ಅಪ್ಪ ಬುಶ್ ಮಂಕುಬೂದಿ ಕೆಲಸ ಮಾಡಲ್ಲ

ಆದರೆ ಬುಶ್‌ನ ಈ ಯುದ್ಧೋನ್ಮಾದ ಸಫಲವಾಗುವ ಲಕ್ಷಣಗಳಿಲ್ಲ. ಅಪ್ಪ ಬುಶ್‌ರ ಇರಾಕ್ ಆಕ್ರಮಣ ಕಾಲದಲ್ಲಿದ್ದ ಹಲವು ಅಂಶಗಳು ಈಗ ಇಲ್ಲ. ಕುವೈಟ್ ಆಕ್ರಮಣದಿಂದ ಇರಾಕ್‌ನ ತ್ತಿ ತೋರಿಸಿದ ಪ್ರಮಾದ, ವಿಶ್ವ ಸಂಸ್ಥೆ ನಿರ್ಣಯ ಇವೆರಡು ಅಪ್ಪ ಬುಶ್‌ನ ಕೆಲಸವನ್ನು ುಗಮಗೊಳಿಸಿದ್ದನ್ನು ಆದರೆ ಈಗ ಅವೆರಡೂ ಅಂಶಗಳೂ ಇಲ್ಲ, ಕುವೈಟ್ ಆಕ್ರಮಣದಿಂದ ಹಿಂದೆ ಇದ್ದ ಅರಬ್ ಸರ್ಕಾರಗಳ ಬೆಂಬಲ ಸಹ ಈಗ ಇಲ್ಲ. ಬದಲಾಗಿ ಪ್ಯಾಲೆಸ್ತೈನ್ ವಿರೋಧಿ, ಇಸ್ರೇಲಿ ಪರ ಅಮೆರಿಕಾದ ಬೆಂಬಲ ಅರಬ್ ಜನತೆ ಮತ್ತು ಸರ್ಕಾರಗಳನ್ನು ಅತ್ಯಂತ ಅಮೆರಿಕ ವಿರೋಧಿ ಶಕ್ತಿಯಾಗಿಸಿದೆ. ಅಮೇರಿಕಾದ ಬಾಲಬಡುಕ ದೊರೆಗಳೂ ಅಮೆರಿಕಾಕ್ಕೆ ಬೆಂಬಲ ಕೊಡಲು ಹಿಂದೇಟು ಹೊಡೆಯುತ್ತಿದ್ದಾರೆ. ನಿಕಟ ಮಿತ್ರ ಬ್ರಿಟನ್ ಸಹ ಬೆಂಬಲ ಕೊಡಲು ಹಿಂದೇಟು ಹೊಡೆಯುತ್ತಿದೆ. ಆಳುವ ಬ್ರಿಟಿಷ್ ಲೇಖಿಕ ಪಕ್ಷದ ಹಲವು ಪಾರ್ಲಿಮೆಂಟಿನ ಸದಸ್ಯರು ಸಹಿ ಸಂಗ್ರಹ ಚಳುವಳಿ ನಡೆಸಿ ಯುದ್ಧಕ್ಕೆ ಬೆಂಬಲ ಕೊಡದಂತೆ ಪ್ರಚಾರ ಮಾಡುತ್ತಿದ್ದಾರೆ. ಇರಾಕ್ ಯುದ್ಧಕ್ಕೆ ಬೆಂಬಲ ಕೊಡುವುದಿಲ್ಲ ಎಂದು ಜರ್ಮನ್ ಪ್ರಧಾನಿ ಈಗಾಗಲೇ ಸಾಧಿಸಿದ ಯೂರೋಪಿನಾದ್ಯಂತ ಅಮೆರಿಕಾ ವಿರೋಧಿ ಇರಾಕ್ ಯುದ್ಧ ವಿರೋಧಿ ಪ್ರಬಲ ಅಭಿಪ್ರಾಯ ರೂಪಿತವಾಗಿದೆ. ನೆರೆಯ ಅಮೆರಿಕನ್ ಮಿತ್ರ ತುರ್ಕಿ ಸಹ ಬೆಂಬಲ ಕೊಡಲು ಹಿಂಜರಿಯುತ್ತಿದೆ.

ಹಗರಣಗಳು, ಚುನಾವಣೆಗಳು :

ಬುಶ್ ಇರಾಕ್ ಯುದ್ಧಕ್ಕೆ ಮನಸ್ಸು ಮಾಡಲು ಇನ್ನೊಂದು ಪ್ರಬಲ ಕಾರಣ ಹರಡುತ್ತಿರುವ ತೀವ್ರ ಆರ್ಥಿಕ ಹಗರಣಗಳಾದ ಅಧ್ಯಕ್ಷ -ಉಪಾಧ್ಯಕ್ಷ ಸೇರಿದಂತೆ ಹಲವು ಹಗರಣಗಳಲ್ಲಿ ಸರ್ಕಾರದ ಮುಖ್ಯಸ್ಥರು ಭಾಗಿಯಾಗಿರುವುದು) ಆಳವಾಗುತ್ತಿರುವ ತೀವ್ರ ಆರ್ಥಿಕ ಬಿಕ್ಕಟ್ಟು ಅಕ್ಟೋಬರ್‌ನಲ್ಲಿ ಬರುತ್ತಿರುವ ದ್ವೈವಾರ್ಷಿಕ ಪಾರ್ಲಿಮೆಂಟು ಚುನಾವಣೆಗಳು ಜನರ ಗಮನ ಬೇರೆಡೆಗೆ ಸೆಳೆಯಲು ಯುದ್ಧ ಅತ್ಯಂತ ಪರಿಣಾಮಕಾರಿ ಅಸ್ತ್ರ ಎಂದು ಅಮೇರಿಕದ ಅಧ್ಯಕ್ಷರುಗಳ ಅಗಾಧ ಅನುಭವ.

ಇವೆಲ್ಲದರಿಂದ ಇರಾಕ್ ಮೇಲೆ ಅಮೆರಿಕಾ ಯುದ್ಧ ಮಾಡುವ ಅಪಾಯ ತೀರಾ ಹೆಚ್ಚಿದೆ. ಜಗತ್ತಿನಾದ್ಯಂತ ಅದಕ್ಕೆ ತೀವ್ರ ಪ್ರತಿರೋಧ ಕಂಡುಬಂದಿದೆ. ಇದು ಪ್ರಬಲವಾಗಿ ಬುಶ್ ಕೈ ತಡೆಯುವ ಶಕ್ತಿಯಾಗಬೇಕಾದರೆ ಭಾರಿ ವಿಶ್ವವ್ಯಾಪಿ ಚಳುವಳಿ ರೂಪಿಸಬೇಕಾಗಿದೆ. ಭಾರತಕ್ಕೆ ಇರಾಕ್ ಜತೆ ವಿಶಿಷ್ಟ ಸಂಬಂಧ ಇದೆ. ಇರಾಕ್ ಮೇಲೆ ಯುದ್ಧ ಭಾರತದ ಹಿತಾಸಕ್ತಿ ಮೇಲೆ ನೇರ ಪರಿಣಾಮ ಬೀರಲಿದೆ. ಇದರಿಂದ ಭಾರತ ಸರ್ಕಾರ ಮತ್ತು ಜನತೆ ಬುಶ್ ಕೈ ತಡೆಯಲು ಶಕ್ತಿಮೀರಿ ಪ್ರಯತ್ನಿಸಬೇಕಿದೆ.

ಕಳಚಿ ಬಿದ್ದ ನಾಲ್ಕು ನೆಪಗಳು :

ನೆಪ 1 - ಸಾಮೂಹಿಕ ನರಮೇಧದ ಶಸ್ತ್ರಾಸ್ತ್ರಗಳು ಇರಾಕ್ ಬಳಿ ಇನ್ನೂ ಇದೆ.

ಇರಾಕ್‌ನ ಇಂತಹ ಶೇಕಡಾ 95ಕ್ಕೂ ಹೆಚ್ಚು ಶಸ್ತ್ರಾಸ್ತ್ರಗಳನ್ನು ವಿಶ್ವಸಂಸ್ಥೆ ಮೇಲ್ವಿಚಾರಣೆಯಲ್ಲಿ ನಾಶಮಾಡಲಾಗಿದೆ. 819 ದೂರಗಾಮೀ ಕ್ಷಪಣೆಗಳು 817 ಕ್ಷಿಪಣೆಗಳನ್ನು ನಾಶ ಮಾಡಲಾಗಿದೆ. ಜೈವಿಕ, ಅಣ್ವಸ್ತ್ರಗಳನ್ನು ನಾಶಮಾಡಲಾಗಿದೆ ಎಂದು ವಿಶ್ವಸಂಸ್ಥೆ ತಂಡದ ಮುಖ್ಯಸ್ಥರುಗಳೇ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಅದರಲ್ಲೂ ಇನ್ನೊಂದು ಬಾರಿ ಅಂತರ್ರಾಷ್ಟ್ರೀಯ ವೀಕ್ಷಕರಿಗೆ ಇರಾಕ್‌ಗೆ ಪ್ರವೇಶ ಮಾಡಲು ಅನುಮತಿ ಕೊಡಲು ತಯಾರು ಎಂದು ಸದ್ದಾಂ ಹುಸೇನ್ ಹೇಳಿರುವುದನ್ನು ಬುಶ್ ಮರೆಮಾಚುತ್ತಿದ್ದಾರೆ.

ನೆಪ 2 ಬಿನ್ ಲಾಡೆನ್‌ಗೆ ಇರಾಕ್ ಬೆಂಬಲ

ಅಮೇರಿಕಾದ ನ್ಯೂಯಾರ್ಕ್ ಟೈಮ್ಸ್ ಈ ಬಗ್ಗೆ ತೀವ್ರ ತನಿಖೆ ನಡೆಸಿದ್ದು ಇಂತಹ ಯಾವುದೇ ಸಂದರ್ಭ ಇಲ್ಲ ಎಂದು ಹೇಳಿದೆ. ಭಯೋತ್ಪಾದಕರಲ್ಲೊಬ್ಬರು ಮಹಮ್ಮದ್ ಅಲ್ಟಾ, ಇರಾಕಿ ಗೂಢಾಚಾರನನ್ನು ಚೆಕೋಸ್ಲಾವಕಿಯಾದಲ್ಲಿ ಭೇಟಿಯಾದ ಎಂಬ ಅಮೆರಿಕನ್ ಆಪಾದನೆಯನ್ನು ಚೆಕ್ ಸರ್ಕಾರ ತಳ್ಳಿ ಹಾಕಿದೆ. ಮಹಮ್ಮದ್ ಅಲ್ಟಾ ಯಾವಾಗಲೂ ಚೆಕ್‌ಗೆ ಬಂದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ನೆಪ 3 ಅಂತರ್ರಾಷ್ಟ್ರೀಯ ಕಾನೂನುಗಳ ಉಲ್ಲಂಘನೆ.

ಇರಾಕ್ ವಿಶ್ವಸಂಸ್ಥೆಯು , ಇತರ ಅಂತರ್ರಾಷ್ಟ್ರೀಯ ಸಂಘಟನೆಗಳು ವಿಧಿಸಿದ ನಿಯಮ ಷರತ್ತುಗಳನ್ನು ಉಲ್ಲಂಘಿಸಿಲ್ಲ. ಎಲ್ಲವನ್ನೂ ಪಾಲಿಸಿದೆ ತನ್ನ ಶಸ್ತ್ರಾಸ್ತ್ರಗಳ ನಾಶಕ್ಕೆ ಅನುವುಮಾಡಿಕೊಟ್ಟ ಏಕಮಾತ್ರ ದೇಶ ಇರಾಕ್.

ನೆಪ 4 ಪರಿಹಾರ ಇರಾಕಿ ಜನತೆಗೆ ಮುಟ್ಟುವದನ್ನು ತಡೆಯುತ್ತಿದೆ.

ಇದರಷ್ಟು ದೊಡ್ಡ ಹಸಿ ಸುಳ್ಳು ಬೇರೊಂದಿಲ್ಲ. ವಿಶ್ವಸಂಸ್ಥೆ ಇರಾಕಿ ಜನತೆಗೆ ಕೊಟ್ಟಿರುವ 5 ಶತಕೋಟಿ ಡಾಲರು ಪರಿಹಾರ ಸಾಮಗ್ರಿಗಳೂ ನೂರಾರು ನೆಪ ಹೂಡಿ ತಡೆಯುವುದು ಅಮೆರಿಕಾ-ಬ್ರಿಟನ್‌ಗಳು ಔಷಧಿಗಳು, ವೈದ್ಯಕೀಯ ಉಪಕರಣಗಳು ಇದರಲ್ಲಿ ಸೇರಿವೆ.

ಖಂಡಕರಿಂದ ಅಖಂಡ ಭಾರತ ಸಂಕಲ್ಪದ ನಾಟಕ

ನಿತ್ಯಾನಂದ ಸ್ವಾಮಿ

ಹಿಂದೂ ಜಾಗರಣ ವೇದಿಕೆ ಮತ್ತಿತರ ಸಂಘ ಪರಿವಾರದ ಸಂಘಟನೆಗಳಿಂದ ಕಳೆದ ಕೆಲವು ವರ್ಷಗಳಿಂದ ಆಗಸ್ಟ್ 14ರ ಮಧ್ಯರಾತ್ರಿ, 'ಅಖಂಡ ಭಾರತ ನಿರ್ಮಾಣ ಸಂಕಲ್ಪದಿನ' ಆಚರಿಸಲಾಗು ತ್ತಿದೆ. ಇದಕ್ಕಾಗಿ ಮನೆಮನೆಗಳಿಗೆ ಕೋಮುದ್ವೇಷ ವನ್ನು ಕಕ್ಕುವ ಕೇಸರಿ ಕರಪತ್ರಗಳನ್ನು ಹಂಚಲಾಗುತ್ತದೆ. ಆಸುಪಾಸಿನ ಮನೆಗಳಲ್ಲಿ ಮಲಗಿರುವವರ ನಿದ್ದೆಗೆ ಭಂಗವಾಗುವುದನ್ನು ಪರಿಗಣಿಸದೆ ಬಲವಂತದಿಂದ ಕರೆ ತಂದ ಮುಗ್ಧ ಯುವಕರ ಮುಂದೆ ಕರಿಯ ಟೋಪಿ ಧರಿಸಿ ದಾತನ ವೀರಾವೇಶದ ಭಾಷಣ ನಡೆಯುತ್ತಿದೆ. ನಮಗೆ ಸ್ವಾತಂತ್ರ್ಯ ದೊರಕಿದ್ದು ಆಗಸ್ಟ್ 14ರ ಮಧ್ಯರಾತ್ರಿ ಯಲ್ಲಿ ಆಗಿರುವುದರಿಂದ ನಾವು ಮಧ್ಯರಾತ್ರಿಯಲ್ಲೇ ಧ್ವಜಾರೋಹಣ ಮಾಡುತ್ತೇವೆ ಎಂದು ನಂಬಿಸಿ ಮುಸಲ್ಮಾನರ ಮತ್ತು ಇತರ ಮತೀಯ ಅಲ್ಪಸಂಖ್ಯಾತರ ವಿರುದ್ಧದ ಪ್ರಚೋದನಾಕಾರಿ ಭಾಷಣಗಳಿಗೆ ಇವರು ಜನರನ್ನು ಸೇರಿಸುತ್ತಾರೆ. ಮಧ್ಯರಾತ್ರಿಯ ಕತ್ತಲೆಯಲ್ಲಿ ಯಾರೂ ಯಾರಿಗೂ ಕಾಣಿಸದಿರುವಾಗ ಇವರುಗಳು ಬಾರತದ ಗಡಿಗಳನ್ನು ಪೂರ್ವಕ್ಕೆ ಬರ್ಮಾವನ್ನು ದಕ್ಷಿಣಕ್ಕೆ ಶ್ರೀಲಂಕಾವನ್ನು, ಪಶ್ಚಿಮಕ್ಕೆ ಪಾಕಿಸ್ತಾನ ಅಫಘಾನಿಸ್ತಾನಗಳನ್ನು ಒಳಗೊಳ್ಳುವವರೆಗೆ ವಿಸ್ತರಿಸುವ ಪ್ರತಿಜ್ಞೆಮಾಡುತ್ತಾರೆ.

ಅಖಂಡ ಭಾರತ ನಿರ್ಮಾಣದ ಸಂಕಲ್ಪ ಮಾಡುವ ಇವರು ಅದಕ್ಕೂ ಮೊದಲು ದೇಶ ವಿಭಜನೆಯ ನಂತರ ಉಳಿದಿರುವ ಭಾರತವನ್ನು ಒಂದಾಗಿ ಉಳಿಸುವ ಯೋಚನೆ ಮಾಡಬೇಕು. ದೇಶದ ವಿಭಜನೆಯನ್ನು ಒಂದು ದೊಡ್ಡ ದುರಂತವೆಂದು ಇವರು ಹೇಳುವುದು ನಿಜವಾದರೆ ದೇಶವನ್ನು ಮತ್ತೆ ವಿಭಜನೆಯತ್ತ ತಳ್ಳುವ ದುಸ್ಸಾಹಸವನ್ನು ಇವರು ಕೈಬಿಡಬೇಕು. ಗುಜರಾತಿನಲ್ಲಿ ಇವರು ಮಾಡಿದ ಪ್ರಯೋಗವನ್ನು ದೇಶದ ಬೇರೆ ಭಾಗಗಳಲ್ಲೂ ಸಹ ಮಾಡಲು ಹೊರಟರೆ ಭಾರತ ಅಖಂಡವಾಗಿ ಉಳಿಯಲು ಹೇಗೆ ಸಾಧ್ಯ? ಅಲ್ಪಸಂಖ್ಯಾತ ಮುಸಲ್ಮಾನರ ಆಸ್ತಿಪಾಸ್ತಿಗಳಿಗೆ ಈ ದೇಶದಲ್ಲಿ ರಕ್ಷಣೆ ಇಲ್ಲವೆಂದಾದರೆ ಅವರಿಗೆ ಈ ದೇಶದ ಬಗ್ಗೆ ಹೇಗೆ ತಾನೆ ಗೌರವವಿರಲು ಸಾಧ್ಯ? ಕ್ರಿಶ್ಚಿಯನ್ ಪಾದ್ರಿ ಗಳನ್ನು ಸಾಯಿಸಿ ಅವರ ಚರ್ಚುಗಳನ್ನು ಕೆಡವಿಹಾಕಿದರೆ ಈಶಾನ್ಯ ಭಾರತ ನಮ್ಮೊಂದಿಗೆ ಉಳಿಯಲು ಸಾಧ್ಯವೆ? ಅಲ್ಪಸಂಖ್ಯಾತರು ದೇಶದ ಮುಖ್ಯವಾಹಿನಿಯಲ್ಲಿ ಬರುವಂತಾಗಬೇಕು ಎಂದು ಉಪದೇಶಮಾಡುವವರು ಅಂತಹ ವಾತಾವರಣ ವನ್ನು ಹುಟ್ಟುಹಾಕಲು ಏನು ಮಾಡುತ್ತಾರೆ?

ಮತ ಧರ್ಮ ಜನತೆಯನ್ನು ಒಂದುಗೂಡಿಸು ವುದಿಲ್ಲ. ಇದು ಜಾಗತಿಕ



ಅನುಭವದಿಂದ ಸಾಬೀತಾಗಿದೆ. ಕ್ರಿಶ್ಚಿಯನ್ನರು ತಮ್ಮ ತಮ್ಮೊಳಗೆ ಕ್ಯಾಥೋಲಿಕರು ಮತ್ತು ಪ್ರೊಟೆಸ್ಟಾಂಟರೆಂದು ಕಡಿದಾಡುತ್ತಾರೆ. ಮುಸಲ್ಮಾನರು ಸಿಯಾ, ಸುನ್ನಿಗಳೆಂದುಹೊಡೆದಾಡುತ್ತಾರೆ. ಹಿಂದುಗಳಲ್ಲಿ ಸ್ಪೃಶ್ಯರು ಅಸ್ಪೃಶ್ಯರೆಂದು ಕಾದಾಡುತ್ತಾರೆ. ಎಂದೂ ಯಾರು ಕಾಣದಿರುವ ದೇವರ ಬಗ್ಗೆ ಒಂದೇ ಅಭಿಪ್ರಾಯಕ್ಕೆ ಬರುವುದಂತೂ ಸಾಧ್ಯವಿಲ್ಲದ ವಿಷಯ: ಒಮ್ಮತಕ್ಕೆ ಬರಲಾಗದ ವಿಷಯವು ಜನತೆಯನ್ನು ಒಂದುಗೂಡಿಸದು. ಆದ್ದರಿಂದ ಒಂದು ಮತ ಧರ್ಮದ ಜನ ಒಂದು ರಾಷ್ಟ್ರೀಯತೆ ಆಗಲಾರರು. ಒಂದು ಪ್ರದೇಶದಲ್ಲಿ ವಾಸವಿರುವ ಜನ ಸಮುದಾಯ ಒಂದು ಬಾಷೆ, ಒಂದು ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಾಗ ಅವರಲ್ಲಿ ನಾವೆಲ್ಲ ಒಂದು ಎಂಬ ಭಾವನೆ ಬೆಳೆಯುತ್ತದೆ. ಇದನ್ನೇ ರಾಷ್ಟ್ರೀಯತೆ ಎನ್ನುವುದು. ಧಾರ್ಮಿಕ ನಂಬಿಕೆಗಳು ಅತ್ಯಂತ ವ್ಯಕ್ತಿಗತವಾಗಿರುವುದರಿಂದ ಒಂದೇ ರಾಷ್ಟ್ರೀಯತೆಯನ್ನು ಅಭಿವೃದ್ಧಿ ಪಡಿಸಿಕೊಂಡಿರುವ ಜನಸಮುದಾಯದೊಳಗೆ ವಿಭಿನ್ನ ಮತ ಧರ್ಮಗಳು ಅಸ್ತಿತ್ವದಲ್ಲಿರಬಹುದು.

ಮಧ್ಯರಾತ್ರಿಯ ಕತ್ತಲೆಯಲ್ಲಿ ಯಾರೂ ಯಾರಿಗೂ ಕಾಣಿಸದಿರುವಾಗ ಇವರುಗಳು ಬಾರತದ ಗಡಿಗಳನ್ನು ಪೂರ್ವಕ್ಕೆ ಬರ್ಮಾವನ್ನು ದಕ್ಷಿಣಕ್ಕೆ ಶ್ರೀಲಂಕಾವನ್ನು, ಪಶ್ಚಿಮಕ್ಕೆ ಪಾಕಿಸ್ತಾನ ಅಫಘಾನಿಸ್ತಾನಗಳನ್ನು ಒಳಗೊಳ್ಳುವವರೆಗೆ ವಿಸ್ತರಿಸುವ ಪ್ರತಿಜ್ಞೆಮಾಡುತ್ತಾರೆ.

ಭಾರತ ಅನೇಕ ರಾಷ್ಟ್ರೀಯತೆಗಳನ್ನೊಳಗೊಂಡ ಒಂದು ದೇಶ. ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಈ ಎಲ್ಲಾ ರಾಷ್ಟ್ರೀಯತೆಗಳ ಸಮಾಗಮವಾಗಿ ವೈವಿಧ್ಯತೆಯಲ್ಲಿ ಏಕತೆಯನ್ನು ಸಾರುವ ಒಂದು ಸುಂದರ ರಾಷ್ಟ್ರ ನಿರ್ಮಾಣವಾಗಿದೆ. ದೇಶದ ಸ್ವಾತಂತ್ರ್ಯ ಚಳುವಳಿಯ ಹತ್ತಿರಕ್ಕೂ ಸುಳಿಯದ ಈ ಸಂಘಿಗಳು ಈ ಸೌಂದರ್ಯವನ್ನು ಮನಗಾಣಲಾರರು. ದೇಶದ ವಿಭಜನೆಯಾಗದೆ ಇದ್ದಿದ್ದರೆ ಆ ಸೌಂದರ್ಯ ಇನ್ನೂ ಹೆಚ್ಚಾಗಿರುತ್ತಿತ್ತು. ಆದರೆ ಸಾಮ್ರಾಜ್ಯಶಾಹಿಗಳು ಸ್ವತಂತ್ರ ಭಾರತ ಅಷ್ಟೊಂದು ಬಲಿಷ್ಠ ರಾಷ್ಟ್ರವಾಗಿ ತಲೆಯೆತ್ತುವುದನ್ನು ಸಹಿಸಲಿಲ್ಲ. ದೇಶದ ವಿಭಜನೆ ದೇಶದ ಸ್ವಾತಂತ್ರ್ಯಕ್ಕಾಗಿ ನಾವು ತೆತ್ತಬೆಲೆ. ಇದರ ಜೊತೆಯಲ್ಲಿ ಬ್ರಿಟಿಷರು ಭಾರತದ ಹಿಂದುಗಳ ಮತ್ತು ಮುಸಲ್ಮಾನರ ನಡುವೆ ಬಿತ್ತಿದ್ದ ಸಂಶಯದ ಬೀಜ ಅಷ್ಟರೊಳಗೆ ಮರವಾಗಿ ಬೆಳೆದಿತ್ತು. ಹಿಂದುಗಳೇ ಬಹುಸಂಖ್ಯಾತರಾಗಿರುವ ಸ್ವತಂತ್ರ ಭಾರತದಲ್ಲಿ ತಮಗೆ ರಕ್ಷಣೆ ದೊರೆಯಲಿಕ್ಕಿಲ್ಲ ಎಂಬ ಸಂದೇಹ ಮುಸಲ್ಮಾನ ಮುಖಂಡರಲ್ಲಿ ಪ್ರತ್ಯೇಕ ರಾಷ್ಟ್ರದ ಕಲ್ಪನೆಯನ್ನು ಹುಟ್ಟುಹಾಕಿತು. ಒಂದು ಹಂತದಲ್ಲಿ ಹಿರಿಯಣ್ಣನಂತಿದ್ದ ಹಿಂದುಗಳಿಂದ ಮುಸಲ್ಮಾನರಿಗೆ ಆ ಭರವಸೆ ದೊರೆತಿದ್ದರೆ ದೇ[...] ವಿಭಜನೆಯನ್ನು ತಪ್ಪಿಸಬಹುದಾಗಿತ್ತು. ದೇಶ ವಿಭಜನೆಯಾಗಿ ಪಾಕಿಸ್ತಾನ ಎಂಬ ಇಸ್ಲಾಂ ರಾಷ್ಟ್ರ ತಲೆ ಎತ್ತುವಂತಾಯಿತು. ಭಾರತವ[...] ಹಿಂದು ರಾಷ್ಟ್ರ ಎಂದು ಘೋಷಿಸುವ ಪ್ರಯತ್ನ[...] ಅಂದು ಜನತೆಯ, ರಾಷ್ಟ್ರೀಯ ಆಂದೋಲನದ ಮುಖಂಡರ ಬೆಂಬಲ ದೊರೆಯಲಿಲ್ಲ. ಅಂದಿನಿಂದ ಒಳಗೊಳಗೆ ಕತ್ತಿ ಮಸಿಯುತ್ತಾ ಇದ್ದ ಹಿಂದುತ್ವವಾದಿಗಳು ಜನತೆಯ ಮುಗ್ಧತೆಯನ್ನು ಮೌಢ್ಯವನ್ನು ಬಳಸಿಕೊಂಡು ಹಿಂದುರಾಷ್ಟ್ರ ಪ್ರತಿಪಾದನೆಗೆ ಹೊರಟಿದ್ದಾರೆ. ಪಾಕಿಸ್ತಾನ ತಪ್ಪುಮಾಡಿದೆ ಎಂದು ಹೇಳುವವ[...] ಭಾರತದಲ್ಲಿ ಅದೇ ತಪ್ಪನ್ನು ಮಾಡಲು ಹೊರಟಿದ್ದಾರೆ. ಈ ಬೆಳವಣಿಗೆಗಳ ಲಾಭ ಪಡೆಯಲು ಸಾಮ್ರಾಜ್ಯವಾದಿ ಶಕ್ತಿಗಳು, ಮುಖ್ಯವಾಗಿ ಅಮೇರಿಕನ್ ಸಾಮ್ರಾಜ್ಯವಾದಿಗಳು ಹೊಂಚುಹಾಕುತ್ತಿದ್ದಾರೆ.

ದೇಶದ ಅಖಂಡತೆ ಬಗ್ಗೆ ಮಾತನಾಡುವ[...] ಇವರು ಕಾಶ್ಮೀರವನ್ನು ಧರ್ಮದ ಆಧಾರದಲ್ಲಿ [...] ತುಂಡು ಮಾಡಲು ಯೋಚಿಸುತ್ತಿದ್ದಾರೆ. ಅಮೇರಿಕ ಜೋರಾಗಿ ಒಂದು ಧಮ್ಕಿ ಹಾಕಿ[...] ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಒಪ್ಪಿಸಿ ಕಾಲ್ಕೀಳುತ್ತಾರೆ. ದೇಶದ ಗಡಿಗಳನ್ನು ದೇಶದ[...] ಐಕ್ಯತೆ ಸಮಗ್ರತೆಯನ್ನು ಕಾಪಾಡಲು ವಿಫಲರಾಗಿರುವ ಇವರ ಅಖಂಡ ಭಾರತ ನಿರ್ಮಾಣ ಸಂಕಲ್ಪದಲ್ಲಿ ಎಲ್ಲಿದೆ ಹುರುಳು?

ದೇವದಾಸಿಯರ ಆಸ್ತಿಗೆ ಲಗ್ಗೆ ಇಟ್ಟ ಭೂಮಾಲೀಕರು

ಪುಟ 4 ರಿಂದ

ಕೈತಪ್ಪಿ ಹೋಗಬಹುದೆಂದು ದಿಗಿಲು ಬಿದ್ದು ಈಗ ಹೊಸ ಕಥೆ ಹೆಣೆಯಲಾರಂಭಿಸಿದ್ದಾರೆ.

ಬಾಮಿರೆಡ್ಡಿ ಕ್ಯಾಂಪಿನ ಭೂಮಾಲಿಕ ಮತ್ತು ಭೂಮಂಜೂರಾತಿ ಸಮಿತಿ ಸದಸ್ಯ (ಎಂತಹ ಸದಸ್ಯ ನೋಡಿ) ಸತ್ಯನಾರಾಯಣ ಇಲ್ಲಿನ ಶಾಸಕನ ಪಕ್ಕ ಚೇಲಾ, ತಮ್ಮ ಭೂಮಿಯ ಪಕ್ಕದಲ್ಲೇ ಈ ದೇವದಾಸಿಯರಿಗೆ ಭೂಮಿ ಸಿಗುವುದನ್ನು ಸಹಿಸದ ಈತ ಭೂಮಾಲಿಕರನ್ನೆಲ್ಲಾ ಒಟ್ಟುಗೂಡಿಸಿ, ಈ ಜಾಗದಲ್ಲಿ ಹಿಂದೆ ಸ್ಮಶಾನ (ರುದ್ರಭೂಮಿ) ಇತ್ತೆಂದು ಅದು ಊರಿಗೆ ಸೇರಬೇಕೆಂದು ಹೊಸ ಕಥೆ ಹೆಣೆದು ಕೃಷಿ ಕಾರ್ಮಿಕರ ಸಂಘಕ್ಕೆ ಪ್ರತಿಯಾಗಿ ಧರಣಿ ನಡೆಸಿದರು.

ದೇಶಕ್ಕೆ ಸ್ವತಂತ್ರ ಬಂದು 54 ವರ್ಷಗಳು ಕಳೆದರೂ ಕೇವಲ 20 ಗುಂಟೆ ಜಮೀನನ್ನು ಬಡದೇವದಾಸಿಯರು ಹೊಂದುವುದನ್ನು ಸಹಿಸದ ಈ ಭೂಮಾಲೀಕರ ಪಡೆ, ಇಂತಹ ಖದೀಮರುಗಳಿಗೆ ಅಭಯಹಸ್ತ ನೀಡುವ ಕಾಂಗ್ರೆಸ್ ಪಕ್ಷದ ಶಾಸಕ ಶ್ರೀರಂಗದೇವರಾಯನಂತಹವರು ಈ ದೇಶದಲ್ಲಿ ಬಡ ಜನತೆಗೆ ಸಿಕ್ಕಿರುವ ಸ್ವಾತಂತ್ರ್ಯ ಮತ್ತು ನ್ಯಾಯಸಮಾನತೆ, ನಾಶ ಮಾಡುವಲ್ಲಿ ಸಾಂಕೇತಿಕ ಕುರುಹುಗಳಾಗಿ ನಿಲ್ಲುತ್ತಾರೆ. ತಾವು ಆನೆಗುಂದಿ ಅರಸು ಮನೆತನದ ವಂಶಸ್ಥನೆಂದು ಸದಾ ಹೇಳಿಕೊಳ್ಳುವ ಈ ಪಾಳೇಗಾರಿ ಶಾಸಕನ ವ[...] ಒಬ್ಬ ಜನಪ್ರತಿನಿಧಿಯಾಗಿ ಬಗೆದ ದ್ರೋಹವಾ[...]

ಧರಣಿ ಕೂರುತ್ತೇನೆಂದ ಶಾಸಕ

ಭೂಮಾಲಿಕರ ಸೇವೆಗೈಯ್ಯುವ ಇಲ್ಲಿ[...] ಶಾಸಕ ಶ್ರೀರಂಗದೇವರಾಯ ಅಧಿಕಾರಿಗ[...] ಹೇಳಿದ್ದೇನು ಗೊತ್ತೆ? ನೀವೇನಾದರೂ [...] ದೇವದಾಸಿಯರಿಗೆ ಭೂಮಿಯನ್ನು ಹಸ್ತಾಂತರಿ[...] ನಾನು ಮುಖ್ಯಮಂತ್ರಿಗಳ ಮನೆ ಮುಂದೆ ಧ[...] ಕೂಡ್ತೀನಿ ಎಂದು ಅಧಿಕಾರಿಗಳಿಗೆ ಧ[...] ಹಾಕಿದ್ದಾನೆ. ಜನರ ಸಮಸ್ಯೆ ಬಗ್ಗೆ ಕಿಂಚಿ[...] ಯೋಚಿಸದ ಈ ಶಾಸಕ ಬಡ ದೇವದಾಸಿಯ[...] ಕೇವಲ 20 ಗುಂಟೆ ಸರ್ಕಾರಿ ಜಮೀ[...] ಮಂಜೂರಾಗಿರುವುದನ್ನು ವಿರೋ[...] ಮುಖ್ಯಮಂತ್ರಿ ಮನೆ ಮುಂದೆ ಧ[...] ಕೂರುತ್ತೇನೆಂದು ಹೇಳುವ ಈತನ ಮಾ[...] ಮುಖ್ಯಮಂತ್ರಿಗಳು ಏನು ಉತ್ತರ ಹೇಳ್ತಾರೆ [...] ಕಾದು ನೋಡಬೇಕಿದೆ. ಜನರಿಂದ ಆರಿಸಲ್ಪಟ್ಟ [...] ಶಾಸಕನೇ ಭೂಮಾಲಿಕರ ಪರ[...] ನಿಲ್ಲುತ್ತಾನೆಂದರೆ ಈ ಜಾಗದಲ್ಲಿ ಭೂಮಾ[...] ದರ್ಪ ಮತ್ತು ಅವರು - ಅಧಿಕಾರಿ[...] ರಾಜಕಾರಣಿಗಳ ನಡುವಿನ ಅಕ್ರಮ [...] ಎಲ್ಲಿಯವರಿಗೆ ಬೆಳೆದುನಿಂತಿದೆ ಎಂಬು[...] ಅರಿಯಬಹುದಾಗಿದೆ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH